ಬೆಂಗಳೂರು
ಗುರುವಾರ, 21 ಮೇ 2026
ಸಂಪುಟ 33, ಸಂಚಿಕೆ 200, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

₹19 ಕೋಟಿ ಮೌಲ್ಯದ ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ

• ಪುಟ ೫

ಸನಾತನ ಧರ್ಮ ಸಂಘಕ್ಕೆ ಮಾನ್ಯತೆ | ೦೫

ಸಿಲ್ವರ್‌ಲೈನ್‌ಗೆ ಕೇರಳ ತಡೆ | ೦೫

ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಉಭಯ ರಾಷ್ಟ್ರಗಳ ಮೈತ್ರಿ

ಭಾರತ-ಇಟಲಿ ಬಲಿಷ್ಠ ಬಂಧ



- ವೆಲ್ಕಮ್ ಟು ರೋಮ್ ಮೈ ಫ್ರೆಂಡ್ ಎಂದು ಸ್ವಾಗತ ಕೋರಿದ ಮೆಲೋನಿ
- ಮೆಲೋನಿಗೆ ಮೆಲೋಡಿ ಟಾಫಿಗಳ ಪ್ಯಾಕೆಟ್ ಗಿಫ್ಟ್ ಕೊಟ್ಟ ಮೋದಿ
- ರೋಮ್‌ಗೆ ಆಗಮಿಸಿದ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ

• ರೋಮ್: ಪ್ರಧಾನಿ ನರೇಂದ್ರ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆಯ ಬೆನ್ನಲ್ಲೇ



ಭಾರತ ಮತ್ತು ಇಟಲಿ ದೇಶಗಳು ತಮ್ಮ ರಾಜತಾಂತ್ರಿಕ ಬಾಂಧವ್ಯವನ್ನು ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಕೊಂಡೊಯ್ಯಲು ನಿರ್ಧರಿಸಿವೆ.

ತಮ್ಮ ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ ರೋಮ್‌ಗೆ ಆಗಮಿಸಿದ ಪ್ರಧಾನಿ ಮೋದಿಗೆ ಭವ್ಯ ಮಿಲಿಟರಿ ಗೌರವದ ಸ್ವಾಗತ ಸಿಕ್ಕಿತು. ಇದರ ಬೆನ್ನಲ್ಲೇ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ವ್ಯಾಪಾರ, ಹೂಡಿಕೆ ಹಾಗೂ ನೂತನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸಲು ಉಭಯ ನಾಯಕರು ಒಪ್ಪಂದ ಮಾಡಿಕೊಂಡರು. ➡ಪುಟ ೭

ಸಿಎಂ ಸಿದ್ದರಾಮಯ್ಯ ಮಾಹಿತಿ

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು



• ಬೆಂಗಳೂರು: ಜೂ.1ರಂದು ಶಿವಮೊಗ್ಗದಲ್ಲಿ ಕೆಪಿಎಸ್ ಯೋಜನೆಗೆ ಅಧಿಕೃತ ಚಾಲನೆ ನೀಡುತ್ತಿದ್ದು, ಒಂದು ಕೆಪಿಎಸ್‌ನಲ್ಲಿ ಸುಮಾರು 1,200 ಮಕ್ಕಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜೂ.1ರಂದು ಶಿವಮೊಗ್ಗದಲ್ಲಿ ಚಾಲನೆ

ಗೃಹ ಕಚೇರಿ ಕೃಷ್ಣಾದಲ್ಲಿ ಬುಧವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕೆಪಿಎಸ್ ಶಾಲೆಯಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಒಂದೇ ಆವರಣದಲ್ಲಿ ಶಿಕ್ಷಣ ದೊರೆಯಲಿದೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ 800 ಕೆಪಿಎಸ್‌ಗಳು ಸಂಪೂರ್ಣವಾಗಿ ಸಿದ್ಧವಾಗಬೇಕು ಎಂದು ಸಿಎಂ ಸೂಚಿಸಿದರು.

ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಯೋಜನೆಯನ್ನು ವೇಗವಾಗಿ ಜಾರಿಗೊಳಿಸಬೇಕು. ➡ಪುಟ ೭

ಕಲ್ಯಾಣ ಕರ್ನಾಟಕದಲ್ಲಿ ಉತ್ತಮ ಸಾಧನೆ

ರಾಜ್ಯಾದ್ಯಂತ ಪೋಷಕರು, ಶಿಕ್ಷಕರ ಸಭೆ ನಡೆಸುವುದು, ಅತಿಥಿ ಶಿಕ್ಷಕರ ನೇಮಕ, ಪಠ್ಯ ಆಧಾರಿತ ಅಧ್ಯಯನ ಕ್ರಮ ಜಾರಿ, ಪೂರ್ವಭಾವಿ ಪರೀಕ್ಷೆ ಆಯೋಜನೆ, ಶಿಕ್ಷಕರಿಗೆ ನಿರಂತರ ತರಬೇತಿ ಉತ್ತಮ ಫಲಿತಾಂಶಕ್ಕೆ ಕಾರಣವಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಪರಿಣಾಮ ಉತ್ತಮ ಸಾಧನೆ ಸಾಧ್ಯವಾಗಿದೆ ಎಂದು ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಮತ್ತೆ ಗಡುವು ಮುಂದೂಡಿಕೆ ಇಲ್ಲ: ಸುಪ್ರೀಂ

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

- ಜಿಬಿಎ ಪಂಚಪಾಲಿಕೆ ಚುನಾವಣೆಗೆ ಆ.31ರವರೆಗೆ ಗಡುವು ವಿಸ್ತರಣೆ
- ಈ ಹಿಂದೆ ಜೂ.30ರವರೆಗೆ ಸಮಯ ನೀಡಿದ್ದ ಸುಪ್ರೀಂಕೋರ್ಟ್
- ಸರ್ಕಾರ, ಚುನಾವಣಾ ಆಯೋಗ ಮನವಿ ಹಿನ್ನೆಲೆ ಸಮಯಾವಕಾಶ
- ಅಂತಿಮ ಗಡುವು ಎಂದು ಎಚ್ಚರಿಸಿದ ಸರ್ವೋಚ್ಚ ನ್ಯಾಯಾಲಯ

• ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ಪಾಲಿಕೆಗಳ ಚುನಾವಣೆಯನ್ನು ಆಗಸ್ಟ್ 31ರೊಳಗೆ ನಡೆಸುವಂತೆ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದು ಕೊನೆಯ ಅವಕಾಶ ಎಂದು ಖಡಕ್ ಸೂಚನೆ



ನೀಡಿರುವ ಸುಪ್ರೀಂ ಕೋರ್ಟ್, ಚುನಾವಣೆ ಮುಂದೂಡುವ ಸಂಬಂಧ ಸಲ್ಲಿಕೆಯಾಗಿದ್ದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದೆ.

ಚುನಾವಣೆ ಮುಂದೂಡಲು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ಬುಧವಾರ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರ ತ್ರಿಸದಸ್ಯ ಪೀಠ ನಡೆಸಿತು. ಈ ಪ್ರಕರಣ ವನ್ನು ನೋಡಿದರೆ ರಾಜ್ಯ ಸರ್ಕಾರವು ಚುನಾವಣೆ ವಿಳಂಬಗೊಳಿಸಲು ಯತ್ನಿಸುತ್ತಿರುವಂತೆ ಕಾಣುತ್ತಿದೆ ಎಂದ ಸರ್ವೋಚ್ಚ ನ್ಯಾಯಾಲಯ, ಎಸ್‌ಐಆರ್, ಜನಗಣತಿ ಹಿನ್ನೆಲೆ ಆ.31 ವರೆಗೆ ಸಮಯ ವಿಸ್ತರಿಸಲಾಗಿದೆ ಎಂದು ಹೇಳಿದೆ. ➡ಪುಟ ೭

ಇರಾನ್ ವಿರುದ್ಧದ ಯುದ್ಧದಲ್ಲಿ ಭಾರೀ ನಷ್ಟ

ಯುಎಸ್ 42 ಯುದ್ಧ ವಿಮಾನಗಳು ನಾಶ!

• ವಾಷಿಂಗ್ಟನ್ ಡಿಸಿ: ಇರಾನ್‌ವಿರುದ್ಧದ ಸಂಘರ್ಷದಲ್ಲಿ 42 ಯುದ್ಧ ವಿಮಾನ ಸೇರಿ ಯುನೈಟೆಡ್ ಸ್ಟೇಟ್ಸ್‌ಗೆ ಭಾರೀ ನಷ್ಟ ಉಂಟಾಗಿದೆ ಎಂಬ ಮಾಹಿತಿ ಅಮೆರಿಕ ಕಾಂಗ್ರೆಸ್ ವರದಿಯಿಂದ ಬಹಿರಂಗವಾಗಿದೆ. ಆಪರೇಷನ್ ಎಪಿಕ್ ಫ್ಯೂರಿ ಹೆಸರಿನಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್



ಸುಮಾರು 40 ದಿನ ಜಂಟಿ ದಾಳಿ ನಡೆಸಿದ ವೇಳೆ ಒಟ್ಟು 42 ಯುದ್ಧ ವಿಮಾನಗಳು ಹಾಗೂ ಡ್ರೋನ್‌ಗಳು ನಾಶವಾಗಿವೆ ಅಥವಾ ಗಂಭೀರ ಹಾನಿಗೊಳಗಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಷ್ಟಕ್ಕೊಳಗಾದ ವಿಮಾನಗಳಲ್ಲಿ 4 ಎಫ್-15ಇ ಸ್ಟ್ರೈಕ್ ಈಗಲ್ ಯುದ್ಧ ವಿಮಾನಗಳು, 1 ಎಫ್-35ಎ ಲೈಟ್ನಿಂಗ್-II, ಒಂದು ಎ-10 ಥಂಡರ್‌ಬೋಲ್ಟ್-II. ➡ಪುಟ ೭

ಮೇ 23ಕ್ಕೆ ಬೆಂಗಳೂರಿಗೆ ನಿತಿನ್

• ಬೆಂಗಳೂರು: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ



ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ. ಅವರು ಮೇ 23ರಂದು ರಾತ್ರಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. • ವಿವರ ಪುಟ ೨

ರಾಜ್ಯದಲ್ಲಿ ₹6 ಸಾವಿರ ಕೋಟಿ ಹೂಡಿಕೆ: ಎಂ.ಬಿ. ಪಾಟೀಲ




• **ಬೆಂಗಳೂರು:** ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಬೆಂಗಳೂರು ಮೂಲದ ಆ್ಯಕ್ಸಿಸ್ಕೇಡ್ಸ್ ಏರೋಸ್ಪೇಸ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ರಾಜ್ಯದಲ್ಲಿ 6 ಸಾವಿರ ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಗೆ ಮುಂದೆ ಬಂದಿದೆ. 200 ಎಕರೆ ಪ್ರದೇಶದಲ್ಲಿ ವೈಮಾಂತರಿಕ್ಷ, ರಕ್ಷಣೆ, ಸೆಮಿಕಂಡಕ್ಟರ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ನಾವೀನ್ಯತೆ ಕ್ಷೇತ್ರಗಳಲ್ಲಿ ಉತ್ಪಾದನೆ, ಪರೀಕ್ಷೆ, ನಿರ್ವಹಣೆಯ ಸಮಗ್ರ ಕೇಂದ್ರ ಸ್ಥಾಪಿಸುವುದು ಆ್ಯಕ್ಸಿಸ್ಕೇಡ್ಸ್ ಏರೋಸ್ಪೇಸ್ ಮುಖ್ಯ ಉದ್ದೇಶವಾಗಿದೆ.

ಬುಧವಾರ ಖನಿಜ ಭವನದಲ್ಲಿ ಕಂಪನಿಯ ಉನ್ನತಾಧಿಕಾರಿಗಳ ಜೊತೆಗೆ ನಡೆದ ವಿಸ್ತೃತ ಸಮಾಲೋಚನೆಯ ನಂತರ ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದ್ದು, ಕಂಪನಿಯು ಹಂತ ಹಂತವಾಗಿ ಒಟ್ಟು 6 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದ ರಾಜ್ಯದಲ್ಲಿ ಪ್ರತ್ಯಕ್ಷವಾಗಿ 20 ಸಾವಿರ ಹಾಗೂ ಪರೋಕ್ಷವಾಗಿ 54 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ಜಾಗತಿಕ ಪಾಲುದಾರಿಕೆಯಡಿ ದೇಶೀಯವಾಗಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಲಿದೆ ಎಂದು ತಿಳಿಸಿದರು.

ಕ್ಷಿಪಣಿ ತಯಾರಿಕೆಯ ಪೂರಕ ಸೌಲಭ್ಯ, ರೇಡಾರ್-ಸಂವೇದಕ, ಯುದ್ಧ ವಿಮಾನಗಳ ದುರಸ್ತಿ-ನಿರ್ವಹಣೆ ಸೌಲಭ್ಯ (ಎಂಆರ್‌ಒ) ಸೇರಿದಂತೆ ವೈಮಾಂತರಿಕ್ಷ ಹಾಗೂ ರಕ್ಷಣಾ ವಲಯದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಂಪನಿ ಉದ್ದೇಶಿಸಿದೆ. ಮೊದಲ ಹಂತದಲ್ಲಿ 1,290 ಕೋಟಿ ರೂ., 2ನೆ ಹಂತದಲ್ಲಿ 2,898 ಕೋಟಿ ರೂ. ಮತ್ತು 3ನೇ ಹಂತದಲ್ಲಿ 1,512 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಸಚಿವರು ವಿವರಿಸಿದರು. ಈ ಯೋಜನೆ ಕಾರ್ಯಗತಗೊಳಿಸಲು ಕಂಪನಿಯು ದೇವನಹಳ್ಳಿ ಬಳಿ ಭೂಮಿ ಒದಗಿಸಲು ಮನವಿ ಮಾಡಿಕೊಂಡಿದೆ. 1.8 ಕಿ.ಮೀ ಉದ್ದದ ರನ್ ವೇ ನಿರ್ಮಾಣದ ಉದ್ದೇಶ ಕೂಡ ಇದೆ ಎಂದು ಕಂಪನಿ ಹೇಳಿದೆ ಎಂದು ತಿಳಿಸಿದರು.

ಚೆಕ್ ವಿತರಣೆ



ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾದ 6 ಕೋಟಿ ರೂ.ಗಳ ಚೆಕ್ಕನ್ನು ಮಂಡಳಿಯ ಅಧ್ಯಕ್ಷ ಶಾಸಕ ನರೇಂದ್ರ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಕಾವೇರಿ ನಿವಾಸದಲ್ಲಿ ಹಸ್ತಾಂತರಿಸಿದರು. ಪರಿಸರ ಮತ್ತು ಅರಣ್ಯ ಸಚಿವ ಈಶ್ವರ ಖಂಡ್ರೆ, ಸದಸ್ಯ ಕಾರ್ಯದರ್ಶಿ ಆರ್.ಗೋಕುಲ, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಫಾರಿಗೆ ಸುರಕ್ಷಿತ ಬಸ್ ಬಳಕೆ

• **ಬೆಂಗಳೂರು:** ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳ ಸಫಾರಿಯಲ್ಲಿ ತೆರೆದ ಕ್ಯಾಂಪರ್ ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.

ದುಬಾರೆ ಆನೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಅರಣ್ಯ ಸಚಿವರು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸ್ಪಷ್ಟ ನಿರ್ದೇಶನ ಕೊಟ್ಟಿದ್ದಾರೆ. ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ (ಕ್ಯಾತದೇವರ ಗುಡಿ) ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಕಾನನಗಳಲ್ಲಿ ಸಫಾರಿ ನಡೆಯುತ್ತಿದೆ. ರಾಜ್ಯದ ಮೂಲೆಮೂಲೆಗಳಿಂದ ಅಷ್ಟೇ ಅಲ್ಲದೆ, ದೇಶ-ವಿದೇಶಗಳಿಂದಲೂ ಪ್ರವಾಸಿಗರು, ವನ್ಯಜೀವಿ ಪ್ರಿಯರು ಇಲ್ಲಿಗೆ ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆಗಳು, ಹುಲಿಗಳು ಸೇರಿದಂತೆ ಯಾವುದೇ ವನ್ಯಮೃಗಗಳು ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆಗಳು ಸಂಭವಿಸಿಲ್ಲ, ಆದಾಗ್ಯೂ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ಸೂಚನೆಯಲ್ಲಿ ತಿಳಿಸಿದ್ದಾರೆ.

ಸಫಾರಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಇನ್ನು ಮುಂದೆ ತೆರೆದ ಕ್ಯಾಂಪರ್ ವಾಹನಗಳ ಬದಲಿಗೆ ಸಂಪೂರ್ಣ ಸುರಕ್ಷಿತವಾದ ಬಸ್ ಸಫಾರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಾಲಿ ಬಳಕೆಯಲ್ಲಿರುವ ಕ್ಯಾಂಪರ್‌ಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿಗಳನ್ನು ಅಥವಾ ಒಡೆಯಲಾಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮವಹಿಸಬೇಕು. ಯಾವುದೇ ಪ್ರವಾಸಿಗರು ಅರಣ್ಯದೊಳಗೆ ಇಳಿಯಲು ಅವಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀಪದಲ್ಲಿ ಆ್ಯಂಬುಲೆನ್ಸ್ ವಾಹನ ಇರುವುದನ್ನು ಖಾತ್ರಿಪಡಿಸಿಕೊಳ್ಳುವಂತೆಯೂ ಸಚಿವ ಖಂಡ್ರೆ ಸೂಚಿಸಿದ್ದಾರೆ.

ಕಿರುಸುದ್ದಿ

ಮಗು ದತ್ತು ಪಡೆದ ಕೆನಡಾ ದೇಶದ ದಂಪತಿ

• **ಮೈಸೂರು:** ಮೈಸೂರಿನ ಸರ್ಕಾರಿ ಹಾಗೂ ಖಾಸಗಿ ವಿಶೇಷ ಕೇಂದ್ರಗಳಲ್ಲಿ ಪೋಷಿಸುತ್ತಿರುವ ಐದು ಮಕ್ಕಳನ್ನು ದತ್ತು ಪಡೆದ ಪೋಷಕರಿಗೆ ಹಸ್ತಾಂತರಿಸಲಾಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದತ್ತು ಪೂರ್ವ ಸಭೆ ನಡೆಸಲಾಯಿತು. ಈ ವೇಳೆ ಭಾವಿ ದತ್ತು ಪೋಷಕರು ಮತ್ತು ದತ್ತು ಕೊಡಲಾಗುವ ಮಕ್ಕಳ ಪೋಷಕರು ಹಾಜರಿದ್ದರು. ಐದು ಮಕ್ಕಳಿಗೆ ದತ್ತು ನೀಡಲು ಆದೇಶ ನೀಡಿದ್ದರಿಂದಾಗಿ ದತ್ತು ಸ್ವೀಕಾರಕ್ಕೆ ಅರ್ಜಿ ಸಲ್ಲಿಸಿದ್ದ ಪೋಷಕರಿಗೆ ಹಸ್ತಾಂತರ ಮಾಡಲಾಯಿತು. ಒಂದು ವಿಶೇಷಚೇತನ ಮಗುವನ್ನು ಕೆನಡಾ ದೇಶದ ದಂಪತಿಗೆ ಜಿಲ್ಲಾಧಿಕಾರಿಗಳು ಹಸ್ತಾಂತರ ಮಾಡಿ ಶುಭಕೋರಿದರು. ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಸದಸ್ಯರು, ಸರ್ಕಾರಿ ಹಾಗೂ ಸರ್ಕಾರೇತರ ವಿಶೇಷ ದತ್ತು ಕೇಂದ್ರದ ಅಧಿಕಾರಿ, ಸಿಬ್ಬಂದಿ ಹಾಜರಿದ್ದರು.

ಹಂಪಿಯಲ್ಲಿ ಆಳ್ವಾರ್ ವಿಗ್ರಹಗಳು ಪತ್ತೆ



• **ವಿಜಯನಗರ:** ವಿಶ್ವ ವಿಖ್ಯಾತ ಹಂಪಿಯ ಹಜಾರ ರಾಮ ದೇವಸ್ಥಾನದ ಬಳಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ನಡೆಸುತ್ತಿರುವ ಉತ್ಖನನದಲ್ಲಿ ಐತಿಹಾಸಿಕ ಆಳ್ವಾರ್ ವಿಗ್ರಹಗಳು ಪತ್ತೆಯಾಗಿವೆ. ಕ್ರಿಶ 1565ರ ತಾಳಿಕೋಟೆ ಯುದ್ಧದ ಬಳಿಕ ನಡೆದ ಬಹುಮನಿ ಸುಲ್ತಾನರ ದಾಳಿಯ ಸಂದರ್ಭದಲ್ಲಿ, ವೈಷ್ಣವ ಮತ ಪ್ರಚಾರಕರಾದ ಆಳ್ವಾರ್ ಸಂತರ ಈ ಮೂರ್ತಿಗಳನ್ನು ಶಿರಚ್ಛೇದನ ಮಾಡಿ ಮಣ್ಣಿನಲ್ಲಿ ಹೂತುಹಾಕಲಾಗಿತ್ತು. ಪ್ರಸ್ತುತ ವೈಜ್ಞಾನಿಕ ವಿಧಾನದ ಮೂಲಕ ಜಾಗರೂಕತೆಯಿಂದ ನಡೆಸಲಾದ ಉತ್ಖನನದಲ್ಲಿ ಈ ಭಗ್ನ ಮೂರ್ತಿಗಳು ಹೊರಬಂದಿವೆ. ಅದೇ ಪರಿಸರದಲ್ಲಿ ಇನ್ನುಳಿದ ಆಳ್ವಾರ್ ವಿಗ್ರಹಗಳೂ ಪತ್ತೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೇಷ್ಮೆ ಖರೀದಿ ಕೇಂದ್ರ ನಿರ್ಮಾಣ



• **ಮಂಗಳೂರು:** ಕರ್ನಾಟಕದಲ್ಲಿ ರೇಷ್ಮೆಯು ಪ್ರಮುಖ ಬೆಳೆಯಾಗಿದ್ದು, ಉತ್ತರ ಕರ್ನಾಟಕದಲ್ಲಿ ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸಲಾಗುತ್ತಿದೆ. ಅಗತ್ಯ ಇರುವ ಕಡೆಗೆ ರೇಷ್ಮೆ ಖರೀದಿ ಕೇಂದ್ರ ಮತ್ತು ಮಾರುಕಟ್ಟೆಗಳನ್ನು ನಿರ್ಮಿಸಲಾಗುವುದು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರು ತಿಳಿಸಿದ್ದಾರೆ. ಅವರು ಬುಧವಾರ ರೇಷ್ಮೆ ಇಲಾಖೆ ಹಾಗೂ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆ ವತಿಯಿಂದ ವಿಟ್ಲದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಮೇಳ ಉದ್ಘಾಟಿಸಿ ಮಾತನಾಡಿದರು. ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ ಖರೀದಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ರೈತರಿಗೆ ರೇಷ್ಮೆಯನ್ನು ಮಾರುಕಟ್ಟೆಗೆ ಸಾಗಿಸಲು ಸಾಗಾಣಿಕೆ ವೆಚ್ಚ 1 ಕೆಜಿಗೆ ರೂ. 30 ರಂತೆ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ರೇಷ್ಮೆ ಗೂಡಿಗೆ ಮಾರುಕಟ್ಟೆಯಲ್ಲಿ ಪ್ರತೀ ಕೆ.ಜಿ ರೂ.600 ರಿಂದ 700 ರವರೆಗೆ ದರವಿದ್ದು, ಬೆಳೆಗಾರರು ಕೆ.ಜಿಗೆ ರೂ.300 ರಂತೆ ಲಾಭ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳೆಗಾರರು ರೇಷ್ಮೆ ಕೃಷಿಯತ್ತ ಗಮನಹರಿಸಬೇಕು ಎಂದು ಸಚಿವರು ತಿಳಿಸಿದರು.

ಮಧ್ಯಪ್ರದೇಶ, ಹರ್ಯಾಣ, ಬಿಹಾರ ಚುನಾವಣೆಯಲ್ಲಿ ಕೈ ಯೋಜನೆ: ಡಿಕೆಶಿ

ಎಲ್ಲೆಡೆ ನಮ್ಮ ಗ್ಯಾರಂಟಿ ಕಾಪಿ

• **ಬೆಂಗಳೂರು:** ಬಿಜೆಪಿಗರು ಚುನಾವಣೆ ಗೆಲ್ಲಲು ನಮ್ಮ ಮಾದರಿಯನ್ನು ಅನುಸರಿಸುತ್ತಿದ್ದಾರೆ. ತಮ್ಮದೇ ಆದ ಯೋಜನೆಗಳನ್ನು ಜಾರಿ ಮಾಡದೇ, ಕಾಂಗ್ರೆಸ್ ಯೋಜನೆಗಳನ್ನು ಅನುಸರಿಸುತ್ತಿರುವುದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ವ್ಯಂಗ್ಯವಾಡಿದರು.

ಬುಧವಾರ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಈ ಕಾರ್ಯಕ್ರಮ ದೇಶಕ್ಕೆ ಮಾದರಿ. ನಮ್ಮ ಯೋಜನೆಗಳನ್ನು ಟೀಕೆ ಮಾಡುತ್ತಿದ್ದ ಬಿಜೆಪಿ ಮಹಾರಾಷ್ಟ್ರ, ಮಧ್ಯಪ್ರದೇಶ ಹರಿಯಾಣ, ಬಿಹಾರ ಸೇರಿದಂತೆ ಇತರೆ ರಾಜ್ಯಗಳಲ್ಲಿ ನಮ್ಮ ಯೋಜನೆಗಳನ್ನು ನಕಲು ಮಾಡಿ ಜಾರಿಗೆ ತಂದಿದ್ದಾರೆ.

ನಮ್ಮ ಸರ್ಕಾರ 3 ವರ್ಷಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗೆ 1.34 ಲಕ್ಷ ಕೋಟಿ ಹಣ ವನ್ನು ವೆಚ್ಚ ಮಾಡಿದ್ದು, 6ನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ನೀಡಿದೆ. ಆ ಮೂಲಕ ಇಡೀ ದೇಶದಲ್ಲೇ ಇತಿಹಾಸ ಸೃಷ್ಟಿಸಿದೆ. ನಮ್ಮ ಸರ್ಕಾರಕ್ಕೆ 3 ವರ್ಷ ತುಂಬಿದೆ. ಆಕ್ಸ್‌ಫರ್ಡ್ ವಿವಿಯವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಈ ಅಧ್ಯಯನದಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕತ್ತಲೆಯಲ್ಲಿ ಮೂಡಿದ ಬೆಳಕು ಎಂದು ಬಣ್ಣಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೊಟ್ಟ ಮಾತಿನಂತೆ ನಡೆದಿದ್ದೇವೆ: ನಮ್ಮ ಸಾಧನೆ ನಮಗೆ ತೃಪ್ತಿ ತಂದಿದೆ. ಗೃಹಲಕ್ಷ್ಮಿ ಮೂಲಕ 1.24 ಕೋಟಿ ಮಹಿಳೆಯರಿಗೆ ತಿಂಗಳಿಗೆ 2 ಸಾವಿರದಂತೆ 69,793 ಕೋಟಿ ರೂ. ವಿನಿಯೋಗಿಸಲಾಗಿದೆ. ಗೃಹಜ್ಯೋತಿಯಿಂದ 1.64 ಕೋಟಿ ಕುಟುಂಬಗಳು ಉಪಯೋಗ ಪಡೆದಿದ್ದು ಇದಕ್ಕೆ 26,115 ಕೋಟಿ ರೂ. ವೆಚ್ಚವಾಗಿದೆ. ಶಕ್ತಿ ಯೋಜನೆ ಮೂಲಕ ಮಹಿಳೆಯರು 726 ಕೋಟಿ ಬಾರಿ ಉಚಿತ ಪ್ರಯಾಣ ಮಾಡಿದ್ದು 18,943 ಕೋಟಿ ವೆಚ್ಚ ಮಾಡಲಾಗಿದೆ. ಅನ್ನಭಾಗ್ಯದಿಂದ 4.4 ಕೋಟಿ ಜನರಿಗೆ ಉಪಯೋಗವಾಗಿದ್ದು 11,821 ಕೋಟಿ ವೆಚ್ಚ, ಯುವನಿಧಿಗೆ 950 ಕೋಟಿ ವೆಚ್ಚವಾಗಿದೆ. ನಾವು ಕೊಟ್ಟ ಮಾತಿನಂತೆ ನಡೆದಿದ್ದೇವೆ ಎಂದು ಹೇಳಿದರು.

ಎಚ್‌ಡಿಕೆ ಅವಧಿಯಲ್ಲೇ ಯೋಜನೆ



ಬಿಡದಿ ಟೌನ್‌ಶಿಪ್‌ಗೆ ಜಮೀನು ಯೋಜನೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಹುಟ್ಟಿಕೊಂಡಿದೆ. ಇದು ನಾನು ಪ್ರಾರಂಭಿಸಿದ ಯೋಜನೆ ಅಲ್ಲ. ಕುಮಾರಸ್ವಾಮಿ ಅವರ ಅವಧಿಯಲ್ಲಿ ಇದನ್ನು ಈಗಾಗಲೇ ತಿಳಿಸಲಾಗಿತ್ತು. ಈ ಯೋಜನೆಯನ್ನು ಡಿಎಲ್‌ಎಫ್‌ಗೆ ನೀಡಲಾಗಿದೆ. ನಂತರ ಡಿಎಲ್‌ಎಫ್ ಇದು ಕಾರ್ಯಸಾಧ್ಯವಲ್ಲ ಎಂದು ಹೇಳಿ ಅದರಿಂದ ಹಿಂದೆ ಸರಿದಿದೆ ಎಂದು ಡಿಸಿಎಂ ಹೇಳಿದರು. ಸಭೆಯಲ್ಲಿ ರೈತರು ತಮ್ಮ ಕೆಲವು ಬೇಡಿಕೆಗಳನ್ನು ಕೂಡ ಮುಂದಿಟ್ಟರು. ವಿಶೇಷವಾಗಿ, ಅಭಿವೃದ್ಧಿ ಆಗುವ ಜಾಗದಲ್ಲಿ ರೈತರಿಗೆ 30★40 ಸೈಟ್‌ಗಳನ್ನು ಮಂಜೂರು ಮಾಡುವಂತೆ ಮನವಿ ಮಾಡಿದರು. ತಮ್ಮ ಭೂಮಿಯನ್ನು ಸರ್ಕಾರಕ್ಕೆ ನೀಡುತ್ತಿರುವ ಹಿನ್ನೆಲೆಯಲ್ಲಿ, ಹಣದೊಂದಿಗೆ ಕನಿಷ್ಠ ಕೆಲವು ಸೈಟ್‌ಗಳ ರೂಪದಲ್ಲಿ ಹಿಂತಿರುಗಿ ಸೌಲಭ್ಯ ನೀಡಬೇಕು ಎಂದು ವಿನಂತಿಸಿದರು.

ಯಾರಿಗೂ ಕೂಲಿ ಕೇಳಿಲ್ಲ

ರಾಜ್ಯ ರಾಜಕಾರಣ, ಪಕ್ಷವನ್ನು ಯಾವ ರೀತಿ ಅಧಿಕಾರಕ್ಕೆ ತರಬೇಕು ಎಂಬುವುದರ ಕುರಿತು ಸಚಿವ ಜಾರ್ಜ್ ಅವರ ನಿವಾಸದಲ್ಲಿ ಚರ್ಚೆ ಮಾಡಿದ್ದೇವೆ. ನಾನು ಯಾರಿಗೂ ಕೂಲಿ ಕೇಳಿಲ್ಲ, ರಾಹುಲ್ ಗಾಂಧಿ ಅವರು ಕರೆಯುತ್ತೇವೆ ಎಂದಿದ್ದಾರೆ. ಕರೆದಾಗ ಹೋಗುತ್ತೇನೆ ಎಂದ ಅವರು, ಪ್ರತಿ ದಿನವೂ ಶುಭದಿನ ನನಗೆ. ಶುಭದಿನ, ಶುಭಗಳಿಗೆ, ಶುಭ ಮುಹೂರ್ತ ಎಂದರು. ರಾಜಣ್ಣ ಅವರು ಸಿಎಂ ಮುಂದುವರಿಯಲಿ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ, ಅವರ ಬೇಡಿಕೆ ಬಗ್ಗೆ ಗೊತ್ತಿಲ್ಲ. ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಸಿಎಂ ಹೇಳಿದ್ದಾರೆ, ಅವರನ್ನೇ ಕೇಳಬೇಕೆಂದರು.

ದಿನದ ಫೋಟೋ ಶೂಟ್

ಬಿಜೆಪಿ ನಾಯಕರು ಒಂದೆರಡು ದಿನ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಒಂದು ದಿನದ ಫೋಟೋ ಶೂಟ್ ಬಿಟ್ಟು ಪ್ರತಿನಿತ್ಯ ಮೆಟ್ರೋ, ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ, ಅವರು ಓಡಾಡುವುದಾದರೆ ನಮ್ಮ ಅಭ್ಯಂತರವಿಲ್ಲ, ಅವರು ಪೆಟ್ರೋಲ್, ಡೀಸೆಲ್ ಉಳಿಸಲಿ, ಅವರು ಅಡುಗೆ ಎಣ್ಣೆ ಬಳಸಿದ ಆಹಾರ ತಿನ್ನುವುದೇ ಬೇಡ. ವಿದೇಶ ಪ್ರವಾಸ ಮಾಡಬೇಡ ಎಂದಿದ್ದಾರೆ. ಅವರು ವಿದೇಶ ಪ್ರವಾಸ ಹೋಗಿರುವುದನ್ನು ನಾನು ಪ್ರಶ್ನೆ ಮಾಡುವುದಿಲ್ಲ ಎಂದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಿಸಿ: ಶ್ರೀರಾಮುಲು



• **ಮೈಸೂರು:** ಪ.ಜಾತಿ, ಪಂಗಡದವರಿಗೆ ಹೆಚ್ಚಿಸಲಾಗಿರುವ ಮೀಸಲಾತಿಯನ್ನು ರಾಜ್ಯ ಸರ್ಕಾರ ಕೂಡಲೇ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ಆರಂಭಿಸಬೇಕಾಗುತ್ತದೆ ಎಂದು ಮಾಜಿ ಸಚಿವ ಶ್ರೀರಾಮುಲು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಬುಧವಾರ ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ಆಗ್ರಹಿಸಿ ಕಳೆದ 30 ವರ್ಷಗಳಿಂದಲೂ ಪ.ಜಾತಿ, ಪಂಗಡದವರು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇದನ್ನು ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿಯವರು ಗಮನಿಸಿ, ಈ ಬಗ್ಗೆ ವರದಿ ನೀಡಲು ನಾಗಮೋಹನ ದಾಸ್ ಆಯೋಗವನ್ನು ರಚಿಸಿದ್ದರು. ಆಯೋಗ ಕೂಡ ವರದಿಯನ್ನು ನೀಡಿತ್ತು. ನಮ್ಮ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು, ವರದಿಯನ್ನು ಅಂಗೀಕರಿಸಿ, ಪ.ಜಾತಿಯವರಿಗೆ ಇದ್ದ ಮೀಸಲಾತಿಯನ್ನು ಶೇ 15 ರಿಂದ 17ಕ್ಕೆ, ಪರಿಶಿಷ್ಟ ಪಂಗಡಕ್ಕೆ ಇದ್ದ ಮೀಸಲಾತಿಯನ್ನು 3 ರಿಂದ 7 ಕ್ಕೆ ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿಸಿ ಆದೇಶ ಹೊರಡಿಸಿದರು. ಇದಕ್ಕೆ ಉಭಯ ಸದನಗಳಲ್ಲೂ ಅಂಗೀಕಾರ ದೊರೆಯಿತು. ಸರ್ವ ಪಕ್ಷಗಳ ಸಭೆಯಲ್ಲೂ ಕೂಡ ಒಪ್ಪಿಗೆ ನೀಡಲಾಯಿತು.

ಅಂದು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯನವರೇ ಮೀಸಲಾತಿ ಹೆಚ್ಚಳಕ್ಕೆ ನಮ್ಮ ಸಂಪೂರ್ಣ ಒಪ್ಪಿಗೆ ಇರುವುದಾಗಿ ತಿಳಿಸಿದ್ದರು. ಆದರೆ ನಮ್ಮ ಸರ್ಕಾರ ಚುನಾವಣೆಯಲ್ಲಿ ಬಿದ್ದು ಹೋಯಿತು. ಸಿದ್ದರಾಮಯ್ಯನವರು ಸಿಎಂ ಆಗಿ 3 ವರ್ಷ ಅಧಿಕಾರವನ್ನು ಪೂರೈಸಿದ್ದಾರೆ. ಆದರೆ ಇನ್ನೂ ಕೂಡ ಮೀಸಲಾತಿ ಹೆಚ್ಚಳವನ್ನು ಶಿಕ್ಷಣ, ಉದ್ಯೋಗದಲ್ಲಿ ಜಾರಿಗೆ ತರದೆ, ಈ ಸಮುದಾಯದವರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ತಡೆಯಾಜ್ಞೆಗೆ ತೆರವಿಗೆ ಕ್ರಮ ಅಗತ್ಯ

ಸಿಎಂ ಸಿದ್ದರಾಮಯ್ಯನವರು ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡುವುದಾಗಿ ಹೇಳಿ ರಾಜ್ಯಪಾಲರಿಂದಲೂ ಸಹಿ ಪಡೆದು, ಒಪ್ಪಿಗೆ ಪಡೆದುಕೊಂಡಿದ್ದಾರೆ. ಆದರೆ ಆ ನಂತರ ಮೀಸಲಾತಿ ಪ್ರಮಾಣವನ್ನು ಶೇ 56 ರಿಂದ 50ಕ್ಕೆ ಇಳಿಸಿ, ಪ.ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಳವನ್ನು ಮಾಡದೆ ಅನ್ಯಾಯ ಮಾಡುತ್ತಿದ್ದಾರೆ. ಮೀಸಲಾತಿ ಹೆಚ್ಚಳದ ಕುರಿತು ರಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗಲೂ ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳವನ್ನು ಸಮರ್ಥಿಸಿಕೊಳ್ಳುವ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ಅದರಿಂದಾಗಿ ಹೈಕೋರ್ಟ್ ತಡೆಯಾಜ್ಞೆಯನ್ನು ನೀಡಿದೆ ಎಂದರು.

ಮೇ 23ಕ್ಕೆ ಬೆಂಗಳೂರಿಗೆ ನಿತಿನ್



• **ಬೆಂಗಳೂರು:** ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಬಳಿಕ ನಿತಿನ್ ನವೀನ್ ಅವರು ಮೊದಲ ಬಾರಿಗೆ ಮೇ 23 ಮತ್ತು 24ರಂದು ಕರ್ನಾಟಕಕ್ಕೆ ಭೇಟಿ ನೀಡುತ್ತಿದ್ದಾರೆ.

ನಿತಿನ್ ನವೀನ್ ಅವರು ಮೇ 23ರಂದು ರಾತ್ರಿ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮೇ 24ರಂದು ಬೆಳಗ್ಗೆ ಮಲ್ಲೇಶ್ವರದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ರಾಜ್ಯ ಪದಾಧಿಕಾರಿಗಳು ಮತ್ತು ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳ ಜಿಲ್ಲಾಧ್ಯಕ್ಷರ ಸಭೆ ನಡೆಸಲಿದ್ದಾರೆ.

ಬಳಿಕ ರಾಜ್ಯ ಕಾರ್ಯಾಲಯದಲ್ಲಿ ರಾಜ್ಯದ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಂಜೆ ಯಲಹಂಕದಲ್ಲಿ ನಡೆಯುತ್ತಿರುವ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಅಪೇಕ್ಷಿತರ ಪ್ರಶಿಕ್ಷಣ ವರ್ಗಕ್ಕೆ ಭೇಟಿ ನೀಡಿ ನಂತರ ಬೆಂಗಳೂರಿನಿಂದ ತೆರಳಲಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಮೊದಲ ಭೇಟಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಗಳಾಗಿ 12 ವರ್ಷ ಪೂರೈಸುತ್ತಿರುವುದರಿಂದ ಪಕ್ಷ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ, ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಪರಿಶೀಲಿಸಲು ಪಕ್ಷದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಬುಧವಾರ ಬೆಂಗಳೂರಿಗೆ ಆಗಮಿಸಿದರು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸ್ವಾಗತಿಸಿದರು.

ಗೊಂದಲಗಳ ನಿವಾರಣೆಗೆ ರಾಜಕೀಯೇತರ ಮುಖಂಡರ ಕಮಿಟಿ ರಚನೆ: ನಿರಾಣಿ

ಪಂಚಮಸಾಲಿ ಸಮಾಜ ಒಗ್ಗಟ್ಟಿನ ಮಂತ್ರ



• **ಹುಬ್ಬಳ್ಳಿ:** ಇತ್ತೀಚಿಗೆ ನಡೆದ ಪಂಚಮಸಾಲಿ ಪೀಠಗಳ ವಿವಾದಗಳ ಪರಿಹರಿಸುವುದು ಹಾಗೂ ಸಮಾಜ ಒಗ್ಗೂಡಿಸುವ ಉದ್ದೇಶದಿಂದ ಪಂಚಮಸಾಲಿ ಲಿಂಗಾಯತ ಸಮಾಜದ ಮುಖಂಡರು ನಗರದಲ್ಲಿ ಸುದೀರ್ಘ ಸಭೆ ನಡೆಸಿದರು.

ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಯಿತು. ಇತ್ತೀಚೆಗೆ ಹರಿಹರ ಪೀಠದ ಕುರಿತು ನಡೆದ ವಿವಾದಗಳು, ಲೆಕ್ಕ ಪತ್ರ ನೀಡುವುದು, ಮುಂದೆ ಸಮಾಜವನ್ನು ಯಾವ ರೀತಿ ಒಗ್ಗಟಿನಿಂದ ಕೊಂಡಯ್ಯುವುದು ಎಂಬುವುದರ ಕುರಿತು ಚರ್ಚೆ ನಡೆದಿದೆ. ಈ ಕುರಿತು ಚರ್ಚಿಸುವಾಗ ಮುಖಂಡರ ಮಧ್ಯೆ ಪರಸ್ಪರ ಮಾತಿನ ಚಕಮಕಿ ಹಾಗೂ ವಾಗ್ವಾದ ನಡೆಯಿತು ಎನ್ನಲಾಗಿದೆ. ಗೌಪ್ಯ ಸಭೆಯ ಕುರಿತು ಮಾತನಾಡಿದ ಶಾಸಕರು, ಮಾಜಿ ಶಾಸಕರು ಹಾಗೂ ಸಮಾಜದ ಮುಖಂಡರು ಒಗ್ಗಟ್ಟಿನ ಮಂತ್ರ ಜಪಿಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾಜಿ ಸಚಿವ ಮುರಗೇಶ ನಿರಾಣಿ ಮಾತನಾಡಿ, ಪಂಚಮಸಾಲಿ ಲಿಂಗಾಯತ ಸಮಾಜದ ಪೀಠಗಳಲ್ಲಿ ಉಂಟಾದ ಗೊಂದಲಗಳ ನಿವಾರಣೆಗೆ 10 ಜನ ರಾಜಕೀಯೇತರ ಮುಖಂಡರ ಕಮಿಟಿ ರಚನೆ ಮಾಡುತ್ತಿದ್ದು, ಈ ಮೂಲಕ ಸತ್ಯಾಸತ್ಯೆಗಳನ್ನು ಅರಿತು ಸಮಸ್ಯೆ ಪರಿಹರಿಸಲಾಗುವುದು ಎಂದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ಸಮಾಜಕ್ಕೆ ಧಕ್ಕೆ ಬರುವಂತಹ ಕೆಲವೊಂದು ಅಹಿತಕರ ಘಟನೆಗಳು ಇತ್ತೀಚಿಗೆ ನಡೆದಿವೆ. ಈ ಹಿನ್ನೆಲೆ ಸಮಾಜದ ಹಿರಿಯರೆಲ್ಲರೂ ಸೇರಿ ಈ ವಿವಾದಗಳನ್ನು ಪರಿಹರಿಸಲು ಸಭೆ ನಡೆಸಿದ್ದೇವೆ. ಈಗಾಗಲೇ ಪಂಚಮಸಾಲಿ ಪೀಠದ 2 ಕಡೆಯ ಮುಖಂಡರು ಮುಂದೆ ಯಾವ ರೀತಿ ಸಾಗಬೇಕು ಎಂಬ ಸಲಹೆಗಳನ್ನು ನೀಡಿದ್ದಾರೆ ಎಂದರು. ಶಾಸಕ ಅರವಿಂದ ಬೆಲ್ಲದ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಶಾಸಕ ಸೋಮಣ್ಣ ಬೇವಿನಮರದ, ಮಾಜಿ ಸಚಿವ ಸಿ.ಸಿ. ಪಾಟೀಲ ಇದ್ದರು.

ಮುಖಂಡರ ಮಾರ್ಗದರ್ಶನ ಅಗತ್ಯ

ಸಭೆಯಲ್ಲಿ ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠದಲ್ಲಿ ಸ್ವಲ್ಪ ಲೆಕ್ಕಪತ್ರದ ಬಗ್ಗೆ ಕೆಲವೊಂದು ಆರೋಪಗಳು, ಪ್ರತ್ಯಾರೋಪಗಳು ನಿರಂತರವಾಗಿ ಕೇಳಿಬಂದಿದ್ದವು. ಇದೀಗ ನಾವು ಪಾರದರ್ಶಕವಾಗಿ ಲೆಕ್ಕಪತ್ರದ ಬಗ್ಗೆ, ಯಾರು ಯಾರು ಹಣ ನೀಡಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ದಿನಾಂಕ ನಿಗದಿ ಮಾಡಿ, ಎಲ್ಲ ಲೆಕ್ಕಪತ್ರದ ಬಗ್ಗೆ ಏನು ಗೊಂದಲಗಳಿವೆ ಅವುಗಳನ್ನು ನಿವಾರಿಸಿಕೊಳ್ಳುತ್ತೇವೆ. ಸಮಾಜ ಒಗ್ಗೂಡಿ ಹೋಗುವ ನಿಟ್ಟಿನಲ್ಲಿ ಮುಂದೆ ಏನೇನು ಮಾಡಬೇಕು ಎಂಬ ಬಗ್ಗೆ ಸಮಾಜದ ಮುಂಖಡರ ಮಾರ್ಗದರ್ಶನದಲ್ಲಿ ಮುನ್ನಡೆಯುವ ಬಗ್ಗೆ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಳಪೆ ಗುಣಮಟ್ಟದ ಔಷಧ, ಆಹಾರ ವಿರುದ್ಧ ದಾಳಿ | 2025–26ರಲ್ಲಿ ವ್ಯಾಪಕ ತಪಾಸಣೆ | ದುರುಪಯೋಗ ತಡೆ

ಸಾರ್ವಜನಿಕ ಆರೋಗ್ಯ ಭದ್ರತೆಗೆ ಎಫ್‌ಎಸ್‌ಡಿಎ ಕಟ್ಟುನಿಟ್ಟಿನ ಕ್ರಮ

▸ **ನಂದಿನಿ ಎನ್.**

• **ಬೆಂಗಳೂರು:** ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ರಾಜ್ಯದ ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ (ಎಫ್‌ಎಸ್‌ಡಿಎ) 2025-26ನೇ ಸಾಲಿನಲ್ಲಿ ವ್ಯಾಪಕ ತಪಾಸಣೆ, ಕಠಿಣ ಜಾರಿ ಕ್ರಮ ಹಾಗೂ ಡಿಜಿಟಲ್ ಆಡಳಿತ ವ್ಯವಸ್ಥೆ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಔಷಧಿ ಮತ್ತು ಆಹಾರ ಕ್ಷೇತ್ರಗಳಲ್ಲಿ ಗುಣಮಟ್ಟ ಕಾಪಾಡಲು ಇಲಾಖೆ ಕೈಗೊಂಡ ಕ್ರಮಗಳು ಸಾರ್ವಜನಿಕ ಆರೋಗ್ಯ ಭದ್ರತೆಯನ್ನು ಬಲಪಡಿಸುವ ದಿಸೆಯಲ್ಲಿ ಮಹತ್ವ ಪಡೆದಿವೆ.

ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆಯು ರಾಜ್ಯದ ಎಲ್ಲಾ 227 ಔಷಧ ತಯಾರಿಕಾ ಘಟಕಗಳನ್ನು ಇಲಾಖೆ ಪರಿಶೀಲಿಸಿದ್ದು, ಉತ್ತಮ ಉತ್ಪಾದನಾ ಪದ್ಧತಿ ನಿಯಮ ಉಲ್ಲಂಘನೆ ಪತ್ತೆಯಾದ ಹಿನ್ನೆಲೆಯಲ್ಲಿ 10 ಘಟಕಗಳಿಗೆ ಉತ್ಪಾದನೆ ಸ್ಥಗಿತ ಆದೇಶ ನೀಡಿದೆ. ರಾಜ್ಯದ ಮೂರು ಔಷಧಿ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಒಟ್ಟು 16,337 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, 473 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಇವುಗಳಲ್ಲಿ 143 ಪ್ರಕರಣಗಳು ಗಂಭೀರ ಎ ವರ್ಗಕ್ಕೆ ಸೇರಿದ್ದು, ಸಂಬಂಧಿತ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಶಪಡಿಸಿಕೊಂಡ ಕಳಪೆ ಔಷಧಿಗಳ ಮೌಲ್ಯ 1.54 ಕೋಟಿ ರೂ.ಗಿಂತ ಹೆಚ್ಚಾಗಿದೆ. ಮಾದಕ ವಸ್ತುಗಳ ಅಕ್ರಮ ಬಳಕೆ ಮತ್ತು ಮಾರಾಟ ತಡೆಗಟ್ಟಲು ಇಲಾಖೆ 1,309 ಪರಿಶೀಲನೆ ಗಳನ್ನು ನಡೆಸಿದೆ. ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ 457 ಔಷಧಿ ಅಂಗಡಿಗಳ ಪರವಾನಗಿಗಳನ್ನು ಅಮಾನತು ಮಾಡಲಾಗಿದ್ದು, 17 ಪ್ರಕರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಎನ್‌ಡಿಪಿಎಸ್ ನಿಯಮ ಉಲ್ಲಂಘನೆ ಸಂಬಂಧ 231 ಶೋಕಾಸ್ ನೋಟಿಸ್ ಜಾರಿಗೊಳಿಸಲಾಗಿದ್ದು, 10 ಪರವಾನಗಿಗಳನ್ನು ಅಮಾನತು ಮಾಡಲಾಗಿದೆ.

ಡಿಜಿಟಲ್ ಆಡಳಿತಕ್ಕೆ ಒತ್ತು: ಬ್ಲಡ್ ಬ್ಯಾಂಕ್ ಪರವಾನಗಿ, ಆರ್‌ಎಂಐ ಪ್ರಮಾಣಪತ್ರ ಹಾಗೂ ಔಷಧಿ ಅಂಗಡಿಗಳ ತಪಾಸಣೆ ಸೇರಿದಂತೆ ಹಲವು ಸೇವೆಗಳನ್ನು ಸಂಪೂರ್ಣ ಆನ್‌ಲೈನ್ ಮೂಲಕ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಮೈಸೂರಿನಲ್ಲಿ ಹೊಸ ಔಷಧಿ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗೂ ಅನುಮೋದನೆ ದೊರೆತಿದೆ.

ಆಹಾರ ಸುರಕ್ಷತೆಯಲ್ಲಿ ವ್ಯಾಪಕ ತಪಾಸಣೆ: 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ 3.83 ಲಕ್ಷಕ್ಕೂ ಅಧಿಕ ಆಹಾರ ವ್ಯವಹಾರಗಳಿಗೆ ನೋಂದಣಿ ಮತ್ತು ಪರವಾನಗಿ ನೀಡಲಾಗಿದ್ದು, ಇದರಿಂದ ಸರ್ಕಾರಕ್ಕೆ 25.21 ಕೋಟಿ ರೂ. ಆದಾಯ ಬಂದಿದೆ.



> ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆನ್‌ಲೈನ್ ಆಧಾರಿತ ನಿಗಾ ವ್ಯವಸ್ಥೆಯನ್ನು ಜಾರಿ ಮಾಡಿದ್ದು, ಈ ನೂತನ ಪೋರ್ಟಲ್‌ನಿಂದ ಈ ವ್ಯವಸ್ಥೆಯನ್ನು ಪರಿಣಾಮಕಾರಿ ಹಾಗೂ ಪಾರದರ್ಶಕವಾಗಿ ನಿರ್ವಹಿಸಲು ಸಾಧ್ಯವಾಗಲಿದೆ.
>
> ■ **ದಿನೇಶ್ ಗುಂಡೂರಾವ್,** ಆರೋಗ್ಯ ಇಲಾಖೆ ಸಚಿವ

ದಿಗಂತ ವಿಶೇಷ

ಹಾಲು, ಬೆಣ್ಣೆ, ನಮ್ಕೀನ್ ಮಾದರಿಗಳಲ್ಲಿ ಅಸುರಕ್ಷಿತ ಅಂಶ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಬೆಣ್ಣೆ ಮಾರಾಟ ಮಳಿಗೆಗಳ ಮೇಲೆ ನಡೆಸಿದ ದಾಳಿಯಲ್ಲಿ 13 ಮಾದರಿಗಳ ಪೈಕಿ 9 ಮಾದರಿಗಳು ಕಳಪೆ ಗುಣಮಟ್ಟದ್ದಾಗಿವೆ. ಕೋಲಾರ ಜಿಲ್ಲೆಯ ಖಾಸಗಿ ಡೇರಿಗಳಿಂದ ಸಂಗ್ರಹಿಸಿದ 48 ಹಾಲು ಮಾದರಿಗಳಲ್ಲಿ 18 ಮಾದರಿಗಳು ಗುಣಮಟ್ಟದ ಕೊರತೆಯದ್ದಾಗಿವೆ. ನಮ್ಕೀನ್ ಮಾದರಿಗಳಲ್ಲಿ 77 ಅಸುರಕ್ಷಿತ ಎಂದು ಪತ್ತೆಯಾಗಿದ್ದು, ಮಿಶ್ರಣ ತಿಂಡಿಗಳಲ್ಲಿ 69, ಮಸಾಲೆ ಪದಾರ್ಥಗಳಲ್ಲಿ 42, ವಸತಿ ನಿಲಯಗಳ ಆಹಾರದಲ್ಲಿ 21 ಹಾಗೂ ಮಧ್ಯಾಹ್ನ ಊಟ ಯೋಜನೆಯ ಆಹಾರದಲ್ಲಿ 7 ಮಾದರಿಗಳು ಅಸುರಕ್ಷಿತವಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ಕೇಂದ್ರದಿಂದ ದಕ್ಷಿಣ ಭಾರತ ವಿರೋಧಿ ನಡೆ: ಮಹದೇವಪ್ಪ



• **ಬೆಂಗಳೂರು:** ಜನಸಂಖ್ಯೆ ಆಧರಿಸಿ ಉತ್ತರದ ರಾಜ್ಯಗಳಿಗೆ ಹೆಚ್ಚಿನ ಚುನಾವಣಾ ಕ್ಷೇತ್ರಗಳನ್ನು ನೀಡಿ, ದಕ್ಷಿಣದ ರಾಜ್ಯಗಳಿಗೆ ಕಡಿಮೆ ಚುನಾವಣಾ ಕ್ಷೇತ್ರಗಳನ್ನು ನೀಡುವ ಹುನ್ನಾರವು ದಕ್ಷಿಣ ಭಾರತ ವಿರೋಧಿ ನಡೆಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಿಡಿಕಾರಿದ್ದಾರೆ.

ಕ್ಷೇತ್ರ ಪುನರ್ ವಿಂಗಡನೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಸಚಿವರು, ದಕ್ಷಿಣದ ರಾಜ್ಯಗಳ ಮೇಲೆ ಸದಾ ತಾರತಮ್ಯ ತೋರುವ ಕೇಂದ್ರದ ಬಿಜೆಪಿ ಸರ್ಕಾರ, ದಕ್ಷಿಣದ ರಾಜ್ಯಗಳ ರಾಜಕೀಯ ಅಸ್ಮಿತೆಗೆ ಕೊಡಲಿ ಪೆಟ್ಟು ನೀಡುವ ದುರುದ್ದೇಶದಿಂದ ಉತ್ತರ ಭಾರತಕ್ಕೆ ಹೆಚ್ಚು ಮತ್ತು ದಕ್ಷಿಣ ಭಾರತಕ್ಕೆ ಕಡಿಮೆ ಮತ ಕ್ಷೇತ್ರಗಳನ್ನು ಹಂಚಿಕೆ ಮಾಡಲು ಹೊರಟಿದೆ ಎಂದರು. ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತನೆ ಮಾಡ ಬೇಕಾದ ಜವಾಬ್ದಾರಿಯನ್ನು ಹೊಂದಿರುವ ಕೇಂದ್ರದ ಬಿಜೆಪಿ ಸರ್ಕಾರವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಅರಿವು ಮೂಡಿಸಿ, ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದನ್ನು ಬಿಟ್ಟು, ಕೇವಲ ಚುನಾವಣಾ ರಾಜಕೀಯದ ದೃಷ್ಟಿಯಿಂದ ತೀರಾ ಅತಾರ್ಕಿಕವಾಗಿ ಮತ ಕ್ಷೇತ್ರಗಳ ಹೆಚ್ಚಳಕ್ಕೆ ಮುಂದಾಗಿರುವುದು ಅತ್ಯಂತ ಕೆಟ್ಟ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರದ ಕುತಂತ್ರ: ಎಲ್ಲಕ್ಕಿಂತ ಮುಖ್ಯವಾಗಿ ಮತ ಕ್ಷೇತ್ರಗಳ ಹೆಚ್ಚಳದ ಮಸೂದೆಯನ್ನು ಈಗಾಗಲೇ ಅನುಮೋದಿತವಾಗಿದ್ದ ಮಹಿಳಾ ಮೀಸಲಾತಿ ಮಸೂದೆಯ ಒಳಗಿಟ್ಟು, ದಕ್ಷಿಣದ ರಾಜ್ಯಗಳನ್ನು ಹಣಿಯಲು ಕೇಂದ್ರದ ಬಿಜೆಪಿಗರು ಸಂಚು ರೂಪಿಸಿದ್ದರು ಎಂದು ತಿಳಿಸಿದರು.

ಶಾಸಕ ಎಚ್.ಡಿ.ರೇವಣ್ಣ ಅಭಿಮತ | ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಶೈಕ್ಷಣಿಕ ಕ್ಷೇತ್ರ ಹಾಸನ

• ಹೊಳೆನರಸೀಪುರ: ಸ್ಥಳೀಯ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ, ನ್ಯಾಕ್‌ನಿಂದ 'ಬಿ+' ಮಾನ್ಯತೆ ಪಡೆದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ ವೇದಿಕೆ, ಕ್ರೀಡೆ, ಎನ್.ಎಸ್.ಎಸ್, ಎನ್.ಸಿ.ಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಯುವ ರೆಡ್ ಕ್ರಾಸ್ ಚಟುವಟಿಕೆಗಳ ಸಮಾರೋಪ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದ ಕ್ಷೇತ್ರದ ಶಾಸಕರು, ಮಾಜಿ ಸಚಿವರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಎಚ್.ಡಿ.ರೇವಣ್ಣ ಮಾತನಾಡಿ, ಕ್ಷೇತ್ರದಲ್ಲಿ ಶಿಕ್ಷಣಕ್ಕೆ ನೀಡಲಾಗಿರುವ ಅಭೂತಪೂರ್ವ ಆದ್ಯತೆಯನ್ನು ವಿವರಿಸಿದರು.

ಕ್ಷೇತ್ರದಲ್ಲಿ ಪ್ರಸ್ತುತ 9 ಪ್ರಥಮ ದರ್ಜೆ ಕಾಲೇಜುಗಳು, ಅಂತಾರಾಷ್ಟ್ರೀಯ ಗುಣಮಟ್ಟದ ಎಲ್.ಕೆ.ಜಿ ಯಿಂದ ಪಿಯುಸಿ ವರೆಗಿನ 9 ಕೆಪಿಎಸ್‌ಸಿ (HPTA) ಶಾಲೆಗಳು ಹಾಗೂ 9 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಸಾವಿರಾರು ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಸುಸಜ್ಜಿತ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದ್ದು, 1200ಕ್ಕೂಹೆಚ್ಚು ವಿದ್ಯಾರ್ಥಿನಿಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಜೊತೆಗೆ ರಾಜ್ಯದಲ್ಲೇ ಮೊದಲ ಸರ್ಕಾರಿ ಮಲ್ಟಿ-ಡಿಸಿಪ್ಲಿನರಿ ಇಂಜಿನಿಯರಿಂಗ್ ಕಾಲೇಜು ಇಲ್ಲಿದ್ದು, 1434 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮಹಿಳೆಯರಿಗಾಗಿ ಪ್ರತ್ಯೇಕ ಪಾಲಿಟೆಕ್ನಿಕ್ ಕಾಲೇಜು ಕೂಡ ಇದೆ, ಎಂದು ಅವರು ಹೆಮ್ಮೆಯಿಂದ ತಿಳಿಸಿದರು. ಸುಮಾರು 40-50 ವರ್ಷಗಳ ಹಿಂದೆ ಕೇವಲ 80 ಪೈಸೆ ಬಾಡಿಗೆಯ ಕಟ್ಟಡದಲ್ಲಿ ಆರಂಭವಾದ ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ ಎಂದು ನೆನೆದ ಅವರು, ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಸಮಾಜದ ಆಸ್ತಿಯಾಗಬೇಕೆಂದು ಕಿವಿಮಾತು ಹೇಳಿದರು. ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿ ಪ್ರಧಾನ ಮಂತ್ರಿಗಳಿಂದ ಗೌರವ ಸ್ವೀಕರಿಸಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿ ಅಭಿಷೇಕ್ ವೈ.ಪಿ. ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು. ಅವರು 2026ರ ಗಣರಾಜ್ಯೋತ್ಸವದಂದು ಕರ್ನಾಟಕ ಮತ್ತು ಗೋವಾ ಡೈರೆಕ್ಟರೇಟ್ ಚಾಂಪಿಯನ್‌ಶಿಪ್ ಬ್ಯಾನರ್ ಅನ್ನು ಪ್ರಧಾನಿ ಅವರಿಂದ ಸ್ವೀಕರಿಸುವ ಮೂಲಕ ಕಾಲೇಜು ಮತ್ತು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ ಎಂದು ಭಾಷಣಕಾರರು ಶ್ಲಾಘಿಸಿದರು.



ಬದುಕು ಸದ್ಬಳಕೆಯ ಅವಕಾಶ: ಸಿಪಿಐ ಸಂತೋಷ್

ವಿಶೇಷ ಉಪನ್ಯಾಸ ನೀಡಿದ ಹೊಳೆನರಸೀಪುರ ಆರಕ್ಷಕ ವೃತ್ತ ನಿರೀಕ್ಷಕರಾದ ಸಂತೋಷ್ ಅವರು, ಬಾಳು ಒಂದು ಹೂವು ಬಾಳು ಒಂದು ಮುಳ್ಳು ಎಂಬ ಗೀತೆಯ ಸಾಲುಗಳೊಂದಿಗೆ ಭಾಷಣ ಆರಂಭಿಸಿ, ಸಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು. ಬದುಕು ವೃತ್ತಿಪರತೆಯಿಂದ ಕೂಡಿರಬೇಕು ಮತ್ತು ಮೊಬೈಲ್ ಅನ್ನು ಸದ್ಬಳಕೆ ಮಾಡಿಕೊಂಡು ಕೆಟ್ಟ ವಿಷಯಗಳಿಗೆ "ನೋ" ಎನ್ನುವ ಮೂಲಕ ವೈರಸ್ ಮುಕ್ತರಾಗಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಬಹುಮಾನ ವಿತರಣೆ

ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿನಿ ಪುಷ್ಪಲತಾ ಅವರು ಭರ್ಜರಿ ನಾಲ್ಕು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡು ಗಮನ ಸೆಳೆದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಎಸ್.ಆರ್. ಮೂರ್ತಿ ಮಾತನಾಡಿ, ವಿದ್ಯಾರ್ಥಿಗಳು ಕಾಲಾವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡು ಜೀವನದಲ್ಲಿ ಮುಂದೆ ಬರಬೇಕೆಂದು ಮಾರ್ಗದರ್ಶನ ನೀಡಿದರು.

ಟ್ರ್ಯಾಕ್ಟರ್‌ಗೆ ಸಿಕ್ಕಿ 4 ವರ್ಷದ ಮಗು ಸಾವು

• ಪಾಂಡವಪುರ: ಟ್ರ್ಯಾಕ್ಟರ್ ಟೈರ್ ಸಿಲುಕಿಕೊಂಡ ಪರಿಣಾಮ ಮಗು ಮೃತಪಟ್ಟಿರುವ ಘಟನೆ ತಾಲೂಕಿನ ಸುಂಕಾತೊಣ್ಣೂರು ಸಮೀಪದ ಕಾಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಪಾಂಡವಪುರ ತಾಲೂಕಿನ ಕಾಳೇನಹಳ್ಳಿ ಗ್ರಾಮದ ಆಲೆಮನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದವರು ಸಂದೀಪ್ ಕುಮಾರ್ ಅವರ ಪುತ್ರ ಶಿವ (4) ಎಂಬ ಮಗು ಸಾವನ್ನಪ್ಪಿದೆ. ಟ್ರ್ಯಾಕ್ಟರ್ ಮೇಲೆ ಕುಳಿತು ಆಟವಾಡುವ ವೇಳೆ ಟ್ರ್ಯಾಕ್ಟರ್ ಕೀಯನ್ನು ಚಾಲನೆ ಮಾಡಿ ಅಲ್ಲಿಂದ ನೆಗೆದಿದೆ. ಆಗ ಟ್ರ್ಯಾಕ್ಟರ್ ಚಕ್ರಕ್ಕೆ ಸಿಲುಕಿಕೊಂಡ ಪರಿಣಾಮ ಮಗು ಸಾವನ್ನಪ್ಪಿದೆ. ಈ ಸಂಬಂಧ ಮೇಲುಕೋಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ಕಿರುಸುದ್ದಿ

ಹಿಂದುಗೆ ಬಿಕಾಂನಲ್ಲಿ 3ನೇ ರ್‍ಯಾಂಕ್

• ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2024-25ನೇ ಸಾಲಿನ 6ನೇ ಘಟಿಕೋತ್ಸವದ ಹಿನ್ನೆಲೆಯಲ್ಲಿ ಸ್ನಾತಕ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಿದ್ದು ಬಿ.ಕಾಂ ಪದವಿಯಲ್ಲಿ ಬಂಗಾರಪೇಟೆಯ ಎಸ್.ಡಿ.ಸಿ ಕಾಲೇಜಿನ ಹಿಂದು. ಎನ್ ಎಂಬ ವಿದ್ಯಾರ್ಥಿನಿ ಒಟ್ಟು 4200 ಅಂಕಗಳಿಗೆ 4090 ಅಂಕ (97.38%) ಪಡೆದು ಇಡೀ ವಿಶ್ವವಿದ್ಯಾಲಯಕ್ಕೆ 3ನೇ ರ್‍ಯಾಂಕ್ ಗಳಿಸಿದ್ದಾರೆ. ಈ ಸಂದರ್ಭದಲ್ಲಿ ಹಿಂದು ಎನ್ ರವರಿಗೆ ಎಸ್.ಡಿ.ಸಿ ಕಾಲೇಜಿನ ಕಾರ್ಯದರ್ಶಿ ಡಾ.ಉಷಾ ಗಂಗಾಧರ, ಪ್ರಾಂಶುಪಾಲ ಡಾ.ಎಸ್.ಎ. ಜಗದೀಶ್ ಮತ್ತು ಎಲ್ಲ ಉಪನ್ಯಾಸಕರು ಅಭಿನಂದಿಸಿ ಶುಭ ಕೋರಿರುತ್ತಾರೆ. ಈ ಕಾಲೇಜು 2018 ನೇ ಸಾಲಿನಿಂದ ಇಲ್ಲಿಯವರೆಗೂ ಬಿ.ಕಾಂ ಪದವಿಯಲ್ಲಿ 5 ರ್‍ಯಾಂಕ್ ಪಡೆದಿರುವುದಾಗಿ ಪ್ರಾಂಶುಪಾಲರು ತಿಳಿಸಿದ್ದಾರೆ.



ಅಕ್ರಮ ಸಾಗಣೆ: ಗೋವುಗಳ ರಕ್ಷಣೆ

• ಹಾಸನ: ನಗರದ ಮಂಗಳವಾರದ ಸಂತೆಯಲ್ಲಿ ಅಕ್ರಮವಾಗಿ 19ಕ್ಕೂ ಹೆಚ್ಚು ಗೋವುಗಳನ್ನು ಖರೀದಿಸಿ ಬೇರೆಡೆಗೆ ಸಾಗಿಸಲು ಮುಂದಾಗಿದ್ದವರನ್ನು ಹಿಡಿದ ವಿಹಿಂಪ ಮತ್ತು ಭಜರಂಗದಳದ ಕಾರ್ಯಕರ್ತರು ನಗರ ಪೊಲೀಸ್ ಠಾಣೆಗೆ ಒಪ್ಪಿಸಿದ ಘಟನೆ ನಡೆದಿದೆ.

ಈ ವೇಳೆ ಮಾತನಾಡಿದ ವಿಹಿಂಪ- ಭಜರಂಗದಳ ಪ್ರಾಂತ ಗೋ ರಕ್ಷಾ ಸಹ ಪ್ರಮುಖ್ ಶರತ್, ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾಗಿದ್ದರೂ, ಜಿಲ್ಲೆಯಲ್ಲಿ ಅಕ್ರಮ ಗೋ ಸಾಗಣೆ ಮತ್ತು ಹತ್ಯೆ ನಡೆಯುತ್ತಲೇ ಇವೆ ಎಂದು ಆರೋಪಿಸಿದರು. ಗೋರಕ್ಷಣೆಗಾಗಿ ಸರ್ಕಾರ ಕಟ್ಟುನಿಟ್ಟಿನ ಕಾನೂನು ಮಾಡಿದ್ದರೂ, ಅಕ್ರಮಕ್ಕೆ ಕಡಿವಾಣ ಬಿದ್ದಿಲ್ಲ. ಪೊಲೀಸರ ಕಣ್ತಪ್ಪಿಸಿ ಗೋವುಗಳನ್ನು ಸಾಗಿಸಲಾಗುತ್ತಿದೆ. ಇದರಿಂದ ಗೋ ರಕ್ಷಣೆ ಕೇವಲ ಕಾಗದದ ಮೇಲಿನ ಕಾನೂನಾಗಿ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು. ಬಕ್ರೀದ್ ಹಿನ್ನೆಲೆಯಲ್ಲಿ ಅಕ್ರಮ ಗೋ ಸಾಗಾಣಿಕೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮನವಿ ಸಲ್ಲಿಸಿದ್ದರೂ, ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಇಂದಿನ ಕಾರ್ಯಾಚರಣೆಯಲ್ಲಿ 19ಕ್ಕೂ ಹೆಚ್ಚು ಗೋವುಗಳನ್ನು ರಕ್ಷಣೆ ಮಾಡಲಾಗಿದ್ದು, ಹಾಸನದಿಂದ ಕೇರಳದ ಕಡೆಗೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ಈಗಾಗಲೇ ಮೂರಕ್ಕೂ ಹೆಚ್ಚು ವಾಹನ ಪತ್ತೆ ಹಚ್ಚಿದ್ದು, ಕಾರ್ಯಾಚರಣೆ ಮುಂದುವರಿಯಲಿದೆ ಎಂದರು.

ತಿರುಮಲಕ್ಕೆ 12 ಟನ್ ಟೊಮೆಟೊ

• ಕೋಲಾರ: ನಗರದ ಪಿ.ಸಿ. ಬಡಾವಣೆಯ ಪ್ರೇಮ್ ಕುಮಾರ್ ಹಾಗೂ ಅವರ ಸ್ನೇಹಿತರು ಮತ್ತು ತಿಮ್ಮಪ್ಪನ ಭಕ್ತರು ತಿರುಮಲ ತಿರುಪತಿ ಅನ್ನ ದಾಸೋಹಕ್ಕೆ ಕೋಲಾರದಿಂದ 12 ಟನ್ ಟೊಮೆಟೊ ಕಳಿಸಿಕೊಟ್ಟರು. ತಿರುಮಲದಲ್ಲಿ ನಡೆಯುವ ನಿತ್ಯ ದಾಸೋಹಕ್ಕಾಗಿ ಕೋಲಾರದ ಪಿಸಿ ಬಡಾವಣೆಯ ನಿವಾಸಿಯಾಗಿರುವ ಪ್ರೇಮ್ ಕುಮಾರ್ ಇಲ್ಲಿನ ಎಪಿಎಂಸಿ ಮಾರ್ಕೆಟ್‌ನಲ್ಲಿ ಹಣ್ಣು ಖರೀದಿ ಮಾಡಿ ಅದನ್ನು ತಿರುಮಲ ತಿರುಪತಿಯಿಂದ ಬಂದಿದ್ದ ವಾಹನದಲ್ಲಿ ಲೋಡ್ ಮಾಡಿ, ನಂತರ ಪಿಸಿ ಬಡಾವಣೆಯ ಪ್ರೇಮ್ ಕುಮಾರ್ ಅವರ ಮನೆಯ ಬಳಿ ವಾಹನಕ್ಕೆ ಪೂಜೆ ಸಲ್ಲಿಸಿ ನಂತರ ಅದನ್ನು ತಿರುಮಲ ತಿರುಪತಿಗೆ ಕಳಿಸಿಕೊಡಲಾಯಿತು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಜನ್ಮದಿನಾಚರಣೆ

ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ

• ಹೊಳೆನರಸೀಪುರ: ಭಾರತದ ಮಾಜಿ ಪ್ರಧಾನಮಂತ್ರಿಗಳು ಹಾಗೂ ಪ್ರಸ್ತುತ ರಾಜ್ಯಸಭಾ ಸದಸ್ಯರಾದ ಎಚ್.ಡಿ.ದೇವೇಗೌಡ ಅವರ ಜನ್ಮದಿನದ ಪ್ರಯುಕ್ತ ಪಟ್ಟಣದಲ್ಲಿ ಜನತಾದಳದ ಮುಖಂಡರು ಹಾಗೂ ಕಾರ್ಯಕರ್ತರು ಅರ್ಥಪೂರ್ಣವಾಗಿ ಜನ್ಮದಿನವನ್ನು ಆಚರಿಸಿದರು. ಪಟ್ಟಣದ ಪ್ರಮುಖ ವೃತ್ತವಾದ ಗಾಂಧಿ ವೃತ್ತದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದ ಬಳಿಕ, ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಹಂಪಲು ಹಂಚುವ ಮೂಲಕ ಸರಳ ಹಾಗೂ ಮಾದರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ದೇಶ ಮೆಚ್ಚಿದ ಮಣ್ಣಿನ ಮಗ: ಪ್ರಸನ್ನ

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಪುರಸಭಾ ಅಧ್ಯಕ್ಷರಾದ ಎಚ್.ಕೆ.ಪ್ರಸನ್ನ ಅವರು, ಪ್ರಧಾನಿಯಂತಹ ದೇಶದ ಅತ್ಯುನ್ನತ ಸ್ಥಾನದಲ್ಲಿದ್ದಾಗಲೂ ತಮ್ಮನ್ನು ತಾವು 'ಮಣ್ಣಿನ ಮಗ' ಎಂದೇ ಕರೆದುಕೊಂಡು ವಿನಮ್ರ ಭಾವ ತೋರಿದವರು ದೇವೇಗೌಡರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಲ್ಲಿಕೆಯಾಗಬೇಕೆಂಬ ಕಾಳಜಿ ಹೊಂದಿರುವ ಅವರು, ದೆಹಲಿಯ ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದ ಏಕೈಕ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರಾಜಕೀಯದ ಭೀಷ್ಮರಂತಿರುವ ಅವರಿಗೆ ಭಗವಂತನು ನೂರಾರು ಕಾಲ ಆಯುಷ್ಯ ನೀಡಲಿ ಎಂದು ಶುಭ ಹಾರೈಸಿದರು.

ದಕ್ಷಿಣ ಭಾರತದ ಹೆಮ್ಮೆ: ಜಗನ್ನಾಥ್: ಇದೇ ಸಂದರ್ಭದಲ್ಲಿ ಮುಖಂಡರಾದ ಎ.ಜಗನ್ನಾಥ್ ಮಾತನಾಡಿ, ಪ್ರಧಾನಮಂತ್ರಿ ಪದವಿ ಕೇವಲ ಉತ್ತರ ಭಾರತದವರಿಗೆ ಅಥವಾ ಬಂಡವಾಳಶಾಹಿಗಳಿಗೆ ಮಾತ್ರ ಮೀಸಲು ಎನ್ನುವಂತಿದ್ದ ಕಾಲದಲ್ಲಿ, ದಕ್ಷಿಣ ಭಾರತದಿಂದ ದೆಹಲಿ ಗದ್ದುಗೆ ಏರಿ ಆಳಿದ ಒಬ್ಬ ಸಾಮಾನ್ಯ ರೈತ ಮಗನ ಸಾಧನೆ ಅನನ್ಯವಾದದ್ದು ಎಂದರು.



ಯುವ ಪೀಳಿಗೆಗೆ ಪ್ರೇರಣೆ: ಚಂದ್ರಶೇಖರ್

ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಚಂದ್ರಶೇಖರ್ ಮಾತನಾಡಿ, ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ, ಸ್ವಂತ ಪರಿಶ್ರಮದಿಂದ ರಾಜ್ಯದ ಮುಖ್ಯಮಂತ್ರಿ ಹಾಗೂ ದೇಶದ ಪ್ರಧಾನಿ ಹುದ್ದೆಗೇರಿದ ದೇವೇಗೌಡರ ಯಶೋಗಾಥೆ ಲಕ್ಷಾಂತರ ಯುವಕರಿಗೆ ಪ್ರೇರಣೆಯಾಗಿದೆ. ನಾಡು, ನುಡಿ, ನೆಲ ಮತ್ತು ಜಲದ ಬಗೆಗೆ ಅವರಿಗಿರುವ ಅಪರಿಮಿತ ಕಾಳಜಿ ನಮ್ಮೆಲ್ಲರಿಗೂ ಸದಾ ಮಾದರಿ ಎಂದರು.

ಸರ್ಕಾರಿ ಆಸ್ಪತ್ರೆ ವೈದ್ಯರಿಂದ ಶಸ್ತ್ರಚಿಕಿತ್ಸೆ ಯಶಸ್ವಿ | ಸಾರ್ವಜನಿಕರ ಶ್ಲಾಘನೆ

ತುಂಡಾಗಿದ್ದ ಬಾಲಕಿ ಬೆರಳು ಮರುಜೋಡಣೆ

• ಹೊಳೆನರಸೀಪುರ: ತಾಲೂಕಿನ ಸಾರ್ವಜನಿಕ ಆಸ್ಪತ್ರೆಯು ತಾಲೂಕು ಮಟ್ಟದಲ್ಲಿಯೇ ಅತ್ಯುತ್ತಮ ವೈದ್ಯಕೀಯ ಸೇವೆ ನೀಡುವ ಮೂಲಕ ರಾಜ್ಯದ ಗಮನ ಸೆಳೆಯುತ್ತಿದ್ದು, ತಾಲ್ಲೂಕಿನ ಶ್ರವಣೂರು ಗ್ರಾಮದ ತನ್ನ ದೊಡ್ಡಪ್ಪನ ಮನೆಗೆ ಬಂದಿದ್ದ 13 ವರ್ಷದ ಬಾಲಕಿ ಸುಷ್ಮಿತಾ, ಬುಧವಾರ ಜೋಳದ ಕಡ್ಡಿ ಕತ್ತರಿಸುವಾಗ ಆಕಸ್ಮಿಕವಾಗಿ ಕೈ ಬೆರಳು ತುಂಡಾಗಿತ್ತು. ತಕ್ಷಣವೇ ಪೋಷಕರು ಬಾಲಕಿಯನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು.

ವೈದ್ಯರ ಸಮಯಪ್ರಜ್ಞೆ: ಆಸ್ಪತ್ರೆಯ ಕರ್ತವ್ಯ ನಿರತ ವೈದ್ಯರಾದ ಡಾ. ಪ್ರತಿಭಾ ಅವರು ಪರಿಸ್ಥಿತಿಯ ಗಂಭೀರತೆಯನ್ನು ಅರಿತು ತಕ್ಷಣ ಕಾರ್ಯಪ್ರವೃತ್ತರಾದರು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಸಂಕೀರ್ಣ ಶಸ್ತ್ರಚಿಕಿತ್ಸೆಯಲ್ಲಿ ಅತ್ಯಂತ ಜಾಗರೂಕತೆಯಿಂದ ತುಂಡಾಗಿದ್ದ ಬೆರಳನ್ನು ಯಶಸ್ವಿಯಾಗಿ ಮರುಜೋಡಿಸಿದ್ದಾರೆ. ಬಾಲಕಿ ಸದ್ಯ ಚೇತರಿಸಿಕೊಳ್ಳುತ್ತಿದ್ದು, ಪಟ್ಟಣ ಭಾಗದ ಆಸ್ಪತ್ರೆಯಲ್ಲಿ ಇಂತಹ ಸೂಕ್ಷ್ಮ ಶಸ್ತ್ರಚಿಕಿತ್ಸೆ ನಡೆದ ಬಗ್ಗೆ ಸಾರ್ವಜನಿಕರು ಹಾಗೂ ಪೋಷಕರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.



ಅತ್ಯಾಧುನಿಕ ಸೇವೆಗಳ ಕೇಂದ್ರ: ಆಸ್ಪತ್ರೆಯ ಸಾಧನೆಗಳ ಕುರಿತು ಮಾಹಿತಿ ನೀಡಿದ ಆಡಳಿತ ವೈದ್ಯಾಧಿಕಾರಿ ಡಾ. ಮಂಜುಳಾ, ನಮ್ಮ ಆಸ್ಪತ್ರೆಯು ತಾಲೂಕು ಮಟ್ಟದಲ್ಲೇ ಅತ್ಯುತ್ತಮ ಸೌಲಭ್ಯಗಳನ್ನು ಹೊಂದಿದೆ. ರಾಜ್ಯದ ಇತರೆಲ್ಲಾ ತಾಲೂಕು ಆಸ್ಪತ್ರೆಗಳಿಗಿಂತ ಇಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿದ್ದು, ವಾರ್ಷಿಕ ಸುಮಾರು 2.5 ರಿಂದ 3 ಲಕ್ಷ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ, ಎಂದರು.

ಸುಸಜ್ಜಿತ ಐಸಿಯು: ತಾಲೂಕು ಮಟ್ಟದ ಆಸ್ಪತ್ರೆಯಲ್ಲೇ 20 ಹಾಸಿಗೆಗಳ ಸುಸಜ್ಜಿತ ಐಸಿಯು ಘಟಕವಿರುವುದು ಇಲ್ಲಿನ ವಿಶೇಷ.

ವಿವಿಧ ವಿಭಾಗಗಳು: ಡಯಾಲಿಸಿಸ್, ಇ.ಎನ್.ಟಿ (ಕಿವಿ, ಮೂಗು, ಗಂಟಲು) ಮತ್ತು ಕಣ್ಣಿನ ಚಿಕಿತ್ಸೆಗಾಗಿ ತಜ್ಞ ವೈದ್ಯರ ತಂಡ ನಿರಂತರವಾಗಿ ಲಭ್ಯವಿದೆ. ತುರ್ತು ಸಂದರ್ಭಗಳಲ್ಲಿ (ಹಾವು ಕಡಿತ, ಅಪಘಾತ, ಹೃದಯಾಘಾತ ಅಥವಾ ಬಿಪಿ ಏರುಪೇರಾದಾಗ) ಮೊದಲ ಒಂದು ಗಂಟೆ ಅಂದರೆ "ಗೋಲ್ಡನ್ ಅವರ್" ಅತ್ಯಂತ ನಿರ್ಣಾಯಕ. ಹೃದಯಾಘಾತವಾದ 17 ರಿಂದ 18 ಜನರಿಗೆ ಇಲ್ಲಿನ ಫಿಸಿಷಿಯನ್‌ಗಳು ಸಕಾಲದಲ್ಲಿ 'ಥ್ರೊಂಬೋಲೈಸಿಸ್' (Ukwspdsoፀ) ಚಿಕಿತ್ಸೆ ನೀಡುವ ಮೂಲಕ ಪ್ರಾಣ ಉಳಿಸಿದ್ದಾರೆ. ಸಾರ್ವಜನಿಕರು ಇಂತಹ ತುರ್ತು ಸಂದರ್ಭಗಳಲ್ಲಿ ವಿಳಂಬ ಮಾಡದೆ ಆಸ್ಪತ್ರೆಗೆ ಆಗಮಿಸಿ ಚಿಕಿತ್ಸೆ ಪಡೆಯಬೇಕು ಎಂದು ಡಾ. ಮಂಜುಳಾ ಮನವಿ ಮಾಡಿದ್ದಾರೆ. ಹೊಳೆನರಸೀಪುರ ಸಾರ್ವಜನಿಕ ಆಸ್ಪತ್ರೆಯು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಆಶಾಕಿರಣವಾಗಿದ್ದು, ಗುಣಮಟ್ಟದ ವೈದ್ಯಕೀಯ ಸೇವೆ ನೀಡುತ್ತಿದೆ.

ಕಾಂಗ್ರೆಸ್‌ಗೆ ಗೆಲ್ಲುವ ವಿಶ್ವಾಸವಿಲ್ಲ: ಛಲವಾದಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲ್ಲುವ ಭರವಸೆ ಇಲ್ಲದ ಕಾರಣ ಪದೇ ಪದೆ ಚುನಾವಣೆಯನ್ನು ಮುಂದಕ್ಕೆ ಹಾಕುವ ನಾಟಕವಾಡುತ್ತಿದೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಬಿಎ ಚುನಾವಣೆಗೆ ಎರಡು ತಿಂಗಳು ಕಾಲಾವಕಾಶವನ್ನು ಸುಪ್ರೀಂ ಕೋರ್ಟ್ ನೀಡಿದೆ. ಮೂರು ತಿಂಗಳು ಕಾಲಾವಕಾಶವನ್ನು ಸರ್ಕಾರ ಕೇಳಿತ್ತು. ಆದರೆ, ಎರಡು ತಿಂಗಳು ಮಾತ್ರ ನೀಡಿದೆ. ಚುನಾವಣೆಯ ಬಗ್ಗೆ ಸಮೀಕ್ಷೆ ಮಾಡಿಸಿದ್ದಾರೆ. ಅವರಿಗೆ ಗೆಲುವಿನ ವರದಿ ಸಿಕ್ಕಿಲ್ಲ, ಆದ್ದರಿಂದ ಹೇಗಾದರೂ ಮಾಡಿ ಚುನಾವಣೆಯನ್ನು ಮುಂದಕ್ಕೆ ಹಾಕಲು ನೋಡಿದ್ದರು ಎಂದು ದೂರಿದರು. ಈಗಾಗಲೇ ಚುನಾವಣೆ ನಡೆಸಬೇಕು ಎಂದು ಸರ್ಕಾರಕ್ಕೆ ಸೂಚನೆ ಇತ್ತು. ಆದರೂ ಇವರು ಕೋರ್ಟ್ ಮೊರೆ ಹೋಗಿದ್ದರು. ಮತ್ತೆ ಮತ್ತೆ ಮನವಿ ಸಲ್ಲಿಸಿ ಮುಂದಕ್ಕೆ ಹಾಕಲು ನೋಡಿದ್ದರು. ಸೋಲು-ಗೆಲುವು ರಾಜಕೀಯದಲ್ಲಿ ಇದ್ದಿದ್ದೇ. ಒಂದು ಸಾರಿ ನಾವು ಗೆಲ್ಲಬಹುದು. ಇನ್ನೊಂದು ಬಾರಿ ಬೇರೆಯವರು ಗೆಲ್ಲಬಹುದು. ಆದರೆ, ಯಾರೂ ವ್ಯವಸ್ಥೆ ಕೆಡಿಸುವ ಕೆಲಸ ಮಾಡಬಾರದು. ಆದ್ದರಿಂದ ಕೋರ್ಟ್ ಆದೇಶವನ್ನು ಗೌರವಿಸಬೇಕು. ಇಲ್ಲದೇ ಹೋದರೆ ಮತ್ತಷ್ಟು ಸೋಲು ಕಾಂಗ್ರೆಸ್‌ಗೆ ಕಟ್ಟಿಟ್ಟ ಬುತ್ತಿ ಎಂದು ಹೇಳಿದರು.

ಕೃಷಿಯಿಂದ ಆರ್ಥಿಕ ಸಬಲೀಕರಣ ಅಸಾಧ್ಯ



• **ಬೆಂಗಳೂರು:** ಕೇವಲ ಕೃಷಿಯಿಂದ ಮಾತ್ರ ರೈತರು ಆರ್ಥಿಕವಾಗಿ ಸಬಲೀಕರಣವಾಗಲು ಸಾಧ್ಯವಿಲ್ಲ, ಪೂರಕ ಚಟುವಟಿಕೆಗಳಾದ ಜೇನು ಕೃಷಿಯಂತಹ ಉಪಕಸುಬುಗಳನ್ನು ಅಳವಡಿಸಿಕೊಂಡಾಗ ಮಾತ್ರ ಕೃಷಿಯಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ಜಿಕೆವಿಕೆ ಕುಲಪತಿ ಡಾ. ಎಸ್.ವಿ.ಸುರೇಶ್ ಅಭಿಪ್ರಾಯಪಟ್ಟರು. ಬುಧವಾರ ನಗರದ ಜಿಕೆವಿಕೆ ವಿಭಾಗ ಹಾಗೂ ಅಖಿಲ ಭಾರತ ಅಸಂಘಟಿತ ಜೇನು ನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆಯಿಂದ ವಿಶ್ವ ಜೇನು ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜೇನು ಕೃಷಿಯನ್ನು ಒಂದು ಉದ್ಯಮದ ರೀತಿ ಸ್ವೀಕರಿಸಿ ಗುಣಮಟ್ಟಕ್ಕೆ ಒತ್ತು ನೀಡಿದಾಗ ಮಾತ್ರ ಹೆಚ್ಚಿನ ಲಾಭ ಗಳಿಸಬಹುದು. ಕೃಷಿಯಲ್ಲಿ ಜೇನಿನ ನೊಣಗಳ ಪಾತ್ರ ಅತ್ಯಂತ ಮಹತ್ವವಾಗಿದ್ದು, ಪರಾಗಸ್ಪರ್ಶದಿಂದಾದ ಶೇ.40 ರಿಂದ 45 ರಷ್ಟು ಆಹಾರದ ಉತ್ಪಾದನೆಯಲ್ಲಿ ಹೆಚ್ಚಳವಾಗುತ್ತದೆ ಎಂದು ಹೇಳಿದರು.

ಸಾರ್ವಜನಿಕ ಪ್ರಕಟಣೆ

PUBLIC NOTICE

My client **Hanama Gouda**, S/o Mahadevappa, Near Haralimara, Kora, Tumkur, Karnataka-572128. he has lost the **Sale Deed of Documents No. TMK-1-03790-2023-24 on 09/05/2023. in KORA Tumkur.** he has lodge a Police Complaint **E-Lost Report No. 2199650/ 2026.** If anybody finds the above said documents please handover the below address.

PRUTHVI LEGAL, K M Lepakshi, Advocate 36/1, 1st Floor, Bagalgunte Bus Stop Hesaraghatta Main Road, Bangalore-73. Mobile 9880098080

PUBLIC NOTICE

I, the undersigned, hereby inform the general public that my client, **Sri. Sujith Rao**, S/o Late Sri. Ramanand Rao, aged about 55 years, residing at No. 3-24-2087, Kadri Temple Road, Kankanady Post, Mangalore Taluk, Dakshina Kannada District, Karnataka – 575002, is the absolute owner and in lawful possession of the residential property bearing **Site No. 51, E-Khata No. 1502001010800401490, Property No. 1558/51, formed in Sy. No. 539/1-8, situated at Marasuru Village**, Kasaba Hobli, Anekal Taluk, Bengaluru Urban District, measuring East to West: 50 feet and North to South:30 feet, totally measuring 1500 square feet; the said property was originally purchased by Smt. Lakshmi Subbanna Bhat, W/o Muguli Subbanna Bhat, under a registered Sale Deed dated 30-03-2011, vide Document No. ANK-1-04304-2010-11 before the Sub-Registrar, Anekal, and thereafter she executed a registered Will dated 15-03-2021, vide Document No. VTL-3-00118-2020-21 before the Sub-Registrar, Vitla, bequeathing the said property in favour of my client, and upon her demise on 06-04-2021 the said Will came into effect, pursuant to which my client has acquired absolute title and has got the Khata transferred to his name; therefore, any person(s) having any right, title, interest, claim, or objection whatsoever over the said property are hereby called upon to submit their objections, if any, in writing to the undersigned within 15 (fifteen) days from the date of publication of this notice, failing which it shall be presumed that no such claims exist and my client's title shall be treated as clear and marketable.

MAHESH .C, Advocate
Office No. 5, Yellappa Building, Near Court Compound, Attibele Road, Anekal Taluk, Bengaluru Urban District.
Phone: +91-9448833024, Date: 20-05-2026

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

IN THE COURT OF THE V ADDL. CITY CIVIL AND SESSIONS JUDGE AT BENGALURU
O.S.No. 1116/2025 (CCH-13)

Between : SRI. P. SRINIVAS REDDY, S/o P. Shankar Reddy, Aged about 66 years, R/at. Flat G-5, Navanami Lavender, Sampige Halli, Bengaluru-560064 **...Plaintiff**

And: Smt. Shanthamma .M and Others **...Defendants**

SUMMONS TO DEFENDANTS No. 5 & 6 U/o. RULE 20 OF CPC

5. SRI. ABDUL KHAUM SHAIK S/o Abdul Ghani Shaik, Aged about 51 years, R/at. Rajanna Layout, RBI Colony, Bengaluru-560011.

6. SRI. M. YOUSUF KHAN S/o. M. Ahmed, Aged about 52 years, R/at No. 188, 1st Block East, Jayanagar, Bengaluru-560011.

WHEREAS the plaintiff hereby instituted the above suit against you and other defendants for the relief of Declaration and other consequential relief's. You are hereby, summoned to appear before this I Hon'ble court in person or pleader **on 17.06.2026 at 11.00 AM** to answer the same, failing which the above suit will be disposed off ex-parte.

SCHEDULE PROPERTY

All that piece and parcel of the residential property bearing site No. 122, earlier khatha No.364 of Doddabettahalli Village, carved in Sy No.20 Chikkabettahalli Village, Yelahanka Hobli, Bengaluru, now coming within the BBMP jurisdiction and having been assigned Khatha No.364/122 and PID No.033-W1097-35, measuring East to West 40 feet and North to South 30 feet totally measuring 1200 sq feet, bounded on:

East by : Site No. 145, **West by** : Road, **North by** : Road, **South by** : Site No. 123.

Given under my hand and seal of the court on this the 09th day of April 2026.

By Order of the Court, Senior Sheristedar, City Civil Court, Bengaluru

Advocate for Plaintiff : **V. Vishwanath. Ganesh Puttappa M.,** Advocate
No. 113, 2nd Floor, Hospital Road, (Behind Mysore Bank Head Office, K.G. Road), Bengaluru-560053.

IN THE COURT OF THE CIVIL JUDGE AND JMFC AT KOLAR
P AND SC No 3/2026

PETITIONER: Smt.MUNIRATHNAMMA
D/o Late Thirumalappa, W/o Umeshkumar, Aged about 40 years, R/o Maruthinagara, Srinivasapur Town and Taluk, Kolar District.

V/s

RESPONDENTS : Nil

NOTICE

The petitioner has filed the above petition under section 372 of Indian Succession Act for issue of Succession Certificate on the death benefits/ insurance amount of Gangamma W/o Thimmarayappa R/o Belluru Village, Narasapura Hobli, Kolar Taluk and District in her favour with respect to schedule properties. The persons who are interested in the above matter should appear before the Hon'ble court on 23.06.2026 at 11.00 am, failing which the matter will be heard in their absence.

SCHEDULE

PF in universal account No. 100064696562 member ID No. PYKR 00535690000000028
and Bank account No.67310100001085 Bank of Baroda, Narasapura Branch in the name of deceased Gangamma W/o Thimmarayappa plus its into if any.

Given under my hand and seal of the court on this day 20.05.2026.

By order of the court
Chief Ministerial Officer, Prl. Civil Judge & JMFC at Kolar

Advocate for petitioner:
Sri.M.NAGARAJA
Srinivasapur Town.

BEFORE THE EX-OFFICIO DEPUTY DIRECTOR OF LAND RECORDS BENGALURU URBAN DISTRICT AT BENGALURU
Survey Appeal. No. 24/2026

BETWEEN : Smt. K.M. SHWEETHA, And others **...Appellants**

AND : THE THASILDAR And others **...Respondents**

NOTICE/SUMMONS TO RESPONDENT No. 13,15,17,20

SRI. AMBRISH RUS, S/o Krishnappa, Aged about 40 years, R/at. Park Road, Chinnappa layout, Hebbala, Kempapura, Bangalore-24. **...Respondent No. 13**

SRI. K N NARAYANASWAMY, S/o Nanjundappa, Aged about 55 years **...Respondent No. 15**

SRI. MUNISWAMY GOWDA, S/o Late Munikempaiah, Aged about 48 years, **...Respondent No.17**

SRI.RAMANJINAPPA, S/o Late Munikempaiah, Aged about 40 years. **...Respondent No.20**

Respondents No. 15 , 17 & 20 are Residing at, Kodagalahatti Village, Hunasamaranahalli Post, Jala Hobli, Yelahanka Taluk, Bengaluru.

WHEREAS, the Appellants above named has preferred the above Appeal against all of you and other respondent before the Ex-Officio Deputy Director of Land Records Bengaluru Urban District At Bengaluru, seeking the relief of Cancellation of the Phodi and other consequential reliefs. You are hereby summoned to appear before the Ex-Officio Deputy Director of Land Records Bengaluru Urban District At Bengaluru in Person/s or through a pleader **on 02.06.2026 at 3.00 PM** to answer the same, failing which the suit will be heard and decide in your absence.

Given under my hand and seal of this Court at Bengaluru on the day of 28.04.2026.

By Order of the Court, ಪದನಿಮಿತ್ತ ಉಪನಿರ್ದೇಶಕರು, ಭೂದಾಖಲೆಗಳು, ಬೆಂಗಳೂರು ನಗರ ಜಿಲ್ಲೆ.

ADVOCATE OF APPELLANTS : **S. Harish Kumar** office at No. 11, 8th Cross, near Bannappa Park, Cubbonpet, Bengaluru-560002.

PUBLIC NOTICE
LOSS OF ORIGINAL DOCUMENTS

This is to notify to the general public that our client **Smt. VASANTHA LAKSHMI J**, W/o Mohan Kumar B, Residing at No. 16, 8th Main Road, Venkatappa Layout, Hosakerehalli Bangalore-560085, has lost Original Gift deed dated 24.03.2016 executed by Smt. Chikkamma, in favor of **Smt. VASANTHA LAKSHMI J**, W/o Mohan Kumar B, which was registered as Doc. No. CMP-1-10932-2015-16, in Book 1, stored in CD no. CMPD157, registered in the office of Sub Registrar, Basavanagudi (Chamarajpete), Bangalore with respect to Northern portion of property bearing No.16, House List no. 16, Gramathana Khata No. 23/1 and 24/3, situated at Banashankari 3rd stage, Hosakerehalli Village, Uttarahalli Hobli, Bangalore South taluk, measuring East to West 50 feet and North to South 15 feet in all measuring 750 sq ft. In this regard our client had lodged complaint on 19.05.2026, in Bangalore City, with Lost Report No. 2211134/2026, at Bengaluru City Police unit.

Any person/s claiming any right, title, interest, lien, charge, encumbrance, lease, mortgage, inheritance, agreement, or claim whatsoever in respect of the Schedule Property or any part thereof, or raising any objection to the proposed transaction, are hereby required to submit such claim(s) or objection(s) in writing, together with copies of all supporting documents, to the undersigned, within fifteen (15) days from the date of publication of this notice. In the event no claim(s) or objection(s) are received within the aforesaid period, it shall be deemed that there are no subsisting claims or encumbrances affecting the Schedule Property, and our client shall be at liberty to proceed with the transaction without any further reference to any such person(s) or entity(ies).

SCHEDULE PROPERTY

All that piece and parcel of Northern portion of property bearing No.16, House List no. 16, Gramathana Khata No. 23/1 and 24/3, situated at Banashankari 3rd stage, Hosakerehalli Village, Uttarahalli Hobli, Bangalore South taluk, measuring East to West 50 feet and North to South 15 feet in all measuring 750 sq ft and bounded on:

East by : Road,
West by : Site No.18,
North by : Private Property
South by : Remaining portion of same Site No.

Adv. MEENA .S, Advocate
EXPERT JURIST LLP,
No. 61, 3rd Cross, Honnappa Layout, Kengunte Cross, Mallathahalli, Bangalore-560 056.
9900725633 / 8296907391

BEFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.
Dispute No. DRB-III/CHITS/ 134/2025-26.

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9 of Palace Ground, Bellary Main Road, Sadashiva Nagar, BANGALORE-560 080.
Branch: BANASHANKARI
Represented by its Foreman & Branch Manager, **Mr. K. BALACHANDRAN. ....DISPUTANT**

AND: Ms. K. LEKHA & ORS.

1. Ms. K. LEKHA, W/o Mr. C. Rukmangada, Major, Prop: M/s. Yohish Enterprises, F No. B-308, Gopalan Olympia, Kumbalagodu, Mysore Road, BENGALURU - 560 074.

2.Mr. C. RUKMANGADA, S/o Mr. N. S. Chikkanna, Major, Prop: M/s. S. R. Enterprises, F No. 308, Gopalan Olympia Apartment, Kumbalagodu, Mysore Road, BENGALURU - 560 074.

3.Mr. K. SUNILMURTHY, S/o Mr. A. P. Krishnamurthy, Major, Prop: M/s. Vijaya Enterprises, No. 5, 2nd Cross, Cauvery Nagar, Tataguni, Agara main Road, BENGALURU - 560 082.

4.Mr. SUMANTH, S/o Mr. K. Shankar Shetty, Major, Prop: M/s. Sri Kadamba Sports & Fitness, No. 60/A, G Floor, 1st N Block, Dr. Rajkumar Road, Rajajinagar, BENGALURU - 560 010.

5. Mr. A. GIRISH, S/o Mr. Ashwtha narayana, Major, Leader-2 Production, Molex India Pvt. Ltd., KIADB Aero Space Park, Devanahalli, BENGALURU RURAL DT. - 562 123.
.... OPPONENTS.

SUIT NOTICE BY PAPER PUBLICATION TO OPPONENT Nos. 1 to 5.

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs.2,91,746/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent Nos. 1 to 5 by S.P.A.D. have been returned unserved. Therefore, the Opponent Nos. 1 to 5 named above are therefore hereby directed to appear before me at the Branch Office of the Disputant Company at Banashankari, at Site # 287, 11 Floor, Banashankari LayOut, 3rd Stage, 4th Phase, 7th Block, Bangalore - 560 085 on 5.06.2026 at 3:00 PM with all relevant documents failing which the above dispute will be decided as per law, in their absence.

Given Under my hand & seal on 11.05.2026.

Gangadhara M J
Nominee of Deputy Registrar of Chits, III Zone, Bangalore.
ADVOCATE FOR DISPUTANT:
K. R. DINAKAR ADVOCATE
#66, 4th Cross, Ashok Nagar, Near N. R. Colony, BANGALORE-560 050.
Mob: 94485 39699.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀಳಗಿ.

ಕ್ರ.ಸಂ.ಕೃಉಮಾಸ/ಬೀ/ಆಭಿಕ/35/2026-27. ದಿನಾಂಕ:18-05-2026.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	PROVIDING INFRASTRUCTURE FACILITIES AT MAIN MARKET YARD OF APMC BILAGI UNDER RIDF-31 SCHEME-2025-26 Work Indent No:APMC/2025-26 /OW/ WORK_INDENT870	4,10,96,779=00 (GST ಹೊರತು ಪಡಿಸಿ)	6,17,000=00

ಮೇಲ್ಕಾಣಿಸಿದ ಕಾಮಗಾರಿಯನ್ನು ಕಾರ್ಯಗತಗೊಳಿಸಲು KPP PORTAL ಮೂಲಕ ಟೆಂಡರ ಹೊರಡಿಸಲಾಗಿದ್ದು, ಬಿಡ್ ಪೂರ್ವಭಾವಿ ಸಭೆ ಮತ್ತು ಟೆಂಡರ ತಕರಾರು ಸಮಜಾಯಿಸಿ ನೀಡುವ ದಿನಾಂಕ:16-06-2026 ಬೆಳಗ್ಗೆ 11.30 ಗಂಟೆಗೆ ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ:22-06-2026 ರ ಸಾಯಂಕಾಲ 5.30 ಗಂಟೆಯವರೆಗೆ ನಿಗದಿ ಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಹಾಗೂ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯದರ್ಶಿ, ಕೃಉಮಾಸ, ಬೀಳಗಿ. DIPR/BGK/RO-NO-55/KSMCA/2026-27 ಸಹಿ/-ಆಡಳಿತಾಧಿಕಾರಿಗಳು, ಕೃಉಮಾಸ, ಬೀಳಗಿ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ದೂರವಾಣಿ: 0816-2294901
ಇ-ಮೇಲ್: tumakuru.ro@ktkbank.com
ವೆಬ್‌ಸೈಟ್: www.karnatakabank.bank.in
CIN: L85110KA1924PLC001128

ಚಿನ್ನಾಭರಣ ಮಾರಾಟ ಸೂಚನೆ (ಅಡವಿಟ್ಟ ಚಿನ್ನದ ವಸ್ತುಗಳ ಹರಾಜು)

ಕ್ರ. ಸಂ	ಚಿನ್ನದ ಸಾಲದ ಖಾತಾ ಸಂಖ್ಯೆ	ಸಾಲಗಾರರ ಹೆಸರು	ಮೊತ್ತ	ಒಟ್ಟು ತೂಕ	ನಿವ್ವಳ ತೂಕ
1	0778702400004801		ರೂ.8,70,400/-	78.600	64.000
2	0778702400004501		ರೂ.10,60,800/-	86.700	78.000

ದಿನಾಂಕ: 18.05.2026
ಸ್ಥಳ : ತುಮಕೂರು

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮಂಡ್ಯ
ದೂರವಾಣಿ ಸಂಖ್ಯೆ:08232-224195 ಇ-ಮೇಲ್:eepredmandya@gmail.com

ದಿನಾಂಕ: 15.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2026-27

ಕರ್ನಾಟಕ ಸರ್ಕಾರದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ ನಾಗಮಂಗಲ ತಾಲ್ಲೂಕಿನ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ **2025-26ನೇ** ಸಾಲಿನ ಲೆಕ್ಕಶೀರ್ಷಿಕೆ **4515-00-102-1-03-386** ಯೋಜನೆಯಡಿ ಅನುಮೋದನೆಯಾಗಿರುವ ನಾಗಮಂಗಲ ತಾಲ್ಲೂಕು ಪಂಚಾಯತಿ ಕಟ್ಟಡ ನಿರ್ಮಾಣ ಕಾಮಗಾರಿಯ ಟೆಂಡರ್‌ಗೆ ಇಡಲಾದ ಮೊತ್ತ **ರೂ.403.07ಲಕ್ಷ** ಮೊತ್ತದ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in, KPP Portal** ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ:06.06.2026ರ ಸಂಜೆ 4.00ಗಂಟೆವರೆಗೆ.** ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಮಂಡ್ಯ

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ,
ನಂ. 205, ಜಿಲ್ಲಾ ಆಡಳಿತ ಭವನ, 2ನೇ ಮಹಡಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ. ದೂರವಾಣಿ: 08226 224429
ಇ-ಮೇಲ್ : dpocham@gmail.com

ಸಂಖ್ಯೆ: ಸಿ1/ಸ.ಶಿ.ಕ/ಹೊ.ಗು.ಸೇ/04/2026-27 ದಿನಾಂಕ: 20.05.2026

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್

ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಕಛೇರಿಗೆ 01 ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್, 02 ಡಾಟಾ ಎಂಟ್ರಿ ಆಪರೇಟರ್ ಮತ್ತು 01 'ಡಿ' ದರ್ಜೆ ನೌಕರರು ಹಾಗೂ ಬ್ಲಾಕ್ ಹಂತಕ್ಕೆ 5 ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, 05 ಲೆಕ್ಕ ಸಹಾಯಕರು, 05 ಡಾಟಾ ಎಂಟ್ರಿ ಆಪರೇಟರ್ ಮತ್ತು 05 "ಡಿ" ದರ್ಜೆ ನೌಕರರು ಜಿಲ್ಲೆಯಲ್ಲಿ ಒಟ್ಟು 24 ಜನರ ಹೊರಗುತ್ತಿಗೆ ಸೇವೆಯನ್ನು ಪಡೆಯಲು ಅಂದಾಜು ಮೊತ್ತ ರೂ.46.22 ಲಕ್ಷಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ ಟೆಂಡರ್‌ನ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯು ಹೊಂದಿರುತ್ತಾರೆ. ಆಸಕ್ತ ಮತ್ತು ಅರ್ಹ ಏಜೆನ್ಸಿಯವರು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಆನ್‌ಲೈನ್ ಮೂಲಕ ದಿನಾಂಕ:03.06.2026ರೊಳಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ತೆರೆಯುವ ದಿನಾಂಕವನ್ನು ಮುಂದೂಡಲ್ಪಟ್ಟಲ್ಲಿ ಮುಂದೂಡಲಾದ ದಿನಾಂಕವನ್ನು ಪರಿಗಣಿಸುವುದು. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.inನಲ್ಲಿ ನೋಡಬಹುದಾಗಿದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ,

ಸಂ. ವಾಸಾಸಂಇ.ಚಾ.ನಗರ/121/2026-27

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ: ಗದಗ, ರಾಜ್ಯ: ಕರ್ನಾಟಕ
ದೂ:08372-259932, ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ಕಾಂ.ವಿ/ಪಿಸು/ ಟೆಂಡರ್/2026-27 ದಿನಾಂಕ: 20-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನ **ಒಟ್ಟು 01** ಕಾಮಗಾರಿಗಳಿಗೆ **ಇಂಡೆಂಟ್ ನಂ:DMA/2026-27/OW/WORK_INDENT:58650** ಟೆಂಡರ್‌ಗಿಟ್ಟ ಮೊತ್ತ **ರೂ.11.50 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, ವಾರ್ಡ ನಂ 22 ಹಾಗೂ ವಾರ್ಡ ನಂ 03ರಲ್ಲಿ ಟೆಂಡರ್ ಕರೆದಿದ್ದು, **http://kppp.karnataka.gv.in** ನಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**01-06-2026 Up to 16.00 Hours**
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**02-06-2026 Up to 16.30 Hours**

ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

DIPR/Gadag/78/Deshpandepublicity/2026-27

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ವೆಬ್‌ಸೈಟ್ : www.mybmtc.com

ಸಂಖ್ಯೆ:ಬೆಮಸಾಸಂ/ಕೇಕ/ಕಾಎ/ಕಾವಿಇ/259/2026-27 ದಿನಾಂಕ: 19.05.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ:4/2026-27

ಕೆಲಸದ ಹೆಸರು: (1) ... ಇ.ಎಂ.ಡಿ. ಮೊತ್ತ ರೂ.85,000/-. (2) ... ಇ.ಎಂ.ಡಿ. ಮೊತ್ತ ರೂ.1,02,000/- (3) ... ಇ.ಎಂ.ಡಿ. ಮೊತ್ತ ರೂ.85,000/-. (4) ... ಇ.ಎಂ.ಡಿ. ಮೊತ್ತ ರೂ.21,250/-. ಭಾಗವಹಿಸುವ ಗುತ್ತಿಗೆದಾರರು https://kppp.karnataka.gov.in ವೆಬ್‌ಸೈಟ್‌ನಲ್ಲಿ ... ಟೆಂಡರ್ ಸಲ್ಲಿಸಲು ಕಡೆ ದಿನಾಂಕ:06.06.2026. ಟೆಂಡರ್ ತೆರೆಯುವ ದಿನಾಂಕ:08.06.2026

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ CALL-3 (ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:169 ದಿನಾಂಕ: 18-05-2026. ಕಾಮಗಾರಿಯ ಹೆಸರು : ಯೋಜನೆಯ ಉಳಿತಾಯದ ಮೊತ್ತದಡಿ ದಾಂಡೇಲಿ ಪಟ್ಟಣ ಒಳಚರಂಡಿ ಯೋಜನೆಯಡಿ ನಿರ್ಮಿಸಲಾಗಿರುವ ವಿವಿಧ ಘಟಕಗಳ 5 ವರ್ಷಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ. (ಇದುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2025-26/WS/WORK_INDENT/490/CALL-3. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/206/2026-27 ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ
ಅಪ್ಪಾಜಿ ಲೇಔಟ್, ಕೊತ್ತಿಪುರ ಗ್ರಾಮ (ಹನೇರಹಳ್ಳಿ ರೈಲ್ವೆಗೇಟ್ ಹತ್ತಿರ), ರಾಮನಗರ
ಬೆಂಗಳೂರು ದಕ್ಷಿಣ ಜಿಲ್ಲೆ-562159. Phone: 080-29911780., E-Mail: ddkandmgka@gmail.com

ಸಂ.: ಗಭೂಇ/ಉನಿಬೆಂದ/ಬಹ/2026-27 ದಿನಾಂಕ: 20.05.2026

ಬಹಿರಂಗ ಹರಾಜು ಪ್ರಕಟಣೆ

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ, ಮಾಗಡಿ ತಾಲ್ಲೂಕು, ಹಲಸಬೆಲೆ ಗ್ರಾಮದ ಸರ್ವೆ ನಂ.58 ರ 6-35 ಎಕರೆ ಪ್ರದೇಶದ ಕುರಿತು ದಿನಾಂಕ:03.10.2019 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಸರ್ಕಾರಕ್ಕೆ ವರದಿ ನೀಡಿದ್ದು, ಸದರಿ ವರದಿಯಲ್ಲಿ ಸರ್ವೆ ನಂ.58 ರ ಅರ್ಜಿತ ಪ್ರದೇಶದಲ್ಲಿ ಈ ಹಿಂದೆ ಗಣಿಗಾರಿಕೆ ನಡೆಸಿ 103 ಅಲಂಕಾರಿಕ ಶಿಲಾದಿಮ್ಮಿಗಳನ್ನು ತೆಗೆದು ಸಾಗಾಣಿಕೆ ಮಾಡದೇ ಸ್ಥಳದಲ್ಲೇ ದಾಸ್ತಾನು ಮಾಡಿದ್ದು, ಈ ಸಂಬಂಧ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ ಸಭೆಯು ಸರ್ವಾನುಮತದಿಂದ ಹರಾಜು ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಿ ಅನುಮೋದನೆ ನೀಡಲಾಗಿರುತ್ತದೆ. **ಅದರಂತೆ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಉಪವಿಭಾಗಾಧಿಕಾರಿಗಳು ಕಂದಾಯ ಇಲಾಖೆ ಮತ್ತು ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ರವರ ಸಮ್ಮುಖದಲ್ಲಿ ದಿನಾಂಕ: 09.06.2026 ರಂದು ಮಧ್ಯಾಹ್ನ 12.00 ಗಂಟೆಗೆ ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಇಲ್ಲಿ 103 ಅಲಂಕಾರಿಕಾ ಶಿಲಾದಿಮ್ಮಿಗಳನ್ನು "ಎಲ್ಲಿದೆಯೋ ಹೇಗಿದೆಯೋ ಹಾಗೆಯೇ" ಹರಾಜು ನಡೆಸಲಾಗುವುದು** ಎಂದು ಸಾರ್ವಜನಿಕರ ಗಮನಕ್ಕೆ ಈ ಮೂಲಕ ಪ್ರಕಟಿಸಲಾಗಿದೆ.

ಕ್ರ. ಸಂ.	ಖನಿಜದ ವಿಧ, ಕೋಡ್ ಸ್ಥಳ, ಕನಿಷ್ಠ ದರ ಮತ್ತು ರಾಜಧನ ವಿವರ (As per Schedule-II, III & Form O)	ಕ್ಯೂಬಿಕ್ ಮೀ.	ಖನಿಜ ಮೌಲ್ಯ ರೂ.ಗಳಲ್ಲಿ	ಇಎಂಡಿ ಮೊತ್ತ (25%) ರೂ.ಗಳಲ್ಲಿ
1	1. As per Form O, Granites: (3) Pink Gneisses and Mygmatites (Multicoloured Ganites) Granites: (a) with Fractures and Large Black patches and unsized ಎಂದು ಪರಿಗಣಿಸಬಹುದಾಗಿದ್ದು As per Schedule-III, PGM-1 Minimum rate 3000/Cu.Mt. 2. ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲೂಕು, ಹಲಸಬೆಲೆ ಗ್ರಾಮದ ಸರ್ವೆ ನಂ. 58ರ ಪ್ರದೇಶದಲ್ಲಿ ವಶಪಡಿಸಿಕೊಳ್ಳಲಾದ 103 ಬಹುವರ್ಣೀಯ ಶಿಲಾದಿಮ್ಮಿಗಳನ್ನು ನಿಯಮ 47ರಡಿಯಲ್ಲಿ ವಿಲೇವಾರಿ ಮಾಡಬೇಕಾಗಿದ್ದು, ಇದರ ಒಟ್ಟು ಪ್ರಮಾಣ 423.69 ಕ್ಯೂಬಿಕ್ ಮೀ.	423.69	12,71,070/-	3,17,768/-
	ಒಟ್ಟು	**423.69**	**12,71,070/-**	**3,17,768/-**

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹಿಂದಿರುಗಿಸಲಾಗದ ಅರ್ಜಿ ಶುಲ್ಕ ರೂ. 1000/- ಹಾಗೂ ಇ.ಎಂ.ಡಿ ಮೊತ್ತಗಳನ್ನು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಇವರ ಹೆಸರಿನಲ್ಲಿ Demand Draft ಮುಖಾಂತರ ಪಾವತಿಸತಕ್ಕದ್ದು, ಬಹಿರಂಗ ಹರಾಜು ಮಾರಾಟ ವಿಲೇವಾರಿಯ ಷರತ್ತುಗಳನ್ನು ಹಾಗೂ ಖನಿಜದ ವಿವರಗಳನ್ನು **ತಹಶೀಲ್ದಾರ್ ಕಛೇರಿ ಮಾಗಡಿ ಮತ್ತು ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ** ಇವರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: **9844183858, 9900501140.**

ಸಹಿ/- ಉಪನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

DIPR/BSD/63/SA/2026-27



ರೋಮ್‌ಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಜತೆ ಇಟಲಿ ಪ್ರಧಾನಿ ಮೆಲೋನಿ.

ಇಟಲಿ ಸಂಸತ್ತಿನಲ್ಲಿ ಐತಿಹಾಸಿಕ ವಿದ್ಯಮಾನ

ಸನಾತನ ಧರ್ಮ ಸಂಘಕ್ಕೆ ಮಾನ್ಯತೆ

• **ರೋಮ್:** ಪ್ರಧಾನಿ ನರೇಂದ್ರ ಮೋದಿ ತಮ್ಮ ಪಂಚ ರಾಷ್ಟ್ರ ಪ್ರವಾಸದ ಮುಕ್ತಾಯ ಹಂತದಲ್ಲಿ ರೋಮ್‌ಗೆ ಬಂದಿಳಿಯುತ್ತಿದ್ದಂತೆ, ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ (ಇಟಲಿಯ ಹಿಂದು ಸಂಘಟನೆ) ವಿಧ್ಯುಕ್ತವಾಗಿ ಅಧಿಕೃತ ಮಾನ್ಯತೆ ನೀಡಿದ ಐತಿಹಾಸಿಕ ವಿದ್ಯಮಾನ ಘಟಿಸಿದೆ.

ಸನಾತನ ಧರ್ಮ ಸಂಘವು ಇಟಲಿಯಲ್ಲಿ ವಾಸವಿರುವ ಎಲ್ಲಾ ಹಿಂದುಗಳನ್ನು ಪ್ರತಿನಿಧಿಸುತ್ತದೆ. ಇಟಲಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹಿಂದು ಸಹಿತ ಭಾರತ ಸಂಜಾತ ಸಮುದಾಯಗಳ ಪಾಲಿಗೆ ಇದೊಂದು ಮಹತ್ತ್ವದ ಶಾಸಕಾಂಗ ವಿಜಯವಾಗಿದೆ. ಸನಾತನ ಧರ್ಮ ಸಂಘ ಪರ ಇಟಲಿ ಸಂಸತ್ತಿನಲ್ಲಾದ ಘೋಷಣೆಯು, ಚಾರಿತ್ರಿಕವಾಗಿ ಕ್ಯಾಥೋಲಿಕ್ ಚರ್ಚ್ ಅಧಿಪತ್ಯದಲ್ಲಿರುವ ರಾಷ್ಟ್ರದಲ್ಲಿ ಪ್ರಾಚೀನ ಪೌರ್ವಾತ್ಯ ಆಧ್ಯಾತ್ಮಿಕ ಪರಂಪರೆಗೆ ರಚನಾತ್ಮಕವಾದ ಕಾನೂನು ಸುರಕ್ಷೆಗಳ ಒದಗಿಸುವುದು, ಸಂಘವನ್ನು ಆಡಳಿತಾತ್ಮಕವಾಗಿ ಸಾಂಸ್ಥೀಕರಿಸುವುದು ಮತ್ತು ಸಂಘಕ್ಕೆ ಇಟಲಿ ಸರ್ಕಾರದ ಮಾನ್ಯತೆ ನೀಡಲಿದೆ.

ಮೋದಿ ಭೇಟಿ ವೇಳೆ ಚಾರಿತ್ರಿಕ ವಿದ್ಯಮಾನ: ಇಟಲಿಯ ಭಾರತೀಯ ಸಮುದಾಯವು ಅತ್ಯಂತ ಸಂಭ್ರಮೋಲ್ಲಾಸದೊಂದಿಗೆ ಮತ್ತು ಅತಿ ವೈಭವೋಪೇತವಾಗಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರೋಮ್‌ಗೆ ಸ್ವಾಗತಿಸುತ್ತಿದ್ದ ಘಳಿಗೆಯಲ್ಲೇ ಮಂಗಳವಾರ ಸೂರ್ಯಾಸ್ತಕ್ಕೆ ಪ್ರಸ್ತುತ ಐತಿಹಾಸಿಕ ವಿದ್ಯಮಾನ ಘಟಿಸಿದೆ. ಇಟಲಿಯಲ್ಲಿ ಸನಾತನ ಧರ್ಮ ಸಂಘವನ್ನು ಪ್ರತಿನಿಧಿಸುತ್ತಿರುವ ಖ್ಯಾತ ಆಧ್ಯಾತ್ಮಿಕ ಗುರುಗಳಾದ ಸ್ವಾಮಿನಿ ಶುದ್ಧಾನಂದ ಘಿರಿ ಅವರು, ಪ್ರಧಾನಿ ಮೋದಿ ತಂಗಿದ ಹೋಟೆಲ್‌ಗೆ ತೆರಳಿ, ಇಟಲಿ ಸಂಸತ್ತಿನ ಮಹತ್ತ್ವದ ಘೋಷಣೆಯನ್ನು ಪ್ರಧಾನಿಗೆ ಅರುಹಿ, ಸನಾತನ ಸಮುದಾಯದ ತುಂಬು ಕೃತಜ್ಞತೆಯನ್ನು ಅವರಿಗೆ ಸಲ್ಲಿಸಿದರು.

ಮೋದಿ ಪ್ರೋತ್ಸಾಹಕ್ಕೆ ಆಭಾರಿ: ದ್ವಿತೀಯ ಬಾರಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಸಂವಾದ ನಡೆಸಿದ್ದೇನೆ, ತುಂಬು ಖುಷಿಯಾಯಿತು. ಈ ಹಿಂದೆ 2021ರಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತ್ತು ಎಂದು ಸ್ವಾಮಿನಿ ಶುದ್ಧಾನಂದ ಘಿರಿ ಸುದ್ದಿಗಾರರಲ್ಲಿ ಸಂತಸ ಹಂಚಿಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ನಮ್ಮ ಆಧ್ಯಾತ್ಮಿಕ ಮಿಷನ್‌ಗೆ ನಿರಂತರವಾಗಿ ಪ್ರೋತ್ಸಾಹವಿತ್ತು ಪೋಷಿಸುತ್ತಿದ್ದಾರೆ. ಇದೀಗ ಇಟಲಿ ಸಂಸತ್ತು ಸನಾತನ ಧರ್ಮ ಸಂಘಕ್ಕೆ ಅಧಿಕೃತ ಧರ್ಮದ ಮಾನ್ಯತೆ ನೀಡಿದೆ ಎಂದವರು ಆನಂದ ವ್ಯಕ್ತಪಡಿಸಿದರು.

ರೋಮ್‌ನಲ್ಲಿ ಕಾಶಿಯ ಝಲಕ್: ಸುಮಾರು ನಾಲ್ಕು ದಶಕಗಳಿಂದ ವೇದಿಕ್ ಸಂಸ್ಕೃತಿ ಅಥವಾ ವೇದಾಭ್ಯಾಸದಲ್ಲಿ ನಿರತ ಚಿತ್ರಕಲಾವಿದ ಜಿಯಾಂಪೌಲೊ ತೊಮಸ್ಸೆಟ್ಟಿ ಅವರು ಸ್ವಯಂ ಪೈಂಟ್ ಮಾಡಿದ, ವಾರಾಣಸಿಯ ಪ್ರಸಿದ್ಧ ಆಧ್ಯಾತ್ಮಿಕ ಘಾಟ್‌ಗಳ ಪೈಂಟಿಂಗ್‌ನ್ನು ಮೋದಿ ಅವರಿಗೆ ಸಮರ್ಪಿಸಿದರು.

ವೇದಮಂತ್ರ ಘೋಷ, ರಾಗತಾಳ ಮಧ್ಯೆ ಸ್ವಾಗತ

ಪ್ರಧಾನಿ ಮೋದಿ ಅವರನ್ನು ಮಾಮೂಲಾಗಿ ಅಧಿಕೃತವಾಗಿ ಸ್ವಾಗತಿಸುವ ಬದಲು ವೇದಮಂತ್ರ ಪಠಣ, ರಾಗ-ತಾಳಗಳ ಮುಖೇನ ಭಾರತೀಯ ಸಂಪ್ರದಾಯದಲ್ಲೇ ಸ್ವಾಗತಿಸಿದ್ದು, ಭಾರತ-ಇಟಲಿ ನಡುವಣ ಬಾಂಧವ್ಯದ ಗಹನತೆಯನ್ನು ಪ್ರತಿಫಲಿಸಿತು. ಭಾರತದ ಸಾಂಸ್ಕೃತಿಕ ಪರಂಪರೆಗಳು ಇಟಲಿ ಮೇಲೆ ಪರಿಣಾಮ ಬೀರಿರುವುದು, ತನ್ಮೂಲಕ ಉಭಯ ರಾಷ್ಟ್ರಗಳ ನಡುವಣ ಕಲಾತ್ಮಕ ವಿನಿಮಯಗಳನ್ನು ಸಾಂಕೇತಿಸಿದವು. ಇಟಲಿಯ ಶಾಸ್ತ್ರೀಯ ಸಂಗೀತ ಕಲಾವಿದರ ತಂಡವೊಂದು ಭಾರತದ ಹಂಸಧ್ವನಿ ರಾಗಕ್ಕೆ ಅನುಗುಣವಾಗಿ ಪಾಶ್ಚಿಮಾತ್ಯ ಸಂಗೀತವಾದ್ಯ ನುಡಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು ಮತ್ತು ಸಮಸ್ತರ ಮನಸೂರೆಗೊಂಡಿತು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಮ್ಮ ದಕ್ಷಿಣ ಕೊರಿಯಾದ ಸಹವರ್ತಿ ಅಹ್ ಗ್ಯು-ಬ್ಯಾಕ್ ಅವರೊಂದಿಗೆ ಉನ್ನತ ಮಟ್ಟದ ಮಾತುಕತೆ ನಡೆಸಲು ಸಿಯೋಲ್‌ಗೆ ಭೇಟಿ ನೀಡಿದ್ದು, ಇತ್ತೀಚಿನ ಪ್ರಮುಖ ಬೆಳವಣಿಗೆಗಳೊಂದಿಗೆ ಉಭಯ ದೇಶಗಳ ನಡುವಿನ ಕಾರ್ಯತಂತ್ರದ ರಕ್ಷಣಾ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದ್ದಾರೆ.

ಸುದ್ದಿ ಸಮಗ್ರ

ಭಾರತ-ದ.ಕೊರಿಯಾ ರಕ್ಷಣಾ ಸಹಕಾರ ವೃದ್ಧಿ

ತನ್ನ ಸಹವರ್ತಿ ಅಹ್ ಗ್ಯು-ಬ್ಯಾಕ್ ಜತೆ ರಾಜನಾಥ್ ದ್ವಿಪಕ್ಷೀಯ ಮಾತುಕತೆ

ರಕ್ಷಣಾ ಕಾರ್ಯಕ್ರಮಗಳು

ಉಭಯ ದೇಶಗಳ ಪ್ರಸ್ತುತ ರಕ್ಷಣಾ ಸಹಕಾರದಲ್ಲಿ, ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಬರುವ ಕೆ9 ವಜ್ರ-ಟಿ ಫಿರಂಗಿ ಕಾರ್ಯಕ್ರಮ ಅತ್ಯಂತ ಪ್ರಮುಖ ಕೇಂದ್ರಬಿಂದುವಾಗಿದೆ. ಲಾರ್ಸೆನ್ ಆ್ಯಂಡ್ ಟೂಬ್ರೊ(ಎಲ್ ಆ್ಯಂಡ್ ಟಿ) ಸಂಸ್ಥೆಯಿಂದ ಭಾರತದಲ್ಲಿ ಉತ್ಪಾದನೆಗೊಳ್ಳುವ ಈ ಕೆ9 ವಜ್ರವನ್ನು, ದಕ್ಷಿಣ ಕೊರಿಯಾದ ಹನ್ವಾ ಏರೋಸ್ಪೇಸ್ ಸಂಸ್ಥೆ ತನ್ನ ಕೆ9 ಥಂಡರ್ ಪ್ಲಾಟ್‌ಫಾರ್ಮ್ ಆಧಾರದ ಮೇಲೆ ಅಭಿವೃದ್ಧಿಪಡಿಸಿದೆ. ಆರಂಭದಲ್ಲಿ ಈ ಫಿರಂಗಿಯ ಶೇ.50 ರಷ್ಟು ಬಿಡಿಭಾಗಗಳನ್ನು ಭಾರತದಲ್ಲೇ ತಯಾರಿಸಲಾಗುತ್ತಿತ್ತು, ಪ್ರಸ್ತುತ ಇದು ಶೇ.60ಕ್ಕೆ ಏರಿಕೆಯಾಗಿದೆ. ಭಾರತ ಮೊದಲು 2017ರಲ್ಲಿ 4,500 ಕೋಟಿ ರೂ. ವೆಚ್ಚದಲ್ಲಿ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿತ್ತು. ಇವುಗಳನ್ನು ಮರುಭೂಮಿ ಪ್ರದೇಶಕ್ಕಾಗಿ ವಿನ್ಯಾಸಗೊಳಿಸಲಾಗಿದ್ದರೂ, ಭಾರತ-ಚೀನಾ ಗಡಿ ಬಿಕ್ಕಟ್ಟಿನ ಸಂದರ್ಭದಲ್ಲಿ ಲಡಾಖ್‌ನಂತಹ ಎತ್ತರದ ಪ್ರದೇಶಗಳಲ್ಲಿ ಯಶಸ್ವಿಯಾಗಿ ನಿಯೋಜಿಸಲಾಯಿತು. ಈ ಯಶಸ್ಸಿನ ನಂತರ, ಭಾರತ, 7,628.7 ಕೋಟಿ ರೂ. ವೆಚ್ಚದಲ್ಲಿ ಮತ್ತೆ 100 ಕೆ9 ವಜ್ರ ಫಿರಂಗಿಗಳಿಗೆ ಆದೇಶ ನೀಡಿದ್ದು, ಪ್ರಸ್ತುತ ಉಭಯ ದೇಶಗಳು ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚಿನ ತಂತ್ರಜ್ಞಾನ ವರ್ಗಾವಣೆಗೆ ಮುಂದಾಗುತ್ತಿವೆ.

ಪ್ರಸ್ತುತ ರಾಜತಾಂತ್ರಿಕ ಬೆಳವಣಿಗೆಗಳು

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಸಿಯೋಲ್ ಭೇಟಿ, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್ ಕಳೆದ ಏಪ್ರಿಲ್‌ನಲ್ಲಿ ಹೊಸದಿಲ್ಲಿಗೆ



ನೀಡಿದ ಭೇಟಿಯ ಬೆನ್ನಲ್ಲೇ ನಡೆದಿದೆ. ಅದು ಕಳೆದ ಸುಮಾರು ಒಂದು ದಶಕದಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷರು ಭಾರತಕ್ಕೆ ನೀಡಿದ ಮೊದಲ ಅಧಿಕೃತ ಭೇಟಿಯಾಗಿತ್ತು. ಪ್ರಸ್ತುತ ಪ್ರವಾಸದಲ್ಲಿ ರಾಜನಾಥ್ ಸಿಂಗ್, ರಕ್ಷಣಾ ಸ್ವಾಧೀನ ಕಾರ್ಯಕ್ರಮ ಆಡಳಿತದ(ಡಿಎಪಿಎ) ಸಚಿವ ಲೀ ಯೋಂಗ್-ಚಿಯೋಲ್ ಅವರನ್ನು ಭೇಟಿಯಾಗಲಿದ್ದು, ಭಾರತ-ಕೊರಿಯಾ ದುಂಡುಮೇಜಿನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಬುಧವಾರ ಅವರು ದಕ್ಷಿಣ ಕೊರಿಯಾದ ದೇಶಭಕ್ತರು ಮತ್ತು ಮಾಜಿ ಸೇನಾನಿಗಳ ವ್ಯವಹಾರಗಳ ಸಚಿವ ಕ್ವಾನ್ ಓಹ್-ಯುಲ್ ಅವರೊಂದಿಗೆ ಜಂಟಿಯಾಗಿ ಭಾರತೀಯ ಯುದ್ಧ ಸ್ಮಾರಕವನ್ನು ಉದ್ಘಾಟಿಸಲಿದ್ದಾರೆ.

ಐತಿಹಾಸಿಕ ರಕ್ಷಣಾ ಸಂಬಂಧಗಳ ಹಿನ್ನೆಲೆ

ಭಾರತ ಮತ್ತು ದಕ್ಷಿಣ ಕೊರಿಯಾ ನಡುವೆ 1962ರಲ್ಲಿ ಕೌನ್ಸಿಲರ್ ಸಂಬಂಧಗಳು ಮತ್ತು 1973ರಲ್ಲಿ ರಾಜತಾಂತ್ರಿಕ ಸಂಬಂಧಗಳು ಚಾಲನೆ ಪಡೆದಿದ್ದವು. ಬಳಿಕ 2010ರಲ್ಲಿ ಕಾರ್ಯತಂತ್ರದ ಪಾಲುದಾರಿಕೆ ಏರ್ಪಟ್ಟಿತು. ನಂತರ 2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಿಯೋಲ್ ಭೇಟಿಯ ಸಂದರ್ಭದಲ್ಲಿ ಇದನ್ನು ವಿಶೇಷ ಕಾರ್ಯತಂತ್ರದ ಪಾಲುದಾರಿಕೆ'ಗೆ ವಿಸ್ತರಿಸಲಾಯಿತು. ಅಂದಿನಿಂದ ರಕ್ಷಣಾ ಸಚಿವರುಗಳು ನಿಯಮಿತವಾಗಿ ಭೇಟಿಯಾಗುತ್ತಿದ್ದು, ವಾರ್ಷಿಕವಾಗಿ ಮೂರೂ ಸಶಸ್ತ್ರ ಪಡೆಗಳ ಮಟ್ಟದ ಮಾತುಕತೆಗಳು ನಡೆಯುತ್ತಿವೆ.

ಭವಿಷ್ಯದ ಹೈ-ಟೆಕ್ ಯೋಜನೆಗಳು

ಕೆ9 ವಜ್ರ ಕಾರ್ಯಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕೈಂಡ್-ಎಕ್ಸ್ ರಕ್ಷಣಾ ಯೋಜನೆಯತ್ತ ಉಭಯ ದೇಶಗಳು ಗಮನಹರಿಸಿವೆ. ಈ ಯೋಜನೆ, ಸ್ವಾಯತ್ತ ಶಸ್ತ್ರಾಸ್ತ್ರಗಳು, ಕೃತಕ ಬುದ್ಧಿಮತ್ತೆ ಆಧಾರಿತ ಮಿಲಿಟರಿ ತಂತ್ರಜ್ಞಾನ, ಮುಂದಿನ ಪೀಳಿಗೆಯ ಕ್ಷಿಪಣಿ ರಕ್ಷಣೆ ಮತ್ತು ಸೈಬರ್ ಭದ್ರತೆ ಸೇರಿದಂತೆ ಹೈ-ಟೆಕ್ ವ್ಯವಸ್ಥೆಗಳನ್ನು ಜಂಟಿಯಾಗಿ ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಇದರೊಂದಿಗೆ, ಹನ್ವಾ ಡಿಫೆನ್ಸ್ ಸಂಸ್ಥೆಯ ಕೆ30 ಬಿಹೋ ಸ್ವಯಂ-ಚಾಲಿತ ವಿಮಾನ ವಿರೋಧಿ ವ್ಯವಸ್ಥೆಯ ಮೇಲೆಯೂ ಭಾರತ ಕಣ್ಣಿಟ್ಟಿದೆ. ಗುಡ್ಡಗಾಡು ಮತ್ತು ಎತ್ತರದ ಪ್ರದೇಶಗಳ ಕಾರ್ಯಾಚರಣೆಗಾಗಿ ಈ ಲಘು ಟ್ಯಾಂಕ್ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಲು ಹನ್ವಾ ಸಂಸ್ಥೆ, ಲಾರ್ಸೆನ್ ಆ್ಯಂಡ್ ಟೂಬ್ರೊ ಜತೆ ಸೇರಿ ಕಾರ್ಯನಿರ್ವಹಿಸುವ ಪ್ರಸ್ತಾಪವಿದೆ. ಸಿಯೋಲ್ ಹೊಂದಿರುವ ಸಾಂಪ್ರದಾಯಿಕ ಜಲಾಂತರ್ಗಾಮಿ ತಂತ್ರಜ್ಞಾನ, ಲಿಥಿಯಂ-ಐಯಾನ್ ಬ್ಯಾಟರಿ ವ್ಯವಸ್ಥೆಗಳು ಮತ್ತು ವಾಯು-ಸ್ವತಂತ್ರ ಪ್ರೊಪಲ್ಷನ್ ತಂತ್ರಜ್ಞಾನಗಳ ಪರಿಣತಿ ಜಲಾಂತರ್ಗಾಮಿ ಕ್ಷೇತ್ರದಲ್ಲಿ ಸಹಕಾರಕ್ಕೆ ದಾರಿ ಮಾಡಿಕೊಟ್ಟಿದೆ. ದಕ್ಷಿಣ ಕೊರಿಯಾದ ಮುನ್ನಡೆ ಸಾಧಿಸಿರುವ ಕೆಎಫ್-21 ಫೈಟರ್ ಪ್ರೋಗ್ರಾಂ ಮತ್ತು ಎಫ್‌ಎ-50 ಲಘು ಯುದ್ಧ ವಿಮಾನಗಳು, ವಾಯು ರಕ್ಷಣಾ ವಲಯದಲ್ಲಿ ಭಾರತಕ್ಕೆ ಜಂಟಿ ಪಾಲುದಾರಿಕೆಯ ಹೊಸ ಅವಕಾಶ ಒದಗಿಸಿವೆ.

ದ್ವಿಪಕ್ಷೀಯ ವ್ಯಾಪಾರ ಮತ್ತು ಆರ್ಥಿಕ ಗುರಿಗಳು

ಕಳೆದ ಏಪ್ರಿಲ್‌ನಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಅವರ ಭಾರತ ಭೇಟಿಯ ಸಂದರ್ಭದಲ್ಲಿ, ಜಂಟಿ ಬೆಳವಣಿಗೆಗೆ ಹೊಸ ಆರ್ಥಿಕ ಸಹಕಾರದ ಚೌಕಟ್ಟನ್ನು ನವೀಕರಿಸಲು ನಿರ್ಧರಿಸಲಾಯಿತು. ಈ ವೇಳೆ ಅವರೊಂದಿಗೆ ಸುಮಾರು ದಕ್ಷಿಣ ಕೊರಿಯಾದ 200 ಉದ್ಯಮಿಗಳ ನಿಯೋಗ ಆಗಮಿಸಿತ್ತು. ಭಾರತ ಮತ್ತು ದಕ್ಷಿಣ ಕೊರಿಯಾ ಪ್ರಸ್ತುತ ಇರುವ 27 ಬಿಲಿಯನ್ ಡಾಲರ್ (2.61 ಲಕ್ಷ ಕೋಟಿ ರೂ.) ದ್ವಿಪಕ್ಷೀಯ ವ್ಯಾಪಾರವನ್ನು 2030ರ ವೇಳೆಗೆ 54 ಬಿಲಿಯನ್ ಡಾಲರ್‌ಗೆ(5.23 ಲಕ್ಷ ಕೋಟಿ ರೂ.) ದ್ವಿಗುಣಗೊಳಿಸುವ ಗುರಿಯನ್ನು ಘೋಷಿಸಿವೆ. ಭಾರತ, ಖನಿಜ ಇಂಧನಗಳು, ತೈಲ ಭಟ್ಟಿ ಇಳಿಸುವಿಕೆಗಳು(ಮುಖ್ಯವಾಗಿ ನಾಫ್ತಾ), ಧಾನ್ಯಗಳು, ಕಬ್ಬಿಣ ಮತ್ತು ಉಕ್ಕನ್ನು ಸಿಯೋಲ್‌ಗೆ ರಫ್ತು ಮಾಡುತ್ತದೆ. ಪ್ರತಿಯಾಗಿ ದಕ್ಷಿಣ ಕೊರಿಯಾ, ಆಟೋಮೊಬೈಲ್ ಬಿಡಿಭಾಗಗಳು, ದೂರಸಂಪರ್ಕ ಉಪಕರಣಗಳು, ಹಾಟ್-ರೋಲ್ಡ್ ಕಬ್ಬಿಣದ ಉತ್ಪನ್ನಗಳು, ಸಂಸ್ಕರಿಸಿದ ಪೆಟ್ರೋಲಿಯಂ ಉತ್ಪನ್ನಗಳು, ಮೂಲ ಲೂಬ್ರಿಕೇಟಿಂಗ್ ಆಯಿಲ್ಸ್, ಯಾಂತ್ರಿಕ ಉಪಕರಣಗಳು ಮತ್ತು ಎಲೆಕ್ಟ್ರಿಕಲ್ ಯಂತ್ರೋಪಕರಣಗಳನ್ನು ಭಾರತಕ್ಕೆ ಕಳುಹಿಸುತ್ತದೆ.

ಕಿರುಸುದ್ದಿ

ವಿವಾದಿತ ಸಿಲ್ವರ್ ಲೈನ್ ಯೋಜನೆಗೆ ತಡೆ: ಸಿಎಂ

• **ತಿರುವನಂತಪುರಂ:** ಕೇರಳದಲ್ಲಿ ಹಿಂದಿನ ಎಲ್‌ಡಿಎಫ್ ಸರ್ಕಾರದ ವಿವಾದಿತ ಪ್ರಮುಖ ಮೂಲಸೌಕರ್ಯ ಯೋಜನೆಯನ್ನು ನೂತನ ಸರ್ಕಾರ ಕೊನೆಗೊಳಿಸಿದ್ದು, ವಿವಾದಾತ್ಮಕ ಸಿಲ್ವರ್ ಲೈನ್ ಸೆಮಿ ಹೈಸ್ಪೀಡ್ ರೈಲು ಯೋಜನೆಯನ್ನು ತಮ್ಮ ಸರ್ಕಾರ ರದ್ದುಗೊಳಿಸಿದೆ ಎಂದು ಕೇರಳ ಮುಖ್ಯಮಂತ್ರಿ ವಿ. ಡಿ. ಸತೀಶನ್ ಬುಧವಾರ ಘೋಷಿಸಿದ್ದಾರೆ. ಭೂಸ್ವಾಧೀನ, ಪರಿಸರ ಕಾಳಜಿ ಮತ್ತು ಸ್ಥಳಾಂತರದ ಮೇಲಿನ ಪ್ರತಿಭಟನೆಗಳು ರಾಜ್ಯದಾದ್ಯಂತ ಸಾರ್ವಜನಿಕ ಆಕ್ರೋಶವನ್ನು ಹೆಚ್ಚಿಸಿದವು.

59 ವರ್ಷಗಳ ನಂತರ ಸಂಪುಟಕ್ಕೆ ಕೈ ಸೇರ್ಪಡೆ

• **ಹೊಸದಿಲ್ಲಿ:** 59 ವರ್ಷಗಳ ನಂತರ ಕಾಂಗ್ರೆಸ್ ತಮಿಳುನಾಡು ಸಚಿವ ಸಂಪುಟದ ಭಾಗವಾಗಲಿದೆ. ಕಾಂಗ್ರೆಸ್‌ನ ಇಬ್ಬರು ಶಾಸಕರಾದ ರಾಜೇಶ್ ಕುಮಾರ್ ಮತ್ತು ಪಿ ವಿಶ್ವನಾಥನ್ ಅವರು ಗುರುವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಹೆಣ್ಣುಮಕ್ಕಳನ್ನ ದಂಧೆಗೆ ತಳ್ಳುವ ಕಳ್ಳಸಾಗಣೆ ಜಾಲ

• **ಕೊಚ್ಚಿ:** ಕೇರಳದಿಂದ ಹೆಣ್ಣುಮಕ್ಕಳನ್ನು ಮಾಡೆಲಿಂಗ್, ಬ್ಯೂಟಿಷಿಯನ್, ಫ್ಯಾಷನ್ ಇಂಡಸ್ಟ್ರಿ ಅವಕಾಶಗಳನ್ನು ಒದಗಿಸುವ ಭರವಸೆ ನೀಡಿ ದುಬೈಗೆ ಕಳುಹಿಸಿ ಬಳಿಕ ಅವರನ್ನು ಬ್ಲ್ಯಾಕ್‌ಮೇಲ್‌ಗೊಳಪಡಿಸಿ ಅನೈತಿಕ ಜಾಲಕ್ಕೆ ತಳ್ಳಿ ಶೋಷಿಸುವ ಬೃಹತ್ ಅಂತಾರಾಷ್ಟ್ರೀಯ ಮಾನವ ಕಳ್ಳಸಾಗಣೆ ಜಾಲವೊಂದನ್ನು ಕೊಚ್ಚಿ ನಗರ ಪೊಲೀಸರು ಬಯಲಿಗೆಳೆದಿದ್ದಾರೆ.

ಈ ಜಾಲಕ್ಕೆ ಸಿಲುಕಿದ ಇಬ್ಬರು ಸಂತ್ರಸ್ತ ಹೆಣ್ಣುಮಕ್ಕಳು ಹೇಗೋ ಪಾರಾಗಿ ಕೇರಳಕ್ಕೆ ಮರಳಿ, ಈ ಕರಾಳದ ಜಾಲದ ಕುಕೃತ್ಯಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಜಾಲದ ಮೂವರು ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಇವರೆಲ್ಲರೂ ಮಹಿಳೆಯರೇ ಆಗಿದ್ದು, ಹೆಣ್ಣುಮಕ್ಕಳಿಗೆ ವಿದೇಶಗಳಲ್ಲಿ ಕೆಲಸದ ಆಮಿಷ ತೋರಿಸಿ ಬಳಿಕ ತಮ್ಮ ವಂಚನಾಜಾಲಕ್ಕೆ ಸಿಲುಕಿಸಿ ಮಾದಕದ್ರವ್ಯ ಸೇವನೆ, ದೈಹಿಕ ಹಿಂಸೆ, ಅಕ್ರಮ ಬಂಧನ, ವ್ಯವಸ್ಥಿತ ಲೈಂಗಿಕ ದೌರ್ಜನ್ಯಗಳನ್ನು ನಡೆಸಲಾಗುತ್ತಿದ್ದ ಬಗ್ಗೆ ಈ ಹೆಣ್ಣುಮಕ್ಕಳು ಬಹಿರಂಗಪಡಿಸಿದ್ದರು.

ಈ ಜಾಲದ ವ್ಯಾಪಕತೆ ಮತ್ತು ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಕೊಚ್ಚಿ ಪೊಲೀಸರು, ಈ ದುಷ್ಟ ಜಾಲದ ಹಿನ್ನೆಲೆ, ವಿದೇಶಿ ಸಂಪರ್ಕಗಳ ಬಗ್ಗೆ ತನಿಖೆ ನಡೆಸಲು ಉಪಪೊಲೀಸ್ ಆಯುಕ್ತ(ಡಿಸಿಪಿ) ಅಶ್ವತಿ ಜಿಜಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು(ಎಸ್ ಐಟಿ) ರಚಿಸಿದ್ದಾರೆ. ಮಾರಾಡುನಲ್ಲಿನ ಫ್ಲ್ಯಾಟ್ ಒಂದರ ಮೂಲಕ ಈ ಮಾನವ ಕಳ್ಳಸಾಗಣೆ ಜಾಲ ಕಾರ್ಯಾಚರಿಸುತ್ತಿತ್ತು. ಆರೋಪಿಗಳನ್ನು ಟಾಯ್ಸಿ, ತಿರುವನಂತಪುರಂನ ಪೊಂಗುವಿಲಾದ ಮಾಡೆಲ್ ಅಲೀನಾ ಅಬ್ರಹಾಂ, ಪೊನ್ನಾಣಿಯ ಮಂಜಿಮಾ ಎಂದು ಗುರುತಿಸಲಾಗಿದೆ.

ಮೋದಿ ವಿರುದ್ಧ ರಾಗಾ ಹೇಳಿಕೆಗೆ ಬಿಜೆಪಿ ಕಿಡಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶದ್ರೋಹಿ ಎಂದು ಕರೆಯುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅರಾಜಕ ಮನೋಭಾವವನ್ನು ಪ್ರದರ್ಶಿಸಿದ್ದಾರೆ ಎಂದು ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರು, ರಾಹುಲ್ ಗಾಂಧಿಯವರ ಹೇಳಿಕೆ 140 ಕೋಟಿ ಭಾರತೀಯರಿಗೆ ಮಾಡಿದ ಅವಮಾನವಾಗಿದೆ. ಈ ಕುರಿತು ಅವರು ದೇಶದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ರಾಯಬರೇಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ, ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ದೇಶದ್ರೋಹಿಗಳು ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ತಿರುಗೇಟು ನೀಡಿದ ಬಿಜೆಪಿ, ಕಾಂಗ್ರೆಸ್ ನಾಯಕನ ಮಾತುಗಳು ನಿರಾಶೆ ಹಾಗೂ ಚುನಾವಣಾ ಸೋಲಿನ ಹತಾಶೆಯಿಂದ ಬಂದಿವೆ ಎಂದು ಟೀಕಿಸಿತು.

ಭಯೋತ್ಪಾದನೆಯನ್ನು ನಿಯಂತ್ರಿಸಿದ, ನಕ್ಸಲ್‌ವಾದವನ್ನು ಕೊನೆಗಾಣಿಸಲು ಕ್ರಮ ಕೈಗೊಂಡ, ತ್ರಿವರ್ಣ ಧ್ವಜದ ಗೌರವವನ್ನು ಹೆಚ್ಚಿಸಿದ ವ್ಯಕ್ತಿಯ ಬಗ್ಗೆ ಇಂತಹ ಪದಗಳನ್ನು ಬಳಸುವುದು ದುಃಖಕರ ಎಂದು ನವೀನ್ ಹೇಳಿದರು. ಇದೇ ವೇಳೆ ರಾಹುಲ್ ಗಾಂಧಿಯನ್ನು ಭಾರತೀಯ ರಾಜಕೀಯದ ರಾಹು ಎಂದು ವ್ಯಂಗ್ಯವಾಡಿದರು.

ಇನ್ನೊಂದೆಡೆ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ರಾಹುಲ್ ಗಾಂಧಿಯವರ ಹೇಳಿಕೆ ಅರ್ಬನ್ ನಕ್ಸಲ್ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಆರೋಪಿಸಿದರು.

ನಾರ್ವೆ ಪ್ರತಿಕೆಯಲ್ಲಿ ಪ್ರಧಾನಿಗೆ ಅವಮಾನ

• **ಹೊಸದಿಲ್ಲಿ:** ನಾರ್ವೆಯ ಪ್ರಮುಖ ಪತ್ರಿಕೆ ಆಫ್ಟೆನ್ ಪೋಸ್ಟನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾವಾಡಿಗನಂತೆ ಚಿತ್ರಿಸಿದ ವ್ಯಂಗ್ಯಚಿತ್ರ ಪ್ರಕಟಿಸಿರುವುದು ಭಾರೀ ವಿವಾದಕ್ಕೆ ಕಾರಣವಾಗಿದೆ. ಮೋದಿ ಅವರು ಓಸ್ಲೋ ಭೇಟಿ ನೀಡುವ ಮುನ್ನ ಪ್ರಕಟವಾದ ಈ ಕಾರ್ಟೂನ್‌ನಲ್ಲಿ, ಹಾವಿನ ಬದಲು ಪೆಟ್ರೋಲ್ ಪೈಪ್ ನಿಯಂತ್ರಿಸುತ್ತಿರುವಂತೆ ಚಿತ್ರಿಸಲಾಗಿತ್ತು. ಜೊತೆಗೆ "A clever and slightly annoying man" ಎಂಬ ಶೀರ್ಷಿಕೆಯೂ ನೀಡಲಾಗಿತ್ತು. ಈ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಅನೇಕ ಭಾರತೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಾಶ್ಚಿಮಾತ್ಯ ಮಾಧ್ಯಮಗಳು ಇನ್ನೂ ಭಾರತವನ್ನು ಹಳೆಯ ವಸಾಹತುಶಾಹಿ ದೃಷ್ಟಿಕೋನದಿಂದಲೇ ನೋಡುತ್ತಿವೆ ಎಂದು ನೆಟ್ಟಿಗರು ಟೀಕಿಸಿದ್ದಾರೆ. ಇದೇ ವೇಳೆ, ನಾರ್ವೆ ಭೇಟಿಯ ಸಂದರ್ಭ ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಕುರಿತು ಕೇಳಲಾದ ಪ್ರಶ್ನೆಗಳೂ ಚರ್ಚೆಗೆ ಕಾರಣವಾದವು.

ಈ ಕುರಿತು ಪ್ರತಿಕ್ರಿಯಿಸಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಸಿ.ಬಿ.ಜಾರ್ಜ್, ಭಾರತವು ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಇಲ್ಲಿ ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಪೂರ್ಣ ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.

ಭಾರತದ ಪ್ರಮಾಣ, ವೈವಿಧ್ಯತೆ ಹಾಗೂ ಪ್ರಜಾಪ್ರಭುತ್ವದ ಬಲದ ಬಗ್ಗೆ ಹಲವರಿಗೆ ಸಮರ್ಪಕ ಅರಿವಿಲ್ಲ, ದಿಲ್ಲಿಯಲ್ಲಿ ನೂರಾರು ಟಿವಿ ಚಾನೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಕೆಲ ಎನ್‌ಜಿಒ ವರದಿಗಳನ್ನು ಓದಿ ಭಾರತ ಕುರಿತು ತೀರ್ಮಾನಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಉ. ಭಾರತದಲ್ಲಿ ಬಿಸಿಗಾಳಿ ಅಬ್ಬರ

• **ಹೊಸದಿಲ್ಲಿ:** ಉತ್ತರ ಭಾರತದ ಬಾಂದಾ ಜಿಲ್ಲೆಯಲ್ಲಿ ಬುಧವಾರ 48 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 4.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದು, ಭಾರೀ ಆತಂಕಕ್ಕೀಡು ಮಾಡಿದೆ. ದಿಲ್ಲಿಯ ರಿಡ್ಜ್ ಬೇಸ್ ಸ್ಟೇಷನ್ 45.8 ಡಿಗ್ರಿ ಗರಿಷ್ಠ ತಾಪಮಾನವನ್ನು ದಾಖಲಿಸಿದ್ದು, ಇದು ರಾಷ್ಟ್ರ ರಾಜಧಾನಿಯ ಅತ್ಯಂತ ಬಿಸಿಯಾದ ಸ್ಥಳವಾಗಿ ಹೊರಹೊಮ್ಮಿದೆ. ಆಯಾನಗರ್, ಪಾಲಮ್ ಮತ್ತು ಲೋಧಿ ರಸ್ತೆಯಲ್ಲಿ ಕ್ರಮವಾಗಿ 45 ಡಿಗ್ರಿ, 44.9 ಡಿಗ್ರಿ ಮತ್ತು 44.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಪ್ರಾದೇಶಿಕ ಹವಾಮಾನ ಇಲಾಖೆಯು ಮುಂದಿನ ವಾರ ಹಲವಾರು ಸ್ಥಳಗಳಲ್ಲಿ ತೀವ್ರ ಶಾಖದ ಅಲೆಯ ಎಚ್ಚರಿಕೆ ನೀಡಿದೆ. ಶಾಖದ ಅಲೆಯಿಂದ ಹಿಡಿದು ತೀವ್ರ ಶಾಖದ ಅಲೆಯ ಪರಿಸ್ಥಿತಿಗಳು ಮತ್ತು ಬೆಚ್ಚಗಿನ ರಾತ್ರಿಗಳ ದೃಷ್ಟಿಯಿಂದ ಹವಾಮಾನ ಕಚೇರಿಯು ಮುಂದಿನ ಮೂರು ದಿನಗಳವರೆಗೆ ಯೆಲ್ಲೋ ಅಲರ್ಟ್ ಮತ್ತು ನಂತರ ಕಿತ್ತಳೆ ಎಚ್ಚರಿಕೆಯನ್ನು ನೀಡಿದೆ.

43 ವರ್ಷಗಳ ಹಿಂದೆ ಕಳುವಾಗಿದ್ದ ಕಂಚಿನ ಪ್ರತಿಮೆ ವಾಪಸ್ ನೀಡಲು ಅಮೆರಿಕ ಒಪ್ಪಿಗೆ

ಅವಲೋಕಿತೇಶ್ವರ ವಿಗ್ರಹ ಭಾರತಕ್ಕೆ ಶೀಘ್ರ

• **ರಾಯ್ಪುರ:** ಛತ್ತೀಸ್‌ಗಢದ ಸಾಂಸ್ಕೃತಿಕ ಪರಂಪರೆ ಪಾಲಿಗೆ ಮಹತ್ತ್ವದ ಅಧ್ಯಾಯವೊಂದು ತೆರೆದುಕೊಳ್ಳುತ್ತಿದೆ. ಇಲ್ಲಿನ ರಾಯ್ಪುರದ ಮಹಂತ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಿಂದ ಕಳವಾಗಿ ಅಮೆರಿಕ ತಲುಪಿದ್ದ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 19 ಕೋಟಿ ರೂ. ಬೆಲೆಬಾಳುವ, ಭಗವಾನ್ ಅವಲೋಕಿತೇಶ್ವರನ ಕಂಚಿನ ಪ್ರತಿಮೆಯನ್ನು ಅಮೆರಿಕ ಕೊನೆಗೂ ಭಾರತಕ್ಕೆ ಮರಳಿಸುತ್ತಿದೆ.

ಭಾರತಕ್ಕೆ ವಿಗ್ರಹ ಸಾಗಣೆ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ . ವಿಗ್ರಹ ಭಾರತ ತಲುಪಿದ ಕೂಡಲೇ, ಇದನ್ನು ರಾಯ್ಪುರಕ್ಕೆ ತಂದು ಅದರ ಮೂಲಸ್ಥಾನ ಘಾಸಿದಾಸ್ ಮ್ಯೂಸಿಯಂನಲ್ಲಿ ಮರುಅಳವಡಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ಛತ್ತೀಸ್‌ಗಢ ಸರಕಾರ ಚಾಲನೆ ನೀಡಲಿದೆ ಎಂದು ಛತ್ತೀಸ್‌ಗಢ ಸಾಂಸ್ಕೃತಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.ಭಾರತಕ್ಕೆ ಸೇರಿದ ಸುಮಾರು 14



ಮಿಲಿಯನ್ ಡಾಲರ್ ಮೌಲ್ಯದ 657 ಪ್ರಾಚೀನ ಮತ್ತು ಐತಿಹಾಸಿಕ ವಿಗ್ರಹಗಳನ್ನು ಅಮೆರಿಕ ಈಗಾಗಲೆ ಭಾರತಕ್ಕೆ ಮರಳಿಸಿದೆ. ಭಾರತದಿಂದ ಕಳವಾದ ವಿಗ್ರಹಗಳ ವಾಪಸಾತಿ ಪ್ರಯತ್ನಗಳ ಭಾಗವಾಗಿ ಅಮೆರಿಕ ಪ್ರಸ್ತುತ 19 ಕೋಟಿ ರೂ. ಮೌಲ್ಯದ ಅವಲೋಕಿತೇಶ್ವರ ವಿಗ್ರಹವನ್ನು ಕೂಡ ದೇಶಕ್ಕೆ ಮರಳಿಸುತ್ತಿದೆ. ಅವಲೋಕಿತೇಶ್ವರ ವಿಗ್ರಹದ ವಾಪಸಾತಿಯು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪಾಲಿನ ವಿಜಯವಾಗಿದೆ.

1939ರ ಉತ್ಖನನ ವೇಳೆ ಸಿಕ್ಕಿತ್ತು ವಿಗ್ರಹ

ಛತ್ತೀಸ್‌ಗಢದ ಮಹಾಸಮುಂದ್ ಜಿಲ್ಲೆಯಲ್ಲಿ, ಪ್ರಾಚ್ಯವಸ್ತುಗಳಿಗೆ ಹೆಸರಾಂತ ಈಗಿನ ಸಿರ್‌ಪುರ ಅಥವಾ ಹಿಂದೆ ಶ್ರೀಪುರವೆಂದು ಅಭಿದಾನಿತ ಗ್ರಾಮದಲ್ಲಿನ, ಖ್ಯಾತ ಲಕ್ಷ್ಮಣ ದೇವಾಲಯ ಸಂಕೀರ್ಣ ಬಳಿ 1939ರಲ್ಲಿ ಈ ಕಂಚಿನ ವಿಗ್ರಹ ಪತ್ತೆಯಾಗಿತ್ತು. ವಲಯದಲ್ಲಿ ಉತ್ಖನನ ವೇಳೆ ಪತ್ತೆಯಾಗಿದ್ದ ಅಪಾರ ವಿಗ್ರಹಗಳಲ್ಲಿ ಅವಲೋಕಿತೇಶ್ವರ ವಿಗ್ರಹವೂ ಒಂದು. ವಿಗ್ರಹದ ಸಂರಕ್ಷಣೆ ದೃಷ್ಟಿಯಿಂದ ಆಗ ಇದನ್ನು ರಾಯ್ಪುರದ ಮಹಂತ್ ಘಾಸಿದಾಸ್ ಸ್ಮಾರಕ ಮ್ಯೂಸಿಯಂನಲ್ಲಿರಿಸಲಾಗಿತ್ತು. ಅಲ್ಲಿಂದ ಕಳವಾಗಿದ್ದ ಈ ವಿಗ್ರಹ ಅಂತಾರಾಷ್ಟ್ರೀಯ ಕಾಳಸಂತೆಗೆ ತಲುಪಿತ್ತು. ನಂತರದ ದಿನಗಳಲ್ಲಿ ಅಮೆರಿಕಗೆ ರವಾನೆಯಾಗಿತ್ತು. ಛತ್ತೀಸ್‌ಗಢದ ಸಂಪನ್ನ ಬೌದ್ಧ ಪರಂಪರೆಗಳು, ಪ್ರಾಚೀನ ಕರಕುಶಲತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಜೀವಂತ ದ್ಯೋತಕವಾಗಿದೆ ಅವಲೋಕಿತೇಶ್ವರ ವಿಗ್ರಹ. ಪ್ರಾಚೀನ ಭಾರತದಲ್ಲಿ ಬೌದ್ಧ ಸಂಸ್ಕೃತಿ, ವಾಸ್ತುಶಿಲ್ಪ ಮತ್ತು ಕಲೆಗಳಿಗೆ ಅತ್ಯಂತ ಹೆಸರಾದ ಊರಾಗಿತ್ತು ಈಗಿನ ಸಿರ್‌ಪುರ ಅಥವಾ ಆಗಿನ ಶ್ರೀಪುರ.

ಆರ್‌ಬಿಐನಿಂದ ಕರಡು ಪ್ರಸ್ತಾವನೆ | ಅಕ್ಟೋಬರ್ 1ರಿಂದ ಜಾರಿಗೆ

ಸಾಲ ಕಟ್ಟದಿದ್ದರೆ ಮೊಬೈಲ್ ಬಂದ್

• **ಮುಂಬೈ:** ಬಾಕಿ ಇರುವ ಸಾಲ ವಸೂಲಾತಿ ವೇಳೆಯಲ್ಲಿ ಬ್ಯಾಂಕುಗಳು ಮತ್ತು ಸಾಲ ವಸೂಲಾತಿ ಏಜೆಂಟ್‌ಗಳ ದಬ್ಬಾಳಿಕೆಗೆ ಕಡಿವಾಣ ಹಾಕಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೆಲವು ಪ್ರಸ್ತಾವನೆಗಳನ್ನು ಸಿದ್ಧಪಡಿಸಿದೆ. ವೈಯಕ್ತಿಕ, ವಾಹನ ಹಾಗೂ ಗೃಹ ಸಾಲ ಮರುಪಾವತಿಯಲ್ಲಿ ಡೀಫಾಲ್ಟ್ ಆಗಿರುವ ಗ್ರಾಹಕರ ಮೊಬೈಲ್ ಫೋನ್‌ಗಳನ್ನು ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಒಂದು ವೇಳೆ, ಮೊಬೈಲ್ ಮೇಲೆಯೇ ಸಾಲ ತೆಗೆದುಕೊಂಡು, ಅದನ್ನು ಕಟ್ಟದಿದ್ದರೆ ಮಾತ್ರ ಅವುಗಳನ್ನು ಬಂದ್ ಮಾಡಲು ಅವಕಾಶ ನೀಡಿದೆ. ಆದರೆ, ಇಲ್ಲಿ ಕೆಲವು ಸುರಕ್ಷಾ ಕ್ರಮಗಳ ಜತೆಗೆ ಇಂಥ ಕ್ರಮ ತೆಗೆದುಕೊಳ್ಳಬಹುದು ಎಂದಿದೆ. ಈ ಕ್ರಮಗಳು ಅ.1ರಿಂದ ಜಾರಿಗೆ ಬರಲಿವೆ. ಬುಧವಾರ ಬಿಡುಗಡೆಗೊಂಡ ಪರಿಷ್ಕೃತ ಕರಡು ಮಾರ್ಗಸೂಚಿಯಲ್ಲಿ, ಸಾಲ ವಸೂಲಿಗೆ ಬ್ಯಾಂಕ್‌ಗಳು ತಂತ್ರಜ್ಞಾನ ಆಧಾರಿತ ಒತ್ತಡದ ಕ್ರಮಗಳನ್ನು ಬಳಸಬಾರದು ಎಂದು ಹೇಳಲಾಗಿದೆ. ಆದರೆ, ಬ್ಯಾಂಕ್ ಸಾಲದ ಮೂಲಕವೇ ಖರೀದಿಸಿದ ಮೊಬೈಲ್ ಅಥವಾ ಸಾಧನಗಳ ವಿಷಯದಲ್ಲಿ ಮಾತ್ರ ಕೆಲವು ನಿರ್ಬಂಧ ಹೇರಲು ಅವಕಾಶ ನೀಡಲಾಗಿದೆ. ಅಂಥ ಸಂದರ್ಭದಲ್ಲಿಯೂ ಸಾಲ ಬಾಕಿ 90 ದಿನಗಳಿಗಿಂತ ಹೆಚ್ಚಿರಬೇಕು. ನೋಟಿಸ್ ನೀಡಿದ ಬಳಿಕವೂ ಸಾಲಗಾರ ಪಾವತಿ ಮಾಡದಿದ್ದರೆ ಮಾತ್ರ ಕ್ರಮ ಕೈಗೊಳ್ಳಬಹುದು ಎಂದು ಕರಡು ನಿಯಮ ಹೇಳಿದೆ.

ಇನ್ನೊಂದೆಡೆ, ತುರ್ತು ಸೇವೆಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಯಾವುದೇ ಕಾರಣಕ್ಕೂ ಬಂದ್ ಮಾಡುವಂತಿಲ್ಲ ಎಂದು ಆರ್‌ಬಿಐ ತಿಳಿಸಿದೆ. ಇಂಟರ್‌ನೆಟ್ ಪ್ರವೇಶ, ಇನ್‌ಕಮಿಂಗ್ ಕರೆಗಳು, ಎಸ್‌ಒಎಸ್ ಸೌಲಭ್ಯ ಹಾಗೂ ಸರ್ಕಾರದ ತುರ್ತು ಸುರಕ್ಷಾ ಸಂದೇಶಗಳನ್ನು ನಿರ್ಬಂಧಿಸಲು ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಸಾಲಗಾರರು ಬಾಕಿ ಹಣ ಪಾವತಿಸಿದ ತಕ್ಷಣ ಗರಿಷ್ಠ ಒಂದು ಗಂಟೆಯೊಳಗೆ ಎಲ್ಲಾ ನಿರ್ಬಂಧಗಳನ್ನು ತೆರವುಗೊಳಿಸಬೇಕು. ತಪ್ಪಾಗಿ ನಿರ್ಬಂಧ ಹೇರಿದರೆ ಅಥವಾ ತೆರವುಗೊಳಿಸುವಲ್ಲಿ ವಿಳಂಬವಾದರೆ ಬ್ಯಾಂಕ್‌ಗಳು ಪ್ರತಿ ಗಂಟೆಗೆ 250 ಪರಿಹಾರ ನೀಡಬೇಕಾಗುತ್ತದೆ ಎಂದು ಕರಡು ಸೂಚನೆ ತಿಳಿಸಿದೆ.

ಸಾಲ ವಸೂಲಾತಿ ವೇಳೆ ಬ್ಯಾಂಕ್ ಸಿಬ್ಬಂದಿ ಅಥವಾ ಏಜೆಂಟ್‌ಗಳು ಬೆದರಿಕೆ, ನಿಂದನಾತ್ಮಕ ಭಾಷೆ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಅವಮಾನಕಾರಿ ಕ್ರಮಗಳನ್ನು ಕೈಗೊಳ್ಳಬಾರದು ಎಂದು ಆರ್‌ಬಿಐ ಕಠಿಣ ಎಚ್ಚರಿಕೆ ನೀಡಿದೆ.

ಸಂಪಾದಕೀಯ

ನಿಲ್ಲದ ವರದಕ್ಷಿಣೆ ಸಾವುಗಳು

ಉತ್ತರ ಪ್ರದೇಶದಲ್ಲಿ ಇಬ್ಬರು ಮಹಿಳೆಯರು ಇತ್ತೀಚೆಗೆ ವರದಕ್ಷಿಣೆ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಮತ್ತೊಮ್ಮೆ ಇಡೀ ದೇಶದ ಗಮನವನ್ನು ವರದಕ್ಷಿಣೆ ಪಿಡುಗಿನ ಕುರಿತಂತೆ ಸೆಳೆದಿದೆ. ಟ್ವಿಶಾ ಶರ್ಮಾ ಎಂಬ 33ರ ಮಹಿಳೆ ತನ್ನ ಪತಿಯ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಸಾವಿಗೂ ಮುನ್ನ ಆಕೆ ತನ್ನ ತಾಯಿ ಮತ್ತು ಸ್ನೇಹಿತೆಯರೊಂದಿಗೆ ಹಂಚಿಕೊಂಡ ಮಾತುಕತೆಗಳಲ್ಲಿ ಪತಿಯ ಮನೆಯಲ್ಲಿ ತಾನು ಅನುಭವಿಸುತ್ತಿರುವ



ಕಿರುಕುಳ, ಚಿತ್ರಹಿಂಸೆಯ ಕುರಿತಂತೆ ವಿವರಿಸಿದ್ದಾಳೆ. ವರದಕ್ಷಿಣೆಗಾಗಿ ತನ್ನನ್ನು ಪೀಡಿಸುತ್ತಿರುವುದನ್ನು ತಿಳಿಸಿದ್ದಾಳೆ. ಇದರ ಬೆನ್ನಿಗೇ ಮತ್ತೊಂದು ಪ್ರಕರಣದಲ್ಲಿ, ದೀಪಿಕಾ ಎಂಬಾಕೆ ಮನೆಯ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡುದು ವರದಿಯಾಗಿದೆ. ಆಕೆಗೆ ಕೂಡಾ ಪತಿಯ ಮನೆಯವರು ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎಂಬುದಾಗಿ ಆಕೆಯ ಕುಟುಂಬಸ್ಥರು ಹೇಳುತ್ತಿದ್ದಾರೆ.

ಈ ಆಧುನಿಕ ಯುಗದಲ್ಲೂ ವರದಕ್ಷಿಣೆಗಾಗಿ ಪೀಡಿಸಲಾಗುತ್ತಿದೆ ಹಾಗೂ ಮಹಿಳೆಯರು ಆತ್ಮಹತ್ಯೆಯ ದಾರಿ ತುಳಿಯಲು ಪ್ರೇರೇಪಿಸುತ್ತದೆ ಎಂಬುದು ಆಚ್ಚರಿಯಾಗಿ ಕಂಡುಬರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ವರದಕ್ಷಿಣೆಗಾಗಿ ಆಗ್ರಹಿಸಿ ಮಹಿಳೆಯನ್ನು ಆಕೆಯ ಪತಿಯ ಮನೆಯವರು ಹತ್ಯೆಗೈಯುವ ಪ್ರಸಂಗಗಳೂ ಸಂಭವಿಸುತ್ತಿವೆ. ದಿಲ್ಲಿಯಲ್ಲಿ ಪೊಲೀಸ್ ಕಮಾಂಡೋ ಆಗಿದ್ದ ಗರ್ಭಿಣಿ ಪತ್ನಿಯನ್ನು ಪತಿಯು ಡಂಬೆಲ್‌ನಿಂದ ಹೊಡೆದು ಕೊಂದ ದಾರುಣ ಘಟನೆಯು ಜನವರಿಯಲ್ಲಿ ವರದಿಯಾದುದನ್ನು ಯಾರೂ ಮರೆಯಲಾರರು.

ವರದಕ್ಷಿಣೆ ಕಿರುಕುಳದ ಪ್ರಕರಣಗಳು ಹಾಗೂ ಅದರಿಂದ ಉಂಟಾಗುವ ಸಾವುಗಳು ಉತ್ತರ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ವಿಪರ್ಯಾಸವೆಂದರೆ ನಮ್ಮ ಕರ್ನಾಟಕವೂ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿಯೇ ಇದೆ. ರಾಷ್ಟ್ರೀಯ ಅಪರಾಧ ಬ್ಯೂರೋದ 2024 ವರದಿಯೊಂದರ ಪ್ರಕಾರ ಮೆಟ್ರೋಪಾಲಿಟನ್ ನಗರಗಳಲ್ಲಿ ಬೆಂಗಳೂರಿನಲ್ಲೇ ಅತ್ಯಧಿಕ ವರದಕ್ಷಿಣೆ ಕಿರುಕುಳಗಳು ವರದಿಯಾಗಿರುವುದು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ವರದಕ್ಷಿಣೆಗೆ ಸಂಬಂಧಿಸಿ 25 ಸಾವುಗಳೂ ಸಂಭವಿಸಿವೆ. 2024ರಲ್ಲಿ ದೇಶಾದ್ಯಂತ ಒಟ್ಟು 1.2 ಲಕ್ಷ ವರದಕ್ಷಿಣೆ ಕಿರುಕುಳದ ಪ್ರಕರಣಗಳು ದಾಖಲಾಗಿವೆ ಎಂಬುದು ಹಾಗೂ ವಾರ್ಷಿಕವಾಗಿ 7000 ವರದಕ್ಷಿಣೆಗೆ ಸಂಬಂಧಿಸಿ ಸಾವುಗಳು ಸಂಭವಿಸುತ್ತಿವೆ ಎನ್ನುವುದು ಅತ್ಯಂತ ಆಘಾತಕಾರಿಯಾದ ವಿಷಯ. ಇನ್ನು ಪೊಲೀಸರಿಗೆ ದೂರು ದಾಖಲಿಸದೆ ವರದಕ್ಷಿಣೆ ಕಿರುಕುಳ ಅನುಭವಿಸುತ್ತಿರುವ ಅದೆಷ್ಟು ಕೋಟ್ಯಂತರ ಬಡಪಾಯಿಗಳಿದ್ದಾರೋ ಅರಿತವರಾರು?

ನಿಜವಾಗಿ ವರದಕ್ಷಿಣೆ ಪಡೆಯುವುದನ್ನು ನಿಷೇಧಿಸಿ 1961ರಲ್ಲೇ ಕಾನೂನು ತರಲಾಗಿದೆ. ಆದರೆ ವರದಕ್ಷಿಣೆಯ ಬದಲಿಗೆ 'ಕೊಡುಗೆಗಳನ್ನು' ಕೊಡುವ ಅಥವಾ ಅದಕ್ಕಾಗಿ ಬೇಡಿಕೆಯಿಡುವ ಪದ್ಧತಿಗಳು ವರದಕ್ಷಿಣೆ ಪಿಡುಗನ್ನು ಜೀವಂತವಾಗಿರಿಸಿವೆ. ವರದಕ್ಷಿಣೆ ಪಿಡುಗು ಕೇವಲ ಶಾಸನಾತ್ಮಕವಾಗಿ ನಿವಾರಿಸಲ್ಪಡುವಂತಹುದಲ್ಲ, ಮುಖ್ಯವಾಗಿ ಜನರಲ್ಲಿ ಮಾನಸಿಕ ಬದಲಾವಣೆಯಿಂದ ಉಂಟಾಗಬೇಕಾಗಿರುವುದು ಎಂಬುದು ಸತ್ಯ.

ಅವಮಾನವಲ್ಲ, ಆತ್ಮಗೌರವದ ಭಾರತವನ್ನು ಅರಿಯಿರಿ



ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com

ಒಂದು ದೇಶದ ಪ್ರಧಾನಿಯನ್ನು ಟೀಕಿಸುವುದು ಪತ್ರಿಕೋದ್ಯಮದ ವ್ಯಾಪ್ತಿಗೆ ಬರುತ್ತದೆ. ಸರ್ಕಾರದ ನೀತಿಗಳನ್ನು ಪ್ರಶ್ನಿಸುವುದು ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣವೂ ಹೌದು. ಆದರೆ, ಒಬ್ಬ ನಾಯಕನನ್ನು ಅಥವಾ ಒಂದು ದೇಶದ ಸಾಂಸ್ಕೃತಿಕ ಗುರುತನ್ನೇ ಹಾಸ್ಯಾಸ್ಪದಗೊಳಿಸುವ ಮಟ್ಟಕ್ಕೆ ಇಳಿದರೆ, ಅದು ಪತ್ರಿಕೋದ್ಯಮವಾಗುವುದಿಲ್ಲ, ಅದು ಪೂರ್ವಾಗ್ರಹ. ಅದು ವಸಾಹತುಶಾಹಿ ಮನೋಭಾವದ ಉಳಿದ ಅವಶೇಷ. ಇತ್ತೀಚೆಗೆ ನಾರ್ವೆಯಲ್ಲಿ ನಡೆದ ಘಟನೆ ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ನಾರ್ವೆ ಭೇಟಿಯ ವೇಳೆ ಒಬ್ಬ ಪತ್ರಕರ್ತೆ ಕೇಳಿದ ಪ್ರಶ್ನೆಗೆ ಉತ್ತರಿಸದೇ ಮುಂದೆ ಸಾಗಿದ ವಿಚಾರವನ್ನು ಕೆಲವರು 'ಪತ್ರಿಕಾ ಸ್ವಾತಂತ್ರ್ಯದ ಹರಣ' ಎಂಬಂತೆ ಚಿತ್ರಿಸಲು ಮುಂದಾಗಿದ್ದಾರೆ. ಭಾರತದಲ್ಲಿ ಪ್ರಶ್ನೆ ಕೇಳಲು ಅವಕಾಶವಿಲ್ಲ, ಸರ್ಕಾರ ಟೀಕೆಗಳನ್ನು ಸಹಿಸುವುದಿಲ್ಲ ಎಂಬ ಮಾತುಗಳನ್ನು ಕೆಲ ವಲಯಗಳು ಜೋರಾಗಿ ಹರಡುತ್ತಿವೆ. ಆದರೆ, ಇದು ಹೇಗಿದೆ ಅಂದರೆ ದಾರಿಯಲ್ಲಿ ಯಾರೋ ಹೋಗುವಾಗ ಓಯ್, ಊಟ ಆಯ್ತಾ ಅಂತ ಜೋರಾಗಿ ಕೂಗಿ ಕೇಳಿ, ಆಕಡೆಯಿಂದ ಉತ್ತರ ಬರದಿದ್ದರೆ ಎಂಥ ಅಹಂಕಾರ ಅಂದ ಹಾಗೆ ಆಯಿತು. ಪಾಪ, ಈ ಪತ್ರಿಕೋದ್ಯಮದ ದೊಡ್ಡ ನಾಯಕಿಯಂತೆ ಬಿಂಬಿಸುತ್ತಿರುವ ಆ ಪತ್ರಕರ್ತೆಯೇ, ಈ ಜಂಟಿ ಹೇಳಿಕೆ ವೇಳೆ ಪತ್ರಕರ್ತರ ಪ್ರಶ್ನೆಗಳಿಗೆ ಅವಕಾಶಗಳಿರಲಿಲ್ಲ, ಆದರೂ ನಾನು ಕೂಗಿದೆ ಎಂದು ಹೇಳಿಕೊಂಡಿದ್ದಾಳೆ. ಕಳೆದ ಮೂರು ವರ್ಷಗಳಿಂದ ನಿಷ್ಕ್ರಿಯ ಪತ್ರಕರ್ತೆಯಾಗಿದ್ದ ಈಕೆ, ಈಗ ದಿಢೀರನೇ ಸಕ್ರಿಯ ಪತ್ರಕರ್ತೆಯಾಗಿದ್ದಾಳೆ. ಅದೇ ಕಾರ್ಯಕ್ರಮದ ನಂತರ ಭಾರತೀಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸದ ನಾರ್ವೆ ಪ್ರಧಾನಿಯ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಇಲ್ಲಿ ಅಬ್ಬರಿಸುತ್ತಿರುವವರು ಮಾತ್ರ ಸುಮ್ಮನಿದ್ದಾರೆ.

ಇರಲಿ, ಇದೇ ನಾರ್ವೆಯ ಪ್ರಮುಖ ಪತ್ರಿಕೆಯೊಂದರಲ್ಲಿ ಪ್ರಕಟವಾದ ಕಾರ್ಟೂನ್ ಮಾತ್ರ ಪಾಶ್ಚಿಮಾತ್ಯ ಮನೋಭಾವದ ನಿಜಸ್ವರೂಪವನ್ನು ಬಯಲಿಗೆಳೆದಿದೆ. ಆ ಕಾರ್ಟೂನ್‌ನಲ್ಲಿ ಭಾರತದ ಪ್ರಧಾನಿಯನ್ನು ಹಾವಿನ ಮುಂದೆ ಪುಂಗಿ ಊದುತ್ತಿರುವ ಹಾವಾಡಿಗನಂತೆ ಚಿತ್ರಿಸಲಾಗಿದೆ. ಇದು ಕೇವಲ ಒಂದು ರಾಜಕೀಯ ವ್ಯಂಗ್ಯಚಿತ್ರವಲ್ಲ, ಇದು ಭಾರತದ ಬಗ್ಗೆ ಇನ್ನೂ ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಜೀವಂತವಾಗಿರುವ ಅಹಂಕಾರದ ಮನಸ್ಥಿತಿ. 'ಭಾರತ ಎಂದರೆ ಹಾವಾಡಿಗರ ದೇಶ', 'ಅಭಿವೃದ್ಧಿಯ ಅರಿವು ಇಲ್ಲದ ಸಮಾಜ', 'ಪಾಶ್ಚಿಮಾತ್ಯರ ಮಾರ್ಗದರ್ಶನ ಬೇಕಾದ ರಾಷ್ಟ್ರ' ಎಂಬ ಹಳೆಯ ಕಲ್ಪನೆಗಳನ್ನು ಇಂದಿಗೂ ಹಿಡಿದುಕೊಂಡಿರುವ ಮನೋವೈಕಲ್ಯ.



ನಾರ್ವೆ ಪತ್ರಿಕೆಯಲ್ಲಿ ಪ್ರಕಟವಾದ ವಿವಾದಿತ ವ್ಯಂಗ್ಯ ಚಿತ್ರ

ಒಮ್ಮೆ ಭಾರತವನ್ನು ಜಗತ್ತು ದಾರಿದ್ರ್ಯದ ಸಂಕೇತವಾಗಿ ನೋಡಿರಬಹುದು. ಹಸಿವಿನ ಚಿತ್ರಗಳು, ಅಭಿವೃದ್ಧಿಹೀನ ಹಳ್ಳಿಗಳು, ಹಾವು-ಮಂಗಗಳ ಆಟ ಇವೆಲ್ಲವನ್ನೇ ಭಾರತವೆಂದು ಬಿಂಬಿಸಲಾಗುತ್ತಿತ್ತು. ಆದರೆ, ಆ ಭಾರತ ಈಗ ಬದಲಾಗಿದೆ. ಮಾಹಿತಿ ತಂತ್ರಜ್ಞಾನದಿಂದ ಹಿಡಿದು ಬಾಹ್ಯಾಕಾಶ ಸಂಶೋಧನೆವರೆಗೆ, ಡಿಜಿಟಲ್ ಆರ್ಥಿಕತೆಯಿಂದ ಹಿಡಿದು ರಕ್ಷಣಾ ಉತ್ಪಾದನೆವರೆಗೆ ಭಾರತ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿದೆ.

ಇಂದು ಜಗತ್ತಿನ ದೊಡ್ಡ ತಂತ್ರಜ್ಞಾನ ಕಂಪನಿಗಳಲ್ಲಿ ಭಾರತೀಯರು ಮುನ್ನಡೆಸುತ್ತಿದ್ದಾರೆ. ಜಾಗತಿಕ ಔಷಧೋದ್ಯಮದಲ್ಲಿ ಭಾರತದ ಪಾಲು ನಿರ್ಣಾಯಕವಾಗಿದೆ. ಕೊರೋನಾ ಕಾಲದಲ್ಲಿ ಶ್ರೀಮಂತ ರಾಷ್ಟ್ರಗಳೇ ತತ್ತರಿಸಿದ್ದಾಗ, ಭಾರತವೇ ಅನೇಕ ದೇಶಗಳಿಗೆ ಲಸಿಕೆ ಕಳುಹಿಸಿತ್ತು. ಒಮ್ಮೆ ಆಹಾರ ಸಹಾಯಕ್ಕಾಗಿ ವಿದೇಶಗಳ ಬಾಗಿಲು ತಟ್ಟುತ್ತಿದ್ದ ದೇಶ, ಇಂದು ಮಾನವೀಯ ನೆರವಿಗಾಗಿ ಜಗತ್ತಿನ ಅನೇಕ ಭಾಗಗಳಿಗೆ ಧಾವಿಸುತ್ತಿದೆ.

ಚಂದ್ರಯಾನದಿಂದ ಹಿಡಿದು ಆದಿತ್ಯ ಮಿಷನ್‌ವರೆಗೆ ಭಾರತದ ವೈಜ್ಞಾನಿಕ ಸಾಧನೆಗಳು ವಿಶ್ವವನ್ನು ಬೆರಗುಗೊಳಿಸಿವೆ. ಯುಪಿಐ ಮೂಲಕ ಭಾರತ ಕಟ್ಟಿದ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಈಗ ಅನೇಕ ರಾಷ್ಟ್ರಗಳು ಅಧ್ಯಯನ ಮಾಡುತ್ತಿವೆ. ಜಿ-20 ಶೃಂಗಸಭೆಯ ಮೂಲಕ ಭಾರತ ತನ್ನ ಜಾಗತಿಕ ನಾಯಕತ್ವವನ್ನು ಸಾಬೀತುಪಡಿಸಿದೆ. ಇಂತಹ ದೇಶವನ್ನು ಇನ್ನೂ 'ಹಾವಾಡಿಗರ ಭಾರತ' ಎಂಬ ಹಳೆಯ ದೃಷ್ಟಿಕೋನದಿಂದ ನೋಡುವುದು ಅವರ ಬೌದ್ಧಿಕ ದಾರಿದ್ರ್ಯವನ್ನೇ ತೋರಿಸುತ್ತದೆ.

ವಾಸ್ತವವಾಗಿ, ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭಾರತದ ಏಳಿಗೆ ಅಸಹನೀಯವಾಗುತ್ತಿದೆ. ಒಂದು ಕಾಲದಲ್ಲಿ ತಮ್ಮ ಮಾರುಕಟ್ಟೆ, ತಮ್ಮ ಆರ್ಥಿಕ ವ್ಯವಸ್ಥೆ, ತಮ್ಮ ರಾಜಕೀಯ ಪ್ರಭಾವದ ಮೇಲೆ ಅವಲಂಬಿತವಾಗಿದ್ದ ದೇಶ ಈಗ ಸ್ವತಂತ್ರ ಧ್ವನಿಯೊಂದಿಗೆ ಜಾಗತಿಕ ವೇದಿಕೆಯಲ್ಲಿ ನಿಂತಿದೆ. ರಷ್ಯಾ-ಉಕ್ರೇನ್ ಯುದ್ಧದ ವಿಚಾರದಲ್ಲಿಯೂ ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಮೊದಲು ಇಟ್ಟುಕೊಂಡಿತು. ಪಾಶ್ಚಿಮಾತ್ಯ ಒತ್ತಡಕ್ಕೆ ಮಣಿಯಲಿಲ್ಲ, ಇದೇ ಅವರಿಗೆ ಅಸಹಜವಾಗಿ ಕಾಣುತ್ತಿದೆ.

ಇನ್ನು 'ಭಾರತವನ್ನು ಯಾಕೆ ನಂಬಬೇಕು?' ಎಂಬ ಪ್ರಶ್ನೆ ಕೇಳಿದ ಪತ್ರಕರ್ತೆಯ ಧೋರಣೆ ನೋಡಿದರೆ, ಅದು ಪತ್ರಿಕೋದ್ಯಮಕ್ಕಿಂತ ಹೆಚ್ಚು ಅಹಂಕಾರದ ಪ್ರತಿಬಿಂಬವಾಗಿ ಕಾಣುತ್ತದೆ. 140 ಕೋಟಿಗೂ ಹೆಚ್ಚು ಜನಸಂಖ್ಯೆಯ, ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯ ರಾಷ್ಟ್ರವನ್ನು ಪ್ರಶ್ನಿಸುವ ಮುನ್ನ, ಅವರೇ ತಮ್ಮ ಇತಿಹಾಸವನ್ನು ಒಮ್ಮೆ ನೋಡಿಕೊಳ್ಳಬೇಕು. ವಸಾಹತುಶಾಹಿಯ ಹೆಸರಿನಲ್ಲಿ ಎಷ್ಟು ದೇಶಗಳನ್ನು ಶೋಷಿಸಲಾಗಿದೆ? ಎಷ್ಟು ಸಮಾಜಗಳನ್ನು ಧ್ವಂಸ ಮಾಡಲಾಗಿದೆ? ಜಗತ್ತಿನ ಅನೇಕ ಯುದ್ಧಗಳಿಗೆ ಕಾರಣವಾದದ್ದು ಯಾರು? ಈ ಪ್ರಶ್ನೆಗಳ ಉತ್ತರವೇ ಪಾಶ್ಚಿಮಾತ್ಯರ ನೈತಿಕತೆಗೆ ಕನ್ನಡಿಯಂತಿದೆ.

ಅಷ್ಟೇ ಅಲ್ಲ, ಈಗ ಇರಾನ್ ಮೇಲೆ ಯುದ್ಧ ಸಾರಿದ ಅಮೆರಿಕದ ಮನಸ್ಥಿತಿ ಎಂಥದ್ದು? ಈ ಯುದ್ಧದಿಂದಾಗಿ ಇಡೀ ಜಗತ್ತಿನ ಸರಪಳಿ ಅಲುಗಾಡಿದೆ. ಕೊರೋನಾ ಕಾಲಕ್ಕಿಂತ ಅಧಿಕ ಸಮಸ್ಯೆಯಾಗುವ ಸಾಧ್ಯತೆಗಳಿವೆ, ಬಡತನ ಇನ್ನಷ್ಟು ಹೆಚ್ಚಾಗಬಹುದು ಎಂಬ ಮಾತುಗಳೂ ಇವೆ. ಇದನ್ನು ಸೃಷ್ಟಿಸಿದ್ದು ಯಾರು? ಅದೇ ಅಮೆರಿಕ ಮತ್ತು ಮಿತ್ರ ದೇಶಗಳಲ್ಲವೇ? ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿನ ಯುದ್ಧ ನಿಲ್ಲಿಸಿದೆ ಎಂದು ಹೇಳುತ್ತಲೇ ಯುದ್ಧ ಆರಂಭಿಸಿದ ಟ್ರಂಪ್ ಅಥವಾ ಅಮೆರಿಕದ ಗುಣಗಾನ ಮಾಡುತ್ತಲೇ ಈ ದೇಶಗಳು ಬದುಕಿಲ್ಲವೇ?

ಭಾರತ ಯಾರಿಂದಲೂ ನಂಬಿಕೆ ಪತ್ರ ಕೇಳಿಕೊಂಡಿಲ್ಲ, ನಮ್ಮ ಪ್ರಜಾಪ್ರಭುತ್ವವೇ ನಮ್ಮ ಶಕ್ತಿ. ನೂರಾರು ಭಾಷೆಗಳು, ಅನೇಕ ಧರ್ಮಗಳು, ವಿಭಿನ್ನ ಸಂಸ್ಕೃತಿಗಳ ನಡುವೆ ಇಷ್ಟೊಂದು ದಶಕಗಳಿಂದ ಪ್ರಜಾಪ್ರಭುತ್ವವನ್ನು ಜೀವಂತವಾಗಿಟ್ಟಿರುವುದು ಸಣ್ಣ ಸಾಧನೆಯಲ್ಲ. ಅನೇಕ ದೇಶಗಳಲ್ಲಿ ಸೈನಿಕ ಆಡಳಿತಗಳು ಬಂದಿವೆ, ಗೃಹಯುದ್ಧಗಳು ನಡೆದಿವೆ, ಸಂವಿಧಾನಗಳು ಕುಸಿದಿವೆ. ಆದರೆ ಭಾರತದಲ್ಲಿ ಜನರೇ ಅಂತಿಮ ತೀರ್ಪುಗಾರರು ಎಂಬ ವ್ಯವಸ್ಥೆ ಇನ್ನೂ ಗಟ್ಟಿಯಾಗಿ ಉಳಿದಿದೆ.

ಇದೇ ಕಾರಣಕ್ಕೆ ಭಾರತದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಕೆಲವು ವಲಯಗಳಲ್ಲಿ ಅಸಹಜ ಅಸಹನೆ ಕಂಡುಬರುತ್ತಿದೆ. ಭಾರತ ಬಲಿಷ್ಠವಾಗುತ್ತಿರುವುದು ಅವರಿಗೆ ಅಸ್ವಸ್ಥತೆಯನ್ನು ಉಂಟುಮಾಡುತ್ತಿದೆ. ಏಕೆಂದರೆ, ಈಗ ಭಾರತ ಕೇವಲ ಮಾರುಕಟ್ಟೆಯಲ್ಲ, ಅದು ಜಾಗತಿಕ ನಿರ್ಣಯಗಳಲ್ಲಿ ಪ್ರಭಾವ ಬೀರುವ ಶಕ್ತಿಯಾಗಿದೆ.

ಇಂತಹ ಸಂದರ್ಭಗಳಲ್ಲಿ ಭಾರತದ ಒಳರಾಜಕೀಯವೂ ಜವಾಬ್ದಾರಿಯುತವಾಗಿರಬೇಕು. ಆಡಳಿತ ಪಕ್ಷವನ್ನು ಟೀಕಿಸುವುದು ಪ್ರತಿಪಕ್ಷಗಳ ಕರ್ತವ್ಯ. ಆದರೆ, ವಿದೇಶಿ ನೆಲದಲ್ಲಿ ದೇಶದ ಗೌರವಕ್ಕೆ ಧಕ್ಕೆ ಉಂಟಾದಾಗ, ಅದನ್ನು ರಾಜಕೀಯ ಆಯುಧವನ್ನಾಗಿ ಬಳಸುವುದು ಅಪಾಯಕಾರಿ ಪ್ರವೃತ್ತಿ. ಸರ್ಕಾರದ ವಿರುದ್ಧದ ದ್ವೇಷ ದೇಶದ ವಿರುದ್ಧದ ಅಸಹನೆಯಾಗಿ ಮಾರ್ಪಡಬಾರದು.

ದುರದೃಷ್ಟವಶಾತ್, ಕೆಲವು ರಾಜಕೀಯ ನಾಯಕರು ಮತ್ತು ವಿಚಾರವಂತರಿಗೆ ಭಾರತವನ್ನು ಟೀಕಿಸುವ ಯಾವುದೇ ವಿದೇಶಿ ಧ್ವನಿಯೂ ಸತ್ಯದ ಪ್ರತಿನಿಧಿಯಂತೆ ಕಾಣುತ್ತಿದೆ. ವಿದೇಶಿ ಪತ್ರಿಕೆಯೊಂದು ಭಾರತದ ಪ್ರಧಾನಿಯನ್ನು ಅವಮಾನಿಸಿದರೂ, ಅದರಲ್ಲಿ ಸಮಸ್ಯೆ ಕಾಣದೇ, ಅದನ್ನು ಸಮರ್ಥಿಸಲು ಪ್ರಯತ್ನಿಸುವ ಮನೋಭಾವ ಇನ್ನೂ ಆತಂಕಕಾರಿ. ಇದು ವೈಚಾರಿಕ ದಾಸ್ಯತೆಯ ಲಕ್ಷಣ ಎನ್ನಲಡ್ಡಿಯಿಲ್ಲ.

ಸ್ವಾತಂತ್ರ್ಯ ಎಂದರೆ ಜವಾಬ್ದಾರಿಯಿಲ್ಲದ ವರ್ತನೆಗೆ ಪರವಾನಗಿ ಅಲ್ಲ, ಪತ್ರಿಕಾ ಸ್ವಾತಂತ್ರ್ಯ ಎಂದರೆ ಯಾರನ್ನಾದರೂ ಅವಮಾನಿಸುವ ಹಕ್ಕು ಎಂದಾದರೆ, ಅದೇ ತರ್ಕವನ್ನು ಜಗತ್ತಿನ ಎಲ್ಲ ದೇಶಗಳೂ ಒಪ್ಪಬೇಕಾಗುತ್ತದೆ. ಆಗ ಧರ್ಮ, ಸಂಸ್ಕೃತಿ, ಜನಾಂಗ, ರಾಷ್ಟ್ರೀಯ ಗುರುತು ಯಾವುದಕ್ಕೂ ಗೌರವ ಉಳಿಯುವುದಿಲ್ಲ. ಪಾಶ್ಚಿಮಾತ್ಯ ಮಾಧ್ಯಮಗಳ ಒಂದು ಸಮಸ್ಯೆ ಏನೆಂದರೆ, ಅವರು ಜಗತ್ತನ್ನು ಇನ್ನೂ ತಮ್ಮ ಕಣ್ಣಿನಿಂದಲೇ ಅಳೆಯಲು ಪ್ರಯತ್ನಿಸುತ್ತಾರೆ. ಅವರ ರಾಜಕೀಯ ಮಾದರಿಯೇ ಶ್ರೇಷ್ಠ, ಅವರ ಸಂಸ್ಕೃತಿಯೇ ಪ್ರಗತಿಶೀಲ, ಅವರ ಮೌಲ್ಯಗಳೇ ಅಂತಿಮ ಸತ್ಯ ಎಂಬ ಮನೋಭಾವದಿಂದ ಹೊರಬರಲು ಸಾಧ್ಯವಾಗಿಲ್ಲ. ಇದೇ ಕಾರಣಕ್ಕೆ ಭಾರತ ತನ್ನದೇ ದಾರಿಯಲ್ಲಿ ಸಾಗಿದಾಗ ಅವರಿಗೆ ಅದು ಅಸಹಜವಾಗಿ ಕಾಣುತ್ತದೆ.

ಭಾರತ ಇಂದು ಆತ್ಮವಿಶ್ವಾಸದ ರಾಷ್ಟ್ರ, ಜಾಗತಿಕ ವೇದಿಕೆಯಲ್ಲಿ ತಲೆತಗ್ಗಿಸದೇ ಮಾತನಾಡುವ ರಾಷ್ಟ್ರ, ತನ್ನ ಹಿತಾಸಕ್ತಿಗಳನ್ನು ಮುಂಚೂಣಿಯಲ್ಲಿ ಇಡುವ ರಾಷ್ಟ್ರ, ಇಂತಹ ದೇಶವನ್ನು ಹಳೆಯ ಕಾಲದ ಸ್ಟೀರಿಯೋಟೈಪ್‌ಗಳಿಂದ ಅಳೆಯುವ ಪ್ರಯತ್ನಗಳು ಈಗ ಅಪ್ರಸ್ತುತ. ಭಾರತದ ಬಗ್ಗೆ ಜಗತ್ತು ಅಭಿಪ್ರಾಯ ಹೇಳಬಹುದು. ಟೀಕಿಸಬಹುದು. ಪ್ರಶ್ನಿಸಬಹುದು. ಆದರೆ, ಭಾರತವನ್ನು ಹೀನಾಯವಾಗಿ ಚಿತ್ರಿಸುವ ಪ್ರಯತ್ನಗಳಿಗೆ ಪ್ರತಿಕ್ರಿಯೆ ಸಿಗುತ್ತದೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಇದು 1950ರ ಭಾರತವಲ್ಲ, ಇದು ಆತ್ಮಗೌರವದ ಭಾರತ. ತನ್ನ ಬಗ್ಗೆ ತಾನೇ ಹೆಮ್ಮೆಪಡುವ ಭಾರತ. ಜಗತ್ತಿಗೆ ತನ್ನ ಶಕ್ತಿಯನ್ನು ತೋರಿಸಿರುವ ಭಾರತ.

ಪತ್ರಿಕೋದ್ಯಮಕ್ಕೆ ಗೌರವ ಇದೆ. ಪ್ರಶ್ನೆ ಕೇಳುವ ಹಕ್ಕಿಗೂ ಗೌರವ ಇದೆ. ಆದರೆ, ಅವಮಾನಕ್ಕೆ ಗೌರವವಿಲ್ಲ, ಭಾರತದ ಏಳಿಗೆಯನ್ನು ಒಪ್ಪಿಕೊಳ್ಳಲು ಅಸಮರ್ಥರಾಗಿರುವವರು ಇನ್ನೂ ಹಳೆಯ ಕಾಲದ ಮನೋವೈಕಲ್ಯದಲ್ಲೇ ಸಿಲುಕಿಕೊಂಡಿದ್ದಾರೆ. ಕಾಲ ಬದಲಾಗಿದೆ. ಭಾರತವೂ ಬದಲಾಗಿದೆ. ಈಗ ಜಗತ್ತೂ ತನ್ನ ದೃಷ್ಟಿಕೋನವನ್ನು ಬದಲಿಸಬೇಕಾದ ಸಮಯ ಬಂದಿದೆ.

ಮಾತಿನ ಶೈಲಿ ವಿಭಿನ್ನ

ಏಕೈಕಸ್ಯಾಪಿ ವೃಕ್ಷಸ್ಯ ಫಲೇ ದೃಷ್ಟಂ ರಸಾಂತರಮ್।
ಏಕೈಕಸ್ಯಾಪಿ ಮರ್ತ್ಯಸ್ಯ ವಕ್ತ್ರೇ ಭಿನ್ನಾ ಸರಸ್ವತೀ ॥ – ಸುಭಾಷಿತ ಶತಕಮ್

ಒಂದೊಂದು ಮರದ ಹಣ್ಣಿನಲ್ಲೂ ರುಚಿಯು ಬೇರೆ ಬೇರೆಯಾಗಿರುತ್ತದೆ. ಹಾಗೆ ಒಬ್ಬೊಬ್ಬರ ಬಾಯಿಯಲ್ಲೂ ಸರಸ್ವತಿಯು (ಅಂದರೆ ಮಾತಿನ ಶೈಲಿಯು) ಭಿನ್ನಭಿನ್ನವಾಗಿರುತ್ತದೆ – ಎಂಬುದು ಶ್ಲೋಕಾರ್ಥ.

ಪ್ರಪಂಚದ ಉದ್ದಗಲಕ್ಕೂ ಇರುವ ಭಗವಂತನ ಸೃಷ್ಟಿ ಚಿತ್ರ-ವಿಚಿತ್ರವಾದದ್ದು, ವಿಶಿಷ್ಟವಾದದ್ದು. ಮನುಷ್ಯ ಲೋಕವನ್ನೊಮ್ಮೆ ನೋಡಿ! ಎಷ್ಟೊಂದು ಕೋಟಿ ಜನರಿದ್ದಾರೆ. ಆದರೆ ಅವರೆಲ್ಲರೂ ಒಂದೆ ಬಗೆಯಾಗಿ ಇಲ್ಲ, ಒಬ್ಬರಿಗಿಂತ ಇನ್ನೊಬ್ಬರಲ್ಲಿ ಸಣ್ಣದಾದರೂ ವ್ಯತ್ಯಾಸವಿದ್ದೇ ಇರುತ್ತದೆ. ಅವಳಿ ಜವಳಿ ಮಕ್ಕಳಲ್ಲೂ ಸೂಕ್ಷ್ಮವಾದ ವ್ಯತ್ಯಾಸವಿದ್ದೇ ಇದೆ. ಇದಕ್ಕಾಗಿಯೇ ಭಗವಂತನ ಸೃಷ್ಟಿ ಆಶ್ಚರ್ಯವೆನಿಸುವುದು.



ಒಂದೇ ಜಾತಿಯ ಮರಗಳಿರಲಿ, ಒಂದೊಂದು ಮರದ ಹಣ್ಣಿನ ರುಚಿಯಲ್ಲೂ ಬೇರೆ ರೀತಿಯಿರುತ್ತದೆ. ಅಂದರೆ ಒಂದರಂತೆ ಇನ್ನೊಂದಿಲ್ಲ, ಕೆಲವೊಮ್ಮೆ ಮೇಲ್ನೋಟಕ್ಕೆ ಏಕಪ್ರಕಾರವಾಗಿ ಕಂಡರೂ ರುಚಿಯಲ್ಲಿ ವ್ಯತ್ಯಾಸ ಇದೆ. ಸೂಕ್ಷ್ಮ ವ್ಯತ್ಯಾಸವಿದ್ದೇ ಇರುತ್ತದೆ.

ಬಹುಶಃ ಇದಕ್ಕಾಗಿಯೇ ಇರಬೇಕು ಬಲ್ಲವರು ಜಗತ್ತಿನಲ್ಲಿ ಒಂದು ವಸ್ತುವಿನಂತೆ ಇನ್ನೊಂದು ವಸ್ತುವಿಲ್ಲ ಎನ್ನುವುದು. ಸೂಕ್ಷ್ಮವಾಗಿ ಚಿಂತನೆ ನಡೆಸಿದರೆ ಈ ಮಾತಿನಲ್ಲಿ ಸತ್ಯವಿದೆ ಎನ್ನಿಸುತ್ತದೆ.

ಒಂದೇ ಪದ್ಯವನ್ನು ಒಂದೇ ರಾಗ, ತಾಳ, ಲಯಗಳಲ್ಲಿ ಬೇರೆ ಬೇರೆ ಗಾಯಕರು ಹಾಡಿದರೆ ಅವರ ಹಾಡುವಿಕೆಯಲ್ಲಿ ಸಾಕಷ್ಟು ಮಾರ್ಪಾಡಿರುತ್ತವೆ. ಒಂದೇ ವಿಷಯದ ಕುರಿತು ಬೇರೆ ಬೇರೆ ವಿದ್ವಾಂಸರು ಉಪನ್ಯಾಸವಿತ್ತರೂ ಅದರಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಾಣಬಹುದು. ಇದರಿಂದಗೊತ್ತಾಗುವುದಿಷ್ಟೆ! 'ಒಂದರಂತೆ ಇನ್ನೊಂದಿಲ್ಲ' ಎಂಬುದಾಗಿ.

ಮರ, ಗಿಡ, ಬಳ್ಳಿ ಹಾಗೂ ಅವುಗಳಲ್ಲಿ ಅರಳುವ ಹೂವು, ಬಿಡುವ ಹಣ್ಣು ಇವುಗಳನ್ನು ಕವಿಯು ಸೂಕ್ಷ್ಮವಾಗಿ ಗಮನಿಸಿದ್ದಾನೆ, ಅನುಭವಿಸಿದ್ದಾನೆ. ಅಂತೆಯೇ ಜನರಾಡುವ ಮಾತು, ಮಾತಿನ ಶೈಲಿ ಇವುಗಳನ್ನೂ ಗಮನಿಸಿದ್ದಾನೆ. ಇಂತಹ ದಿಟ್ಟ ಅನುಭವದ ಹಿನ್ನೆಲೆಯಲ್ಲಿ ಈ ಶ್ಲೋಕದ ಮೂಲಕ ಮಾತಿನ ಶೈಲಿಯ, ವೈಖರಿಯ ವಿಭಿನ್ನತೆಯನ್ನು ಗುರುತಿಸಿ ನಿರೂಪಿಸಿದ್ದಾನೆ.

ಎಲ್ಲರೂ ಮಾತು ಬಲ್ಲವರೇ. ಎಲ್ಲರೂ ವಿಷಯ ಜ್ಞಾನ ಹೊಂದಿದವರೇ. ಆದರೆ ಅವರಾಡುವ ಮಾತು ಒಂದೇ ವಿಷಯವನ್ನೊಳಗೊಂಡಿದ್ದರೂ ನಿರೂಪಣ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಒಂದು ವಿಷಯ ಗೊತ್ತಿದ್ದರೂ ಹೇಳುವವನ ಆಕರ್ಷಕ ಶೈಲಿ ನಮ್ಮನ್ನು ಮತ್ತೊಮ್ಮೆ ಕೇಳುವಂತೆ ಮಾಡುತ್ತದೆ. ಅದೇ ವಿಷಯವನ್ನು ಇನ್ನೊಬ್ಬನು ನೀರಸ ಶೈಲಿಯಲ್ಲಿ ಆರಂಭಿಸಿದರೆ ಕೂಡಲೇ ತೆರಳೋಣ, ಜಾಗ ಖಾಲಿ ಮಾಡೋಣ ಎಂದೆನಿಸುತ್ತದೆ.

ಇದು ಪ್ರಕೃತಿಯ ನಿಯಮ. ಭಗವಂತ ಮಾಡಿದ ಸಂವಿಧಾನ. ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ, ಬದಲಾಯಿಸುವ ಮೂರ್ಖ ಪ್ರಯತ್ನ ಮಾಡಿದರೂ ವ್ಯರ್ಥವೇ ಸರಿ.

ಮೋದಿಯವರ ಇಟಲಿ ಭೇಟಿಯ ಮಹತ್ವ

▸ ಅರವಿಂದ ಶೆಣೈ

ಪ್ರಧಾನಿ ನರೇಂದ್ರ ಮೋದಿ ಇದೀಗ ಇಟಲಿ ಭೇಟಿಯಲ್ಲಿದ್ದಾರೆ. ಅವರ ಐದು ರಾಷ್ಟ್ರಗಳ ಯುರೋಪ್ ಪ್ರವಾಸದ ಕೊನೆಯ ಹಂತದಲ್ಲಿ ಅವರು ಇಟಲಿಗೆ ಕಾಲಿಟ್ಟಿದ್ದಾರೆ. ಇರಾನ್ ಸಂಘರ್ಷದ ಕಾರಣದಿಂದಾಗಿ ಫೆ. 28ರಿಂದ ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಮೋದಿಯವರ ಇಟಲಿ ಭೇಟಿಯು ಈ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಹಲವಾರು ರಾಷ್ಟ್ರಗಳು ಕೆಲವು ದಶಕಗಳಿಂದ ನಿರ್ಮಿಸಿದ್ದ ಸರಕು ಪೂರೈಕೆಯ ಜಾಲಗಳೆಲ್ಲವೂ ಅಸ್ತವ್ಯಸ್ತಗೊಂಡಿವೆ. ಜಗತ್ತು ಈಗ ಅವಶ್ಯ ವಸ್ತುಗಳ ಪೂರೈಕೆಗೆ ಕಷ್ಟಪಡುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತವು 2023ರಲ್ಲಿ ಪ್ರತಿಪಾದಿಸಿದ 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಎಕನಾಮಿಕ್ ಕಾರಿಡಾರ್' (ಐಎಂಇಇಸಿ) ಈಗ ಹೆಚ್ಚು ಪ್ರಸ್ತುತವಾಗುತ್ತಿದೆ. ಹೊಸದಿಲ್ಲಿಯಲ್ಲಿ ನಡೆದ ಜಿ-20 ಸಮ್ಮೇಳನದಲ್ಲಿ ಐಎಂಇಇಸಿ ಪ್ರಸ್ತಾವ ಇಡಲಾಗಿತ್ತು.

ಇದೀಗ ಈ ಕಾರಿಡಾರ್ ಯೋಜನೆಯು ಕೇವಲ ಹೆಸರಿನಲ್ಲಷ್ಟೇ ಇರುವುದೇ ಅಥವಾ ಅದನ್ನು ತುರ್ತಾಗಿ ಕಾರ್ಯರೂಪಕ್ಕೆ ಇಳಿಸಬೇಕೆ ಎಂಬ ಕುರಿತಂತೆ ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಿರ್ಧರಿಸಬೇಕಾಗಿದೆ. ಐಎಂಇಇಸಿ ಕಲ್ಪನೆಯು ಅತ್ಯಂತ ಮಹತ್ವಾಕಾಂಕ್ಷಿಯಾದುದು. ಇದು ವಿಸ್ತೃತ ರೈಲು ಮತ್ತು ಜಲಮಾರ್ಗಗಳ ಮೂಲಕ ಏಷ್ಯಾವನ್ನು ಗಲ್ಫ್ ರಾಷ್ಟ್ರಗಳ ಮುಖಾಂತರವಾಗಿ ಯುರೋಪ್‌ನೊಂದಿಗೆ ಸಂಪರ್ಕಿಸಲು ಬಯಸುತ್ತದೆ. ಪೂರ್ವ ಮತ್ತು ಪಶ್ಚಿಮದ ಎರಡು ಬೃಹತ್ ಆರ್ಥಿಕ ವಲಯಗಳನ್ನು ಹಲವಾರು ದಾರಿಗಳ ಮೂಲಕ ಪರಸ್ಪರ ಸಂಪರ್ಕಿಸುವುದು ಇದರ ಉದ್ದೇಶ. ಯಾವುದೇ ಒಂದು ದಾರಿಯು ನಿರ್ಬಂಧಿಸಲ್ಪಟ್ಟರೆ ಇನ್ನುಳಿದ ದಾರಿಗಳನ್ನು ತೆರೆಯುವ ಅವಕಾಶ ಇಲ್ಲಿದೆ.

ಭಾರತ, ಅಮೆರಿಕ, ಫ್ರಾನ್ಸ್, ಜರ್ಮನಿ, ಇಟಲಿ, ಸೌದಿ ಅರೇಬಿಯಾ, ಯುಎಇ ಮತ್ತು ಐರೋಪ್ಯ ಒಕ್ಕೂಟಗಳು 2023ರಲ್ಲಿ ಈ ಕುರಿತಾದ ಒಪ್ಪಂದಕ್ಕೆ ಸಹಿ ಹಾಕಿದ್ದವು. ಸಾಗಣೆಯ ಸಮಯವನ್ನು ಉಳಿಸುವುದು, ಸೂಯೆಜ್ ಕಾಲುವೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಪೂರೈಕೆ ಜಾಲವನ್ನು ವಿಸ್ತರಿಸುವುದು, ಯಾವುದೇ ಪ್ರಾದೇಶಿಕ ಸಂಘರ್ಷ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವುದು ಈ ಎಕನಾಮಿಕ್ ಕಾರಿಡಾರ್ ನಿರ್ಮಾಣದ ಮಹತ್ವದ ಗುರಿಯಾಗಿದೆ.

ಆದರೆ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಮೊದಲೇ ಅಡ್ಡಿಗಳು ಬಂದವು. ಹಮಾಸ್ ಇಸ್ರೇಲ್ ಮೇಲೆ ದಾಳಿ ಮಾಡಿತು. ಬಳಿಕ ನಡೆದ ಗಾಝಾ ಸಮರವು ಜಗತ್ತಿನ ರಾಜಕೀಯ ಗಮನವನ್ನು ಅತ್ತ ಸೆಳೆಯಿತು. ಹೌತಿಗಳು ಕೆಂಪು ಸಮುದ್ರ ಪ್ರದೇಶದಲ್ಲಿ ಹಡಗುಗಳ ಮೇಲೆ ದಾಳಿ ನಡೆಸಿದ್ದು ಐಎಂಇಇಸಿ ಜಲಮಾರ್ಗದ ಮೇಲೆ ಉಂಟಾಗುವ ಕಂಟಕವನ್ನು ತೋರ್ಪಡಿಸಿತು. ಹಾಗಾಗಿ ಈ ಕಾರಿಡಾರ್ ಯೋಜನೆ ಸ್ಥಗಿತಗೊಂಡಿತು.

ಆದರೂ 2025ರ ಮಧ್ಯಂತರ ವೇಳೆಗೆ ಪೂರ್ವಭಾಗದಲ್ಲಿ ಈ ಕಾರಿಡಾರಿನ ಚಟುವಟಿಕೆಗಳು ನಡೆದೇ ಇದ್ದವು. ಭಾರತ , ಯುಎಇ ಮತ್ತು ಸೌದಿಅರೇಬಿಯಾಗಳು ಭಾರತ ಮತ್ತು ಗಲ್ಫ್ ಪ್ರದೇಶದ ಕಾರ್ಯಗಳ ಅನುಷ್ಠಾನದಲ್ಲಿ ಸದ್ದಿಲ್ಲದೆ ತೊಡಗಿದ್ದವು. ಆದರೆ ಗಲ್ಫ್‌ನಿಂದ ಯುರೋಪಿಗೆ ಸಂಪರ್ಕಿಸುವ ಯೋಜನಾ ಜಾಲವು ಮುಂದುವರಿಯಲೇ ಇಲ್ಲ.

ಅಷ್ಟರಲ್ಲಿ ಫೆ. 28ರಂದು ಇರಾನ್ ಸಮರ ಪ್ರಾರಂಭಗೊಂಡಿತು. ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ತೈಲ ಮತ್ತು ಇನ್ನಿತರ ಕೆಲವು ವಸ್ತುಗಳ ಸಾಗಣೆಗೆ ಅಡ್ಡಿಯಾಯಿತು. ಎಲ್ಲಾ ದೇಶಗಳೂ ಅದರ ಪರಿಣಾಮ ಅನುಭವಿಸತೊಡಗಿದವು. ಒಮ್ಮೆಗೇ ಎಲ್ಲರೂ ಮತ್ತೆ ಐಎಂಇಇಸಿ ಕುರಿತಂತೆ ಮಾತನಾಡತೊಡಗಿದರು. ಇಂತಹ ಎಕನಾಮಿಕ್ ಕಾರಿಡಾರ್ ನಿಜಕ್ಕೂ ಅಗತ್ಯ ಎಂಬುದು ಈಗ ಎಲ್ಲರಿಗೂ ಮನವರಿಕೆಯಾಗತೊಡಗಿದೆ. ತಮ್ಮ ಉಳಿವಿಗೆ ಇಂತಹ ಸಂಪರ್ಕ ಜಾಲ ಅಗತ್ಯವಾಗಿದೆ ಎಂದು ವಿವಿಧ ದೇಶಗಳು ಭಾವಿಸತೊಡಗಿವೆ.ಈ ಎಕನಾಮಿಕ್ ಕಾರಿಡಾರ್ ಕೇವಲ ಕಲ್ಪನೆಯಲ್ಲ, ಬದಲಾಗಿ ಇದೊಂದು ಕಾರ್ಯಸಾಧು ಯೋಜನೆ ಎಂಬುದಾಗಿ "ಫಾರ್ಚೂನ್" ನಿಯತಕಾಲಿಕ ಇತ್ತೀಚೆಗೆ ಬಣ್ಣಿಸಿದೆ. ಜಗತ್ತು ತಮ್ಮ ಸರಕು ಸಾಗಣೆಗೆ ಕೇವಲ ಒಂದೇ ಮಾರ್ಗದ ಮೇಲೆ ಅವಲಂಬಿತವಾಗಿದ್ದರೆ ಸಣ್ಣದೊಂದು ಸಂಘರ್ಷ ಕೂಡಾ ಅದೆಷ್ಟು ದೊಡ್ಡ ಪರಿಣಾಮ ಬೀರಬಲ್ಲುದು ಎಂಬುದನ್ನು ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟು ತೋರಿಸಿಕೊಟ್ಟಿದೆ. ಐಎಂಇಇಸಿಯ ಪ್ರಮುಖ ತರ್ಕವೇ 'ಭವಿಷ್ಯದಲ್ಲಿ ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ವಹಿವಾಟು ಯಾವುದೋ ಒಂದು ಜಲಮಾರ್ಗದ ಮೇಲೆ, ಯಾರೋ ಒಬ್ಬರು ಯಾವುದೋ ಒಂದು ದಿನ ನಿಯಂತ್ರಣ ಹೊಂದಿರುತ್ತಾರೆ ಎಂಬುದರ ಮೇಲೆ ಅವಲಂಬಿಸಬಾರದು' ಎನ್ನುವುದೇ ಆಗಿದೆ. ಇರಾನ್ ಬಿಕ್ಕಟ್ಟು ಈ ವಾದವನ್ನು ಇನ್ನಷ್ಟು ಬಲಗೊಳಿಸಿದೆ.

ಈ ಎಕನಾಮಿಕ್ ಕಾರಿಡಾರ್ ಯೋಜನೆಯಲ್ಲಿ ಇಟಲಿಯ ಪಾತ್ರ ಮಹತ್ವದ್ದಾಗಿದೆ. ಇಡೀ ಯೋಜನೆಯ ಪಾಶ್ಚಿಮಾತ್ಯ 'ಲಂಗರು ತಾಣ'ವಾಗಿ ಇಟಲಿ ಪಾತ್ರ ವಹಿಸಲಿದೆ. ಈ ಎಕನಾಮಿಕ್ ಕಾರಿಡಾರ್ ಅನುಷ್ಠಾನಿಸಲ್ಪಟ್ಟರೆ ಮುಂಬೈನಿಂದ ಗಲ್ಫ್ ರಾಷ್ಟ್ರವಾಗಿ ಸಾಗುವ ದಾರಿಯು ಯುರೋಪಿನಲ್ಲಿ ಇಟಲಿಯನ್ನು ಪ್ರಮುಖ ಕೇಂದ್ರವಾಗಿ ಪರಿಗಣಿಸಲಿದೆ. ಅಲ್ಲಿಂದ ಬಳಿಕ ಯುರೋಪ್‌ಗೆ ವಿಸ್ತರಿಸಲ್ಪಡಲಿದೆ. ಇಟಲಿ ಈ ಯೋಜನೆಯಲ್ಲಿ ಪಾಲ್ಗೊಳ್ಳದಿದ್ದರೆ ಯೋಜನೆಯು ಅಪೂರ್ಣಗೊಳ್ಳಬಹುದು.

ಅದೃಷ್ಟವಶಾತ್ ಈ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಇಟಲಿ ಪ್ರಧಾನಿ ಮೆಲೋನಿ ಸಕ್ರಿಯ ಆಸಕ್ತಿ ವಹಿಸಿದ್ದಾರೆ. ಐಎಂಇಇಸಿ ಕಾರ್ಯಗತಗೊಳ್ಳಲು ಅವರೂ ಶ್ರಮಿಸುತ್ತಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಯುಎಇಗೆ ಹಠಾತ್ ಭೇಟಿ ನೀಡಿ ಈ ವಿಷಯದ ಕುರಿತಂತೆ ಚರ್ಚಿಸಿದ್ದರು.ಕೊಲ್ಲಿ ಸಮರ ಆರಂಭವಾದ ಬಳಿಕ ಬೇರೆ ಯಾವ ಯುರೋಪಿಯನ್ ಅಥವಾ ನ್ಯಾಟೋ ಮುಖಂಡರೂ ಕೊಲ್ಲಿ ರಾಷ್ಟ್ರಗಳಿಗೆ ಭೇಟಿ ನೀಡಿದ್ದಿಲ್ಲ, ಆದರೆ ಮೆಲೋನಿ ಮೂರು ಅರಬ್ ದೇಶಗಳ ಮುಖಂಡರನ್ನು ಭೇಟಿಯಾಗಿ ವಿಸ್ತೃತ ಚರ್ಚೆ ನಡೆಸಿದರು. ಇಂಧನ ಬಿಕ್ಕಟ್ಟನ್ನು ಪರಿಹರಿಸುವುದು ಆಕೆಯ ಪ್ರಮುಖ ಆದ್ಯತೆಯಾಗಿತ್ತು. ಏಕೆಂದರೆ ಇಟಲಿಗೆ ಕೊಲ್ಲಿಯಿಂದ ಎಲ್‌ಎನ್‌ಜಿ ಪೂರೈಕೆ ಅಸ್ತವ್ಯಸ್ತಗೊಂಡು ಇಟಲಿಯ ಇಂಧನ ಪರಿಸ್ಥಿತಿ ಬಿಕ್ಕಟ್ಟಿಗೆ ಸಿಲುಕಿತ್ತು. ಅದರ ಜತೆಗೇ ಐಎಂಇಇಸಿ ಯೋಜನೆಯ ಬಗೆಗೂ ಚರ್ಚಿಸಿದರು.

ಆದರೆ ಇತ್ತೀಚಿನ ದಿನಗಳಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಮಧ್ಯೆ ಉಂಟಾಗಿರುವ ಸಂಘರ್ಷವು ಐಎಂಇಇಸಿ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇಲ್ಲದಿಲ್ಲ, ಸೌದಿ ಅರೇಬಿಯಾ ಭಾರತದ ಪ್ರಗತಿಯನ್ನು ಸಹಿಸದ ಪಾಕಿಸ್ತಾನದೊಂದಿಗೂ ರಕ್ಷಣಾ ಒಪ್ಪಂದ ಮಾಡಿಕೊಂಡಿರುವುದು ಕೂಡಾ ತೊಡಕಾಗಿ ಪರಿಣಮಿಸಬಹುದು. ಪಾಕಿಸ್ತಾನವು ಸೌದಿ ಮೇಲೆ ಪ್ರಭಾವ ಬೀರಿ ಐಎಂಇಇಸಿ ಯೋಜನೆಗೆ ತೊಡರುಗಾಲು ಒಡ್ಡಲು ಯತ್ನಿಸಬಹುದು.

ಐಎಂಇಇಸಿ ಯೋಜನೆಗೆ ಸೌದಿ ಅರೇಬಿಯಾದ ಬಂದರುಗಳು ಯುಎಇ ಬಂದರುಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವುದು ಅಗತ್ಯವಾಗಿದೆ. ಹಾಗಾಗಿ ಮೇಲಿನ ಮಟ್ಟದಿಂದ ಹೇರಬಹುದಾದ ಒತ್ತಡವು ಸೌದಿಯು ಈ ಯೋಜನೆಯೊಂದಿಗೆ ಮುಂದುವರಿಯುವಂತೆ ಮಾಡಬಲ್ಲುದು. ಈ ನಿಟ್ಟಿನಲ್ಲಿ ಇಟಲಿ ಪ್ರಧಾನಿ ಮೆಲೋನಿ ಪ್ರಮುಖ ಪಾತ್ರ ವಹಿಸಬಲ್ಲರು. ಭಾರತ, ಯುಎಇ ಮತ್ತು ಸೌದಿ ಅರೇಬಿಯಾಗಳು ಯೋಜನೆಯಲ್ಲಿ ತಮ್ಮ ತಮ್ಮ ಪಾತ್ರವನ್ನು ನೆರವೇರಿಸುತ್ತಿರುವುದಾಗಿ ಕೆಲ ಸಮಯದ ಹಿಂದೆ ವಿದೇಶಾಂಗ ಸಚಿವ ಜೈಶಂಕರ್ ಕೂಡಾ ಹೇಳಿದ್ದರು.

ಈ ಕಾರ್ಯಾನುಷ್ಠಾನ ಅನುಕೂಲವಾಗಿ ಮುಂದುವರಿಯುವಂತೆ ಮಾಡುವ ಒತ್ತಡವನ್ನು ಇಟಲಿ ಸೌದಿಯ ಮೇಲೆ ಹೇರಬಲ್ಲುದು. ಬೇರೆಲ್ಲಾ ಐರೋಪ್ಯ ಮುಖಂಡರಿಗಿಂತ ಇಟಲಿ ಪ್ರಧಾನಿಯೇ ಈ ವಿಷಯದಲ್ಲಿ ಹೆಚ್ಚು ಸಂವಹನ ಸಾಮರ್ಥ್ಯ ಹೊಂದಿದ್ದಾರೆ. ಅವರ ರಾಜಕೀಯವು ಆರ್ಥಿಕ ಸಾರ್ವಭೌಮತ್ವ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ಆಧಾರದಲ್ಲಿ ನಿಂತಿದೆ. ಅಗತ್ಯ ಬಿದ್ದರೆ ತಾನು ದಿಟ್ಟ ಹೆಜ್ಜೆ ತೆಗೆದುಕೊಳ್ಳಲು ಸಿದ್ಧ ಎಂಬುದನ್ನು ಮೆಲೋನಿಯವರು ಸಮರ ಕಾಲದಲ್ಲೂ, ಗಲ್ಫ್ ರಾಷ್ಟ್ರಗಳಿಗೆ ಭೇಟಿ ನೀಡುವ ಮೂಲಕ ತೋರ್ಪಡಿಸಿದ್ದಾರೆ. ಇರಾನ್ ಸಮರವು ಇಟಲಿಯ ಇಂಧನ ಶಕ್ತಿಯ ಮೇಲೂ ಪ್ರತಿಕೂಲ ಪರಿಣಾಮ ಬೀರಿರುವುದರಿಂದ ಇಟಲಿ ಕೂಡಾ ದೀರ್ಘಾವಧಿಯಲ್ಲಿ ಇಂತಹ ಸಮಸ್ಯೆ ಉದ್ಭವಿಸದಂತೆ ಮಾಡಲು ಉಪಕ್ರಮಿಸುವುದು ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ಐಎಂಇಇಸಿ ಯೋಜನೆ ಮಹತ್ವದ್ದಾಗಿದೆ. ಹಾಗಾಗಿ ಇಟಲಿಯು ಈ ವಿಷಯದಲ್ಲಿ ಹೆಚ್ಚು ಗಂಭೀರ ಹೆಜ್ಜೆಯಿಡುವುದೆಂದು ಆಶಿಸಲಾಗಿದೆ. ಹೊರ್ಮುಜ್ ಜಲಸಂಧಿ ಮುಚ್ಚಿರುವುದು, ಕೆಂಪು ಸಮುದ್ರ ಪ್ರದೇಶ ಕೂಡಾ ಸಮರಪೀಡಿತವಾಗಿರುವುದು ವಿಶ್ವದ ಎರಡು ಪ್ರಮುಖ ವಹಿವಾಟು ಕೇಂದ್ರಗಳನ್ನು (ಏಷ್ಯಾ- ಗಲ್ಫ್ ಮತ್ತು ಯುರೋಪ್) ಅತಂತ್ರಗೊಳಿಸಿರುವುದು ಐಎಂಇಇಸಿ ಯೋಜನೆಯು ಕಾರ್ಯಗತಗೊಳ್ಳಬೇಕಾದ ಅನಿವಾರ್ಯವನ್ನು ಎತ್ತಿ ತೋರಿದೆ.

ಕೇರಳದ ಸೆಕ್ಯುಲರ್ ಹಿಪಾಕ್ರಸಿ

▸ ಮಜುಂದಾರ್

ಕೇರಳದ ರಾಜಕೀಯದಲ್ಲಿ 'ಜಾತ್ಯತೀತತೆ' ಎಂಬ ಪದಕ್ಕೆ ಹಲವಾರು ಪಿತರಿದ್ದಾರೆ. ಆದರೆ ನೈಜ ಅರ್ಥದಲ್ಲಿ 'ಜಾತ್ಯತೀತತೆ'ಯ ಅನುಷ್ಠಾನದ ವಿಷಯ ಬಂದಾಗ ಅದು ಅನಾಥವಾಗಿದೆ.

ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳು ಬಿಜೆಪಿಯನ್ನು ಕೋಮುವಾದಿ ಪಕ್ಷ ಹಾಗೂ ಅಲ್ಪಸಂಖ್ಯಾತ ವಿರೋಧಿ ಪಕ್ಷ ಎಂದು ನಿರಂತರವಾಗಿ ಟೀಕಿಸುತ್ತಿರುತ್ತವೆ. ಆದರೆ ವಾಸ್ತವಾಂಶವು ಬೇರೆಯೇ ಕಥೆ ಹೇಳುತ್ತದೆ.

ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಅಲ್ಪಸಂಖ್ಯಾತ ಒಲೈಕೆಯ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಆಶ್ಚರ್ಯಕರವಾಗಿ ಇತರ ಸಮುದಾಯದವರನ್ನು ಕೂಡಾ ತಲುಪುವ ಕಾರ್ಯ ಮಾಡಿದೆ. ಇತ್ತೀಚಿನ ಕೇರಳ ವಿಧಾನಸಭಾ ಚುನಾವಣೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ಬಿಜೆಪಿ 7 ಮಂದಿ ಕ್ರೈಸ್ತರನ್ನು ಚುನಾವಣೆಗೆ ನಿಲ್ಲಿಸಿತ್ತು. ಕ್ರೈಸ್ತ ಪ್ರಾಬಲ್ಯದ ಕೊಟ್ಟಾಯಂ, ಪಾಲ, ತಿರುವಳ್ಳ, ಪೂಂಜಾರ್ ಮುಂತಾದ ಕಡೆಗಳಲ್ಲಿ ಬಿಜೆಪಿ ಪರವಾಗಿ ಕ್ರೈಸ್ತ ಮುಖಂಡರು ಸಾಕಷ್ಟು ಪ್ರಚಾರ ನಡೆಸಿದ್ದಾರೆ. ಬಿಜೆಪಿ ಪರವಾಗಿ ಪ್ರಚಾರ ನಡೆಸಿದ ಕ್ರೈಸ್ತ ಮುಖಂಡರಲ್ಲಿ ಕೇಂದ್ರ ಸಚಿವ ಜಾರ್ಜ್ ಕುರಿಯನ್, ಪಿ.ಸಿ.ಜಾರ್ಜ್, ಅನೂಪ್ ಆ್ಯಂಟನಿ ಜೋಸೆಫ್ ಮುಂತಾದವರು ಸೇರಿದ್ದಾರೆ.

ಕ್ರೈಸ್ತ ಸಮುದಾಯದ ಮೇಲೆ ಯುಡಿಎಫ್ ಹೊಂದಿರುವ ಹಿಡಿತವನ್ನು ಸಡಿಲಿಸಲು ಬಿಜೆಪಿ ಇಂತಹ ದಿಟ್ಟ ಕ್ರಮ ತೆಗೆದುಕೊಂಡಿದೆ. ಬಿಜೆಪಿ ಇದರಲ್ಲಿ ಗೆದ್ದಿತೋ ಸೋತಿತೋ ಎಂಬುದು ಬೇರೆ ವಿಷಯ. ಆದರೆ ಅವರೆಡೆಗೆ ಸ್ನೇಹಹಸ್ತ ಚಾಚುವ ತನ್ನ ಇಂಗಿತವನ್ನಂತೂ ಸ್ಪಷ್ಟಪಡಿಸಿದೆ. ತನ್ನ ಪಕ್ಷದಲ್ಲಿ ಅಲ್ಪಸಂಖ್ಯಾತರಿಗೆ ಸ್ಪರ್ಧಿಸಲು ಅವಕಾಶ ನೀಡಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದೆ.

ಈಗ ಇದನ್ನು ಮುಸ್ಲಿಂಲೀಗ್(ಐಯುಎಂಎಲ್)ನೊಂದಿಗೆ ಹೋಲಿಸಿ ನೋಡಿ. ಮೊಹಮ್ಮದ್ ಆಲಿ ಜಿನ್ನಾನಿಂದ ಸ್ಥಾಪಿತವಾದ ಮುಸ್ಲಿಂಲೀಗನ್ನೇ ಸಮೀಕರಿಸುವ ಐಯುಎಂಎಲ್ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಅಂಗಪಕ್ಷವಾಗಿದೆ. ಕಾಂಗ್ರೆಸ್ ಪಕ್ಷವು ಮುಸ್ಲಿಂಲೀಗನ್ನು ಸದಾ ಜಾತ್ಯತೀತ ಪಕ್ಷವೆಂದೇ ಬಣ್ಣಿಸುತ್ತಿರುತ್ತದೆ.

ಮುಸ್ಲಿಂಲೀಗ್ ಕೂಡಾ ಇತರ ಪಕ್ಷಗಳಿಗೆ ಜಾತ್ಯತೀತತೆ ಕುರಿತಂತೆ ಬೋಧಿಸಲು ಹಿಂದೆ ಬೀಳುವುದಿಲ್ಲ, ಆದರೆ ತಾನು ಮಾತ್ರ ಆಚರಣೆಯಲ್ಲಿ ಜಾತ್ಯತೀತತೆಯನ್ನು ಪಾಲಿಸುವುದಿಲ್ಲ, ಕೇರಳ ಸರಕಾರದಲ್ಲಿ ಬಹಳಷ್ಟು ಬಾರಿ ಪಾಲು ಪಡೆದ ಮುಸ್ಲಿಂಲೀಗ್ ಒಂದೇ ಒಂದು ಬಾರಿಯೂ ಮುಸ್ಲಿಮೇತರರಿಗೆ ಸಚಿವ ಸ್ಥಾನ ನೀಡಿದ್ದಿಲ್ಲ, ಮೊನ್ನೆಯ ಚುನಾವಣೆಯ ಬಳಿಕ ರಚಿಸಲಾದ ಯುಡಿಎಫ್ ಸರಕಾರದಲ್ಲಿ



ಮುಸ್ಲಿಂಲೀಗ್ 5 ಸಚಿವ ಸ್ಥಾನ ಪಡೆದಿದೆ. ಅವೆಲ್ಲವನ್ನೂ ಮುಸ್ಲಿಮರಿಗೇ ನೀಡಲಾಗಿದೆ. ಒಬ್ಬನೇ ಒಬ್ಬ ಕ್ರೈಸ್ತ ಅಥವಾ ಹಿಂದುವಿಗೆ ನೀಡಲಾಗಿಲ್ಲ, ಹಿಂದುಗಳಲ್ಲಿ ಈಳವ ಅಥವಾ ನಾಯರ್ ಸಮುದಾಯದವರಿಗೆ ಸಚಿವ ಸ್ಥಾನ ಕೊಡಮಾಡಿಲ್ಲ, ಹಾಗಿದ್ದೂ ಮುಸ್ಲಿಂಲೀಗನ್ನು ಜಾತ್ಯತೀತ ಎಂದು ಕಾಂಗ್ರೆಸ್ ಹೇಳುತ್ತದೆ.

ಕಾಂಗ್ರೆಸ್ ಕೂಡಾ ಕೇರಳದಲ್ಲಿ ಜಾತ್ಯತೀತತೆಯನ್ನು ಪಾಲಿಸುವುದು ಅಷ್ಟರಲ್ಲೇ ಇದೆ. ಸತೀಶನ್ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಕೂಡಾ ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿಲ್ಲ, ಮುಸ್ಲಿಂ ಮತಗಳಿಗಾಗಿ ಅದು ಮುಸ್ಲಿಂಲೀಗನ್ನು ಬಹಳವಾಗಿ ಅವಲಂಬಿಸಿದ್ದರೂ ಹಾಗೂ ಕ್ರೈಸ್ತರ ಬೆಂಬಲಕ್ಕಾಗಿ ಕೇರಳ ಕಾಂಗ್ರೆಸ್ ಪಕ್ಷವನ್ನು ಅವಲಂಬಿಸಿದ್ದರೂ ಸಚಿವ ಸಂಪುಟದಲ್ಲಿ ಮಾತ್ರ ಅವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಗೋಜಿಗೆ ಹೋಗಿಲ್ಲ, ಮುಸ್ಲಿಂ ಅಥವಾ ಕ್ರೈಸ್ತ ಸಮುದಾಯದ ಪ್ರಮುಖ ವ್ಯಕ್ತಿಗಳಿಗೆ ಕೂಡಾ ಸಚಿವ ಸ್ಥಾನ ನಿರಾಕರಿಸಲಾಗಿದೆ.

> ಜಾತ್ಯತೀತ ಪಕ್ಷಗಳು ನಿರ್ಲಜ್ಜವಾಗಿ ಓಟ್ ಬ್ಯಾಂಕ್ ರಾಜಕಾರಣ ನಡೆಸುತ್ತಿದ್ದರೆ, ಬಿಜೆಪಿಯು ಇತರ ಸಮುದಾಯದವರನ್ನು ತಲುಪುವ ಕಾರ್ಯ ಮಾಡಿದೆ.

ಸರಿಯಾಗಿ ವಿಶ್ಲೇಷಿಸಿದರೆ ಕೋಮುವಾದಿಯೆಂದು ಕರೆಯಲ್ಪಡುವ ಬಿಜೆಪಿಯೇ ಹೆಚ್ಚು ಜಾತ್ಯತೀತವಾಗಿ ಕಂಡುಬರುತ್ತದೆ. ಬಿಜೆಪಿಯು ಆರಿಫ್ ಮೊಹಮ್ಮದ್‌ಖಾನ್‌ರನ್ನು 2019ರಿಂದ 2025ರ ವರೆಗೆ ಕೇರಳದ ರಾಜ್ಯಪಾಲರನ್ನಾಗಿ ನೇಮಿಸಿತ್ತು. ಬಿಜೆಪಿ ಕೆಲವಾರು ರಾಜ್ಯಗಳಲ್ಲಿ ಕ್ರೈಸ್ತರಿಗೆ ಮತ್ತು ಪಾಸ್ಮಾಂಡ ಮುಸ್ಲಿಮರಿಗೆ ಸಂಪುಟದಲ್ಲಿ ಸ್ಥಾನಮಾನ ನೀಡಿದೆ. ಉತ್ತರಪ್ರದೇಶ, ಬಿಹಾರ, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿ ಅವರಿಗೆ ಸಚಿವ ಸ್ಥಾನ ದೊರಕಿದೆ. ಪಶ್ಚಿಮ ಬಂಗಾಳದಲ್ಲೂ ಆದಿವಾಸಿಗಳು, ಪರಿಶಿಷ್ಟ ಪಂಗಡದವರಿಗೆ ಕೂಡಾ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ.

ಕೇರಳದ ರಾಜಕೀಯ ನೋಡುವಾಗ ತಥಾಕಥಿತ ಜಾತ್ಯತೀತ ಪಕ್ಷಗಳು ಅದು ಹೇಗೆ ಅಲ್ಪಸಂಖ್ಯಾತರನ್ನು ತಮ್ಮ ವೋಟ್ ಬ್ಯಾಂಕನ್ನಾಗಿ ಉಳಿಸಿಕೊಳ್ಳಲು ಪ್ರಯತ್ನ ನಡೆಸುತ್ತವೆ, ಅವರು ತಮ್ಮ ಹಿಡಿತದಿಂದ ಜಾರಿಹೋಗದಿರಲು ಏನೆಲ್ಲಾ ತಂತ್ರ ಹೂಡುತ್ತವೆ, ಅವರ ಮನದಲ್ಲಿ ಬಹುಸಂಖ್ಯಾತರ ಬಗ್ಗೆ ಹೇಗೆ ಭೀತಿ ಸೃಷ್ಟಿಸಿ ಅವರು ತಮ್ಮದೇ ನೆರಳಲ್ಲಿ ಇರುವಂತೆ ನೋಡಿಕೊಳ್ಳುತ್ತವೆ ಎಂಬುದು ಸುಸ್ಪಷ್ಟವಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಬಿಜೆಪಿಯು ಹಿಂದುತ್ವಕ್ಕೆ ಬದ್ಧವಾಗಿದ್ದರೂ, ಇತರ ಸಮುದಾಯಗಳವರಿಗೂ ಟಿಕೆಟ್ ನೀಡುವಲ್ಲಿ ಅವರಿಗೆ ಸೂಕ್ತ ವೇದಿಕೆ ಒದಗಿಸುವಲ್ಲಿ ಹಿಂದೆ ಬಿದ್ದಿಲ್ಲ, ಬಿಜೆಪಿಯಲ್ಲಿ ಅಲ್ಪಸಂಖ್ಯಾತರು ಉನ್ನತ ಸ್ಥಾನಗಳನ್ನು ಪಡೆಯಲೂ ಸಫಲರಾಗಿದ್ದಾರೆ. ಕೇರಳದಲ್ಲಿ ಬಿಜೆಪಿ ಕ್ರೈಸ್ತರನ್ನು ಚುನಾವಣಾ ಅಭ್ಯರ್ಥಿಗಳನ್ನಾಗಿಸಿದೆ, ಮುಸ್ಲಿಮ್ ರಾಜ್ಯಪಾಲರನ್ನು ನೇಮಿಸಿದೆ, ರಾಷ್ಟ್ರೀಯವಾದಿ ಮುಸ್ಲಿಮರತ್ತಲೂ ಹಸ್ತ ಚಾಚಿದೆ.

ಈ ಎಲ್ಲ ಬೆಳವಣಿಗೆಗಳನ್ನು ಕೇರಳವು ವೀಕ್ಷಿಸುತ್ತಿದೆ. ಬಿಜೆಪಿ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲದಿರಬಹುದು, ಆದರೆ ಹಿಂದಿಗಿಂತ ಅದರ ಸೀಟು ಸಂಖ್ಯೆ ಹೆಚ್ಚಿದೆ. ಅದರ ಮತ ಪ್ರಮಾಣ ಹೆಚ್ಚಿದೆ. ಮೂರು ಸ್ಥಾನಗಳನ್ನು ಗೆದ್ದಿರುವ ಬಿಜೆಪಿಯ ಮತ ಪ್ರಮಾಣವು ಶೇ. 11.42ಕ್ಕೇರಿದೆ.

ಕೇರಳದ ತಥಾಕಥಿತ ಜಾತ್ಯತೀತ ಪಕ್ಷಗಳ 'ಸೆಕ್ಯುಲರ್ ಹಿಪಾಕ್ರಸಿ' ಬಹುಕಾಲ ಬಿಜೆಪಿಯ ಬೆಳವಣಿಗೆಯನ್ನು ತಡೆದಿಡಲು ಸಫಲವಾಗದು.

ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

• ಬೆಂಗಳೂರು: ಇ-ಫಾರ್ಮಸಿ ಹಾಗೂ ಅತಿಯಾದ ರಿಯಾಯಿತಿ ದರದಲ್ಲಿ ಔಷಧ ಮಾರಾಟ ವಿರೋಧಿಸಿ ಬುಧವಾರ ಔಷಧ ವ್ಯಾಪಾರಿಗಳು ಮತ್ತು ಔಷಧಗಳ ವಿತರಕರು ಕರೆ ನೀಡಿದ್ದ ರಾಜ್ಯಾದ್ಯಂತ ಔಷಧಿ ಮಳಿಗೆ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅದರಲ್ಲೂ ಬೆಂಗಳೂರಿನಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಶೇ.90ರಷ್ಟು ಔಷಧಿ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿತ್ತು, ಬಹುತೇಕ ವರ್ತಕರು ಕಪ್ಪು ಪಟ್ಟಿ ಧರಿಸಿ ಮಳಿಗೆ ತೆರೆದು ವ್ಯಾಪಾರ ಮಾಡಿದರು.



ಸರ್ಕಾರಿ ಆಸ್ಪತ್ರೆಗಳಲ್ಲಿನ ಔಷಧ ಮಳಿಗೆಗಳು, ಜನೌಷಧಿ ಕೇಂದ್ರ, ಆನ್‌ಲೈನ್ ಔಷಧ ಮಾರಾಟ ವ್ಯವಸ್ಥೆಗಳನ್ನು ಹೊಂದಿರುವ ಕಾರ್ಪೋರೇಟ್ ಹಾಗೂ ಫಾರ್ಮಾ ಕಂಪನಿಗಳು ಹಾಗೂ ಹಲವು ಖಾಸಗಿ ಔಷಧ ಮಳಿಗೆಗಳು ತೆರೆದಿದ್ದವು. ಹೀಗಾಗಿ ನಗರದಲ್ಲಿ ಅಂತಹ ಸಮಸ್ಯೆ ಕಂಡುಬಂದಿಲ್ಲ. ಜತೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಬಂದ್ ಆಗಲಿದ್ದ ಕುರಿತು ಮಳಿಗೆಗಳ ಮಾಲೀಕರು ಗ್ರಾಹಕರಿಗೆ ತಿಳಿಸಿದ್ದರಿಂದ ಹಲವರು ಮುಂಜಾಗ್ರತೆಯಿಂದ ಔಷಧ ಖರೀದಿ ಮಾಡಿದ್ದರು. ಇದರಿಂದಾಗಿ ತೊಂದರೆ ತಪ್ಪಿದೆ ಎಂದು ಔಷಧ ವ್ಯಾಪಾರಗಳ ಸಂಘ ತಿಳಿಸಿದೆ.

ಕರ್ನಾಟಕ ಫಾರ್ಮಾ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಅಧ್ಯಕ್ಷ ಸಿ.ಜಯರಾಮ್ ಮಾತನಾಡಿ, ರಾಜ್ಯದಲ್ಲಿ ಶೇ. 99ರಷ್ಟು ಮಳಿಗೆಗಳು ತೆರೆದಿದ್ದವು. ರಾಜಧಾನಿ ಬೆಂಗಳೂರಿನಲ್ಲೂ ಮಳಿಗೆಗಳು ಬಂದ್ ಮಾಡಿರಲಿಲ್ಲ, ಮಳಿಗೆಗಳನ್ನು ಬಂದ್ ಮಾಡಿದರೆ ಆನ್‌ಲೈನ್ ವ್ಯಾಪಾರ ಹೆಚ್ಚಾಗುವ ಅಪಾಯವೇ ಹೆಚ್ಚು, ಹೀಗಾಗಿ ನಾವು ಇ ಫಾರ್ಮಸಿ ವಿರುದ್ಧ ಭಿನ್ನ ಹೋರಾಟ ನಡೆಸಲಿದ್ದೇವೆ ಎಂದು ತಿಳಿಸಿದರು.

ರಾಮ ಬಾಣ



ಪ್ರತ್ಯೇಕ ಪಾಲಿಕೆ ಅನುಮೋದನೆಗೆ ರಾಜ್ಯಪಾಲರಿಗೆ ಲಾಡ್ ಮನವಿ



• ಬೆಂಗಳೂರು: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ಅನುಮೋದನೆ ನೀಡಬೇಕು ಎಂದು ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಧಾರವಾಡ ಶಾಸಕರ ನಿಯೋಗವು ರಾಜ್ಯಪಾಲರನ್ನು ಭೇಟಿ ಮಾಡಿ ಸಚಿವರು ಮನವಿ ಸಲ್ಲಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಲಾಡ್ ಅವರು, ಪ್ರತ್ಯೇಕ ಧಾರವಾಡ ಪಾಲಿಕೆ ಆಗಬೇಕು ಎಂದು ಹಲವು ವರ್ಷಗಳ ಬೇಡಿಕೆ ಇತ್ತು. ಹೋರಾಟವೂ ನಡೆದಿತ್ತು. ನಮ್ಮ ಸರ್ಕಾರ ಬಂದ ನಂತರ ಪ್ರತ್ಯೇಕ ಪಾಲಿಕೆ ಬೇಡಿಕೆಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂಗೀಕರಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳಿಸಲಾಗಿತ್ತು. ಒಂದು ವರ್ಷದಿಂದ ರಾಜ್ಯಪಾಲರಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿರಲಿಲ್ಲ, ಇದೀಗ ಪ್ರತ್ಯೇಕ ಪಾಲಿಕೆ ಹೋರಾಟ ಸಮಿತಿಯವರು ಒತ್ತಡ ಹಾಕಲು ಆರಂಭಿಸಿದರು. ಸರ್ಕಾರದ ಪ್ರಸ್ತಾವನೆಯನ್ನು ಅಂಗೀಕರಿಸಬೇಕು ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ ಎಂದರು. ಈ ವೇಳೆ ಶಾಸಕರಾದ ಪ್ರಸಾದ್ ಅಬ್ಬಯ್ಯ, ಎನ್.ಎಚ್ ಕೋನರಡ್ಡಿ, ಹೋರಾಟ ಸಮಿತಿ ಮುಖಂಡರಾದ ಬಿ.ಡಿ. ಹಿರೇಮಠ, ಹುಡಾ ಮಾಜಿ ಅಧ್ಯಕ್ಷ ದಾನಪ್ಪ ಕಬ್ಬೇರ, ಪಾಲಿಕೆಯ ಮಾಜಿ ಸದಸ್ಯ ನಾಗರಾಜ್ ಗೌರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪುಷ್ಯ

ದಿನದ ಮಾತು

ವಿವೇಕಿಗಳು ಕೆಲಸವನ್ನು ಯಾವಾಗ ಮಾಡಬೇಕಾಗಿದೆಯೋ ಆಗಲೇ ಮಾಡುತ್ತಾರೆ.

▲ ನೀತಿಮಂಜರಿ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಜಗತ್ತಿಗೇ ಜೀವನ ಪಾಠವನ್ನು ಹೇಳಿರುವ ಹಿಂದೂ ಧರ್ಮವನ್ನು ವಿಶ್ವವೇ ಒಪ್ಪಿಕೊಂಡಿದೆ. ಇಂತಹ ಧರ್ಮದಲ್ಲಿ ಹುಟ್ಟಿದ್ದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕು – ಕನ್ಯಾಡಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ

- ವಿಶ್ವವೇ ಒಪ್ಪಿದರೂ ಜಾತ್ಯತೀತರು, ಬುದ್ಧಿಜೀವಿಗಳು, ಪ್ರಗತಿಪರರು ಒಪ್ಪುವ ವಿಶ್ವಾಸವಿಲ್ಲ, ಒಪ್ಪಿಕೊಂಡರೆ ಅವರಿಗೆ ಬದುಕಲು ಉದ್ಯೋಗವಿಲ್ಲ ಅಂತ ಆದೀತು!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಸವಾಲಿನ ದಿನ. ಹೆಚ್ಚು ಹೊಣೆ. ಆತ್ಮೀಯ ಸಂಬಂಧಕ್ಕೆ ಧಕ್ಕೆ. ಆಪ್ತ ಜತೆ ಮನಸ್ತಾಪ. ಧನವ್ಯಯ.

ವೃಷಭ ಈಡೇರಿಸಲು ಕಷ್ಟವಾದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ಟೀಕೆಗೆ ಎಡೆಯಾಗದಂತೆ ವರ್ತಿಸಿ. ಬಂಧುಗಳ ಜತೆ ಸಂಯಮವಿರಲಿ.

ಮಿಥುನ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ ಹೊಸತನಕ್ಕೆ ಯತ್ನಿಸುವಿರಿ. ಬೇಸರ ಕಳೆಯಲು ಅದು ಒಳಿತು. ಮನಸ್ಸು ಉಲ್ಲಸಿತಗೊಳಿಸುವ ಪ್ರಸಂಗ. ಪ್ರೀತಿಸಾಫಲ್ಯ.

ಸಿಂಹ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಕನ್ಯಾ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವೂ ಸಂಬಂಧ ಕೆಡಿಸದಿರಲಿ.

ತುಲಾ ನಿಮ್ಮ ಕಠಿಣ ದುಡಿಮೆಗೆ ಉತ್ತಮ ಪ್ರತಿಫಲ. ಆದರೆ ಬೇಸರ ತರುವ ಕೆಲವು ಪ್ರಸಂಗ ಉಂಟಾದೀತು. ಸಂಬಂಧ ಹಳಸಬಹುದು.

ವೃಶ್ಚಿಕ ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಆದರೆ ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯವೂ ಮನಸ್ಸು ಕೆಡಿಸಬಹುದು.

ಧನು ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ವಿವೇಕದಿಂದ ಚಿಂತಿಸಿ. ಹಿರಿಯರ ಸಲಹೆ ಕೇಳಿರಿ. ಆರ್ಥಿಕ ಒತ್ತಡ ಹೆಚ್ಚು.

ಮಕರ ಮಾನಸಿಕ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಮನಸ್ಸು ದೃಢವಾಗಿರಲಿ.

ಕುಂಭ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಮೀನ ಒಳಿತು, ಕೆಡುಕು ಎರಡನ್ನೂ ಇಂದು ಕಾಣುವಿರಿ. ಉದ್ವಿಗ್ನ ಸ್ಥಿತಿ ಎದುರಿಸಿದರೂ ಪರಿಹಾರದ ನಿರಾಳತೆ ಕೂಡಾ ಸಿಗಲಿದೆ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 1,8,3,6

ವಿವಿಗಳಲ್ಲಿ ಗೌರವ ಡಾಕ್ಟರೇಟ್, ಪಠ್ಯಕ್ರಮ ಸಮಗ್ರ ಪರಿಶೀಲನೆ

ವಸ್ತ್ರಸಂಹಿತೆ ವರದಿಗೆ ಸಮಿತಿ

• ಬೆಂಗಳೂರು: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ, ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ, ಗೌರವ ಡಾಕ್ಟರೇಟ್ ಪ್ರದಾನ ಕುರಿತಂತೆ ಸಮಗ್ರ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಮೂರು ಪ್ರತ್ಯೇಕ ಉಪ ಸಮಿತಿಗಳನ್ನು ರಚಿಸಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಬದಲಾವಣೆ ಮತ್ತು ಪರಿಷ್ಕರಣೆ ಕುರಿತಂತೆ ಪರಿಶೀಲನೆ ನಡೆಸಲು ರಚಿಸಲಾದ ಪಠ್ಯಕ್ರಮ ಸಮಿತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಬಿ. ತಿಮ್ಮೇಗೌಡ ಅವರನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸಮಿತಿಯ ಸದಸ್ಯರಾಗಿ ಮಹಾರಾಜ ಛತ್ರಸಾಲ್ ಬುಂದೇಲ್ಖಂಡ್ ವಿವಿ ಮಾಜಿ ಕುಲಪತಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಮಂಗಳೂರು ವಿವಿ ಕುಲಪತಿ ಡಾ. ಪಿ.ಎಲ್. ಧರ್ಮ ಅವರನ್ನು ನೇಮಿಸಲಾಗಿದೆ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.ಟ

ಘಟಿಕೋತ್ಸವ ಶಿಷ್ಟಾಚಾರ ಮತ್ತು ವಸ್ತ್ರಸಂಹಿತೆ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಘಟಿಕೋತ್ಸವಗಳಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಹಾಗೂ ಏಕರೂಪದ ವಸ್ತ್ರಸಂಹಿತೆ ರೂಪಿಸುವ ಕುರಿತು ಪರಿಶೀಲನೆ ನಡೆಸಲು ಜನಪದ ವಿವಿ ಮಾಜಿ ಕುಲಪತಿ ಡಾ. ಅಂಬಳಿಕೆ ಹಿರಿಯಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಎ. ಮುರುಗಪ್ಪ ಅವರನ್ನು ನೇಮಿಸಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಈ ಸಮಿತಿಯ ಸಂಚಾಲಕರಾಗಿರುತ್ತಾರೆ.

ಗೌರವ ಡಾಕ್ಟರೇಟ್ ಸಮಿತಿ: ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನಕ್ಕೆ ಸಂಬಂಧಿಸಿದ ನಿಯಮಾವಳಿ ಹಾಗೂ ಮಾರ್ಗಸೂಚಿಗಳ ಕುರಿತು ಪರಿಶೀಲನೆ ನಡೆಸಲು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಟಿ.ಡಿ. ಕೆಂಪರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಸದಸ್ಯರಾಗಿ ಪ್ರೊ. ಟಿ.ಆರ್. ಥಾಪಕ್ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಜಯಕರ ಎಸ್.ಎಂ. ಅವರನ್ನು ನೇಮಕ ಮಾಡಲಾಗಿದೆ. ಡಾ. ಕೆ.ಜಿ. ಚಂದ್ರಶೇಖರ್ ಅವರನ್ನು ಈ ಸಮಿತಿಯ ಸಂಚಾಲಕರಾಗಿ ನೇಮಕ ಮಾಡಲಾಗಿದೆ.



ಸರ್ಕಾರ ವಿಧಿಸಿರುವ ಷರತ್ತುಗಳು

ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಉಪ ಸಮಿತಿಗಳಿಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ. ಉಪ ಸಮಿತಿಗಳು ರಾಜ್ಯದ ವಿಶ್ವವಿದ್ಯಾಲಯಗಳೊಂದಿಗೆ ಸಮಾಲೋಚನೆ ನಡೆಸಿ, ಕೂಲಂಕಷ ಅಧ್ಯಯನ ಮತ್ತು ಪರಿಶೀಲನೆ ಮಾಡಿ ತುರ್ತಾಗಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಉಪ ಸಮಿತಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಚಾಲಕರಿಗೆ ಪ್ರಯಾಣ ಭತ್ಯೆ, ಉಪಾಹಾರ ಭತ್ಯೆ, ದಿನ ಭತ್ಯೆ ಸೇರಿದಂತೆ ಇತರೆ ವೆಚ್ಚಗಳನ್ನು ಆರ್ಥಿಕ ಇಲಾಖೆಯ ಚಾಲ್ತಿಯಲ್ಲಿರುವ ಆದೇಶಗಳು ಮತ್ತು ಸುತ್ತೋಲೆಗಳ ಅನುಸಾರ ಪಾವತಿಸಲಾಗುತ್ತದೆ. ಅಲ್ಲದೇ, ಉಪ ಸಮಿತಿಗಳ ಸಭೆಗಳಿಗೆ ಅಗತ್ಯವಾದ ಸ್ಥಳಾವಕಾಶ ಮತ್ತು ಆಡಳಿತಾತ್ಮಕ ಸಹಕಾರವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಒದಗಿಸಲಿದೆ ಎಂದು ಎಂದು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಭಾರತ-ಇಟಲಿ ಬಲಿಷ್ಠ ಬಂಧ

ಪುಟ ೧➡ ಮಾತುಕತೆಯ ವೇಳೆ ಉಭಯ ನಾಯಕರು ಜಂಟಿ ವ್ಯೂಹಾತ್ಮಕ ಕ್ರಿಯಾ ಯೋಜನೆ 2025-2029ರ ಪ್ರಗತಿ ಪರಿಶೀಲಿಸಿದರು. ಇದು ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ಸಹಭಾಗಿತ್ವಕ್ಕೆ ದಿಕ್ಸೂಚಿಯಾಗಿದೆ. ಇದರೊಂದಿಗೆ, ಬಹುನಿರೀಕ್ಷಿತ ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್(ಐಎಂಇಸಿ) ಯೋಜನೆಗೆ ಮತ್ತಷ್ಟು ವೇಗ ನೀಡುವ ಕುರಿತು ಚರ್ಚಿಸಲಾಯಿತು.

ಅಧಿಕೃತ ಮಾತುಕತೆಗೂ ಮುನ್ನ, ಇಟಲಿ ಅಧ್ಯಕ್ಷ ಸೆರ್ಗಿಯೋ ಮಟ್ಟರೆಲ್ಲಾ ಅವರನ್ನು ಭೇಟಿಯಾದ ಮೋದಿ, ಕೃತಕ ಬುದ್ಧಿಮತ್ತೆ(ಎಐ), ಅತ್ಯಗತ್ಯ ಖನಿಜಗಳು, ಬಾಹ್ಯಾಕಾಶ, ಪರಮಾಣು ಶಕ್ತಿಯಂತಹ ಆಧುನಿಕ ಕ್ಷೇತ್ರಗಳಲ್ಲಿ ಕೈಜೋಡಿಸುವ ಬಗ್ಗೆ ಚರ್ಚಿಸಿದರು. ಪ್ರಧಾನಿ ಮೆಲೋನಿ, ಮೋದಿ ಅವರಿಗಾಗಿ ಔತಣಕೂಟ ಏರ್ಪಡಿಸಿದ್ದಲ್ಲದೆ, ಜಗತ್ಪ್ರಸಿದ್ಧ ರೋಮನ್ ಕಾಲೋಸಿಯಂಗೆ ಒಟ್ಟಾಗಿ ಭೇಟಿ ನೀಡಿದ್ದು ಉಭಯ ನಾಯಕರ ನಡುವಿನ ಆಪ್ತತೆಗೆ ಸಾಕ್ಷಿಯಾಯಿತು.

ಗಟ್ಟಿಯಾಗುತ್ತಿದೆ ಆರ್ಥಿಕ ಸಂಬಂಧ: 2025ರ ಅಂಕಿ-ಅಂಶಗಳ ಪ್ರಕಾರ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಬರೋಬ್ಬರಿ 14.25 ಬಿಲಿಯನ್ ಯೂರೋ ತಲುಪಿದೆ. ಇದರಲ್ಲಿ, ಭಾರತದಿಂದ ಇಟಲಿಗೆ ಆದ ರಫ್ತು 8.55 ಬಿಲಿಯನ್ ಯೂರೋ ಆಗಿದ್ದರೆ, ಇಟಲಿಯಿಂದ ಭಾರತಕ್ಕೆ ಆದ ಆಮದು 5.70 ಬಿಲಿಯನ್ ಯೂರೋ. ಇದು 2024ಕ್ಕೆ ಹೋಲಿಸಿದರೆ ಶೇ.9.42ರಷ್ಟು ಪ್ರಗತಿ ಕಂಡಿದೆ. ಇದೀಗ 2029ರ ವೇಳೆಗೆ ವಾರ್ಷಿಕ ವ್ಯಾಪಾರವನ್ನು 20 ಬಿಲಿಯನ್ ಯೂರೋಗೆ ಕೊಂಡೊಯ್ಯುವ ಗುರಿ ಇಟ್ಟುಕೊಳ್ಳಲಾಗಿದೆ. ಯುರೋಪಿಯನ್ ಒಕ್ಕೂಟದಲ್ಲಿ ಇಟಲಿ ಭಾರತದ 4ನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದ್ದು, ಭಾರತಕ್ಕೆ ವಿಶೇಷ ಆದ್ಯತೆ ನೀಡಿದೆ.

ಇಟಲಿಯಲ್ಲಿ ಭಾರತೀಯರ ಸದ್ದು: ಸಾಂಸ್ಕೃತಿಕವಾಗಿಯೂ ಭಾರತೀಯರು ಇಟಲಿಯಲ್ಲಿ ಮನ್ನಣೆ ಗಳಿಸುತ್ತಿದ್ದಾರೆ. ಜನವರಿ 2025ರ ವರದಿ ಪ್ರಕಾರ, ಇಟಲಿಯಲ್ಲಿ ಸದ್ಯ 1,86,833 ಭಾರತೀಯರು ನೆಲೆಸಿದ್ದಾರೆ.

> **ದೇಶದ ಟಾಫಿ, ಅಂತಹುದೇ ಮಿಠಾಯಿ ವಸ್ತುಗಳ ರಫ್ತು ಕಳೆದ 12 ವರ್ಷಗಳಲ್ಲಿ ಶೇ.166ರಷ್ಟು ಏರಿಕೆಯಾಗಿ 2025-26ರಲ್ಲಿ 132 ಕೋಟಿ ರೂ. ತಲುಪಿದೆ. ಈ ವಸ್ತುಗಳ ರಫ್ತು 2013-14ರಲ್ಲಿ 49.68 ಕೋಟಿ ರೂ.ಗಳಷ್ಟಿತ್ತು.**
>
> ■ ಪಿಯೂಷ್ ಗೋಯಲ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಕೆಪಿಎಸ್ ಜೂ.1ರಿಂದ ಶಿವಮೊಗ್ಗದಲ್ಲಿ ಶುರು

ಪುಟ ೧➡ ಈ ವರ್ಷವೇ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಅಗತ್ಯ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸಲು ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದರು. ಜತೆಗೆ, ಕೆಪಿಎಸ್ ಶಾಲೆಗಳಿಗೆ ಶಾಲಾ ಬಸ್ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೇ, ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ತಕ್ಷಣ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಮುಖ್ಯಮಂತ್ರಿ ಆದೇಶಿಸಿದರು.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಫಲಿತಾಂಶ ಹೆಚ್ಚಳ: ಸಭೆಯಲ್ಲಿ, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶಗಳ ಸುಧಾರಣೆ ಕುರಿತೂ ಚರ್ಚೆ ನಡೆದಿದ್ದು, ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.94.10ರಷ್ಟು ಉತ್ತೀರ್ಣ ಪ್ರಮಾಣ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.14.06ರಷ್ಟು ಹೆಚ್ಚಳವಾಗಿದೆ. ದ್ವಿತೀಯ ಪಿಯುಸಿಯಲ್ಲಿ ಶೇ.86.48ರಷ್ಟು ಫಲಿತಾಂಶ ದಾಖಲಾಗಿದ್ದು, ಕಳೆದ ಸಾಲಿನ ಶೇ.73.45ಗಿಂತ ಶೇ.13.03ರಷ್ಟು ಹೆಚ್ಚಳವಾಗಿದೆ ಎಂದರು. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ ಕಳೆದ ವರ್ಷದ 766 ರಿಂದ ಈ ಬಾರಿ 2,393ಕ್ಕೆ ಏರಿಕೆಯಾಗಿದೆ. ಎಸ್‌ಸಿ ಹಾಗೂ ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಶೇ.18ರಷ್ಟು ಏರಿಕೆ ಕಂಡುಬಂದಿದ್ದು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಾಧನೆಯಲ್ಲಿಯೂ ಗಮನಾರ್ಹ ಸುಧಾರಣೆ ದಾಖಲಾಗಿದೆ ಎಂದು ಹೇಳಿದರು. ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ.94.80 ದಾಖಲಾಗಿದ್ದರೆ, ನಗರ ಪ್ರದೇಶದಲ್ಲಿ ಶೇ.93.20 ದಾಖಲಾಗಿದೆ. ದ್ವಿತೀಯ ಪಿಯುಸಿಯಲ್ಲೂ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇ.87.62 ಆಗಿದ್ದು, ನಗರ ಪ್ರದೇಶದಲ್ಲಿ ಶೇ.85.95 ದಾಖಲಾಗಿದೆ ಎಂದು ವಿವರಿಸಿದರು.



> **ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡಿಲ್ಲ ಹಾಗೂ ಮೂರನೇ ಪರೀಕ್ಷೆ ಇರುವುದಿಲ್ಲ. ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳ ಜತೆಗೆ ಉಚಿತ ನೋಟ್‌ಬುಕ್ ವಿತರಣೆ ಮಾಡುವ ಬೇಡಿಕೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.**
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

35 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶ

• ಬೆಂಗಳೂರು: ಅಂತಾರಾಜ್ಯ ಮಟ್ಟದ ಬೃಹತ್ ಮಾದಕ ವಸ್ತುಗಳ ಜಾಲವನ್ನು ಭೇದಿಸುವಲ್ಲಿ ಹೆಬ್ಬಾಳ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೊಸದಿಲ್ಲಿಯಿಂದ ನಗರಕ್ಕೆ ಡ್ರಗ್ಸ್ ತಂದು ಮಾರಾಟ ಮಾಡುತ್ತಿದ್ದ ಮೂವರು ವಿದೇಶಿಗರು ಸೇರಿದಂತೆ ಒಟ್ಟು ಎಂಟು ಮಂದಿ ಅಂತಾರಾಜ್ಯ ಡ್ರಗ್ ಪೆಡ್ಲರ್‌ಗಳನ್ನು ಪೊಲೀಸರು ಹೆಡೆಮುರಿಕಟ್ಟಿದ್ದಾರೆ. ಬಂಧಿತರಿಂದ ಬರೋಬ್ಬರಿ 35 ಕೋಟಿ ರೂ. ಮೌಲ್ಯದ 17.500 ಕೆ.ಜಿ. ಎಂಡಿಎಂಎ, 2 ಕಾರನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಬುಧವಾರ ಆಯುಕ್ತರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಕರಣದ ಬಗ್ಗೆ ವಿವರಿಸಿದ ಅವರು, ಸೆನೆಗಲ್ ಮೂಲದ ಡಸ್ಸಾ ಗೆರಾಲ್ಡ್, ತಾಂಜೇನಿಯಾದ ಮೆಗ್ರಾತ್, ನೈಜೀರಿಯಾದ ಒಬಿಯಾನಿಜ್ ರೀಟಾ ಎಂಬ ವಿದೇಶಿ ಪ್ರಜೆಗಳೊಂದಿಗೆ, ಹೊಸದಿಲ್ಲಿ ಮೂಲದ ರೀನಾ ಯಾದವ್, ದೇಬಾಶಿಶ್ ಬ್ಯಾನರ್ಜಿ ಮತ್ತು ಬೆಂಗಳೂರಿನ ಸ್ಥಳೀಯ ಪೆಡ್ಲರ್‌ಗಳಾದ ಧೀರಜ್, ಮೊಹಮ್ಮದ್ ಮನ್ಸೂರ್ ಹಾಗೂ ಅಬ್ದುಲ್ ಸಮದ್ ಎನ್ನುವ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಸರಣಿ ದಾಳಿ ನಡೆಸಿ ಖೆಡ್ಡಾಕ್ಕೆ ಕೆಡವಿದ ಖಾಕಿ ಪಡೆ: ಮೊದಲಿಗೆ ಹೆಬ್ಬಾಳದ ಆನಂದನಗರದ ಸಮೀಪ ಅನುಮಾನಾಸ್ಪದವಾಗಿ ದಂಧೆಯಲ್ಲಿ ತೊಡಗಿದ್ದ ಮೂವರನ್ನು ವಶಕ್ಕೆ ಪಡೆದ ಪೊಲೀಸರು, ಅವರ ಬಳಿಯಿದ್ದ 4.300ಕೆ.ಜಿ. ಎಂಡಿಎಂಎ ವಶಪಡಿಸಿಕೊಂಡಿದ್ದರು. ಅವರ ನೀಡಿದ ಸುಳಿವಿನ ಮೇರೆಗೆ ಕಾರ್ಯಾಚರಣೆ ವಿಸ್ತರಿಸಿದ ಪೊಲೀಸರು, ಸರ್ಜಾಪುರದ ಚೂಡಸಂದ್ರದಲ್ಲಿರುವ ಸ್ಥಳೀಯ ಪೆಡ್ಲರ್ ಮೊಹಮ್ಮದ್ ಮನ್ಸೂರ್ ನಿವಾಸದ ಮೇಲೆ ದಾಳಿ ನಡೆಸಿ 10 ಕೆ.ಜಿ. ಎಂಡಿಎಂಎ ಪತ್ತೆ ಮಾಡಿದ್ದರು. ಇದರ ಬೆನ್ನಲ್ಲೇ ಅಬ್ದುಲ್ ಸಮದ್ ಎಂಬಾತನ ಹೆಣ್ಣೂರಿನ ನಿವಾಸದ ಮೇಲೆಯೂ ದಾಳಿ ನಡೆಸಿ 3.5 ಕೆ.ಜಿ. ಮಾದಕ ವಸ್ತುವನ್ನು ಜಪ್ತಿ ಮಾಡಲಾಗಿತ್ತು.

ಆರೋಪಿಗಳ ತೀವ್ರ ವಿಚಾರಣೆ ನಡೆಸಿದಾಗ ಈ ಜಾಲವು ದೆಹಲಿ ಮತ್ತು ಹರಿಯಾಣದವರೆಗೂ ವಿಸ್ತರಿಸಿರುವುದು ಬಯಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಸುಮಾರು 40 ಜನ ಪೊಲೀಸ್ ಸಿಬ್ಬಂದಿಗಳ ವಿಶೇಷ ತಂಡವು ದೆಹಲಿಗೆ ತೆರಳಿ, ಅಲ್ಲಿ ಒಂದು 15 ದಿನಕ್ಕೂ ಹೆಚ್ಚು ಕಾಲ ಬೀಡುಬಿಟ್ಟು ಕಾರ್ಯಾಚರಣೆ ನಡೆಸಿ ಡ್ರಗ್ಸ್ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಹಾಗೂ ಜೆ.ಸಿ.ನಗರ ಎಸಿಪಿ ಕೆ.ಎಸ್. ತನ್ವೀರ್ ಅವರ ಮಾರ್ಗದರ್ಶನದಲ್ಲಿ ಹೆಬ್ಬಾಳ ಪೊಲೀಸರು ನಡೆಸಿರುವ ಈ ಬೃಹತ್ ಮತ್ತು ಸಾಹಸಮಯ ಕಾರ್ಯಾಚರಣೆಗೆ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ 2 ಲಕ್ಷ ರೂ.ಬಹುಮಾನ ಘೋಷಣೆ ಮಾಡಿದರು.



ಸೀರೆ, ಇಸ್ತ್ರಿ ಪೆಟ್ಟಿಗೆ ಟೇಬಲ್‌ಗಳಲ್ಲಿ ಡ್ರಗ್ಸ್ ಸಾಗಾಟ!

ಬಂಧಿತ ಆರೋಪಿಗಳು ಯಾರಿಗೂ ಸಂಶಯ ಬಾರದಂತೆ ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದರು. ತಾವು ಉಡುಗೊರೆ ನೀಡುವ ನೆಪದಲ್ಲಿ ಸೀರೆಗಳು, ಬಟ್ಟೆ ಇಸ್ತ್ರಿ ಮಾಡಲು ಬಳಸುವ ಟೇಬಲ್‌ಗಳು ಮತ್ತು ಕುರ್ಚಿಗಳ ಒಳಭಾಗದಲ್ಲಿ ಎಂಡಿಎಂಎ ಅಡಗಿಸಿ, ಸುಂದರವಾಗಿ ಪ್ಯಾಕ್ ಮಾಡುತ್ತಿದ್ದರು. ನಂತರ ಇವುಗಳನ್ನು ಹೊಸದಿಲ್ಲಿಯಿಂದ ರೈಲಿನ ಮೂಲಕ ಬೆಂಗಳೂರಿಗೆ ತರುತ್ತಿದ್ದರು. ಹೀಗೆ ನಗರಕ್ಕೆ ತಲುಪುತ್ತಿದ್ದ ಡ್ರಗ್ಸ್ ಅನ್ನು ನಿರ್ಜನ ಪ್ರದೇಶಗಳಲ್ಲಿ ನಿಲ್ಲಿಸುತ್ತಿದ್ದ ಕಾರುಗಳಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು ಎಂಬ ಆಘಾತಕಾರಿ ವಿಷಯ ತನಿಖೆಯಿಂದ ಬೆಳಕಿಗೆ ಬಂದಿದೆ.

ಶಿವಾನಂದ್ ನೀಲಣ್ಣವರ ಬೆಂಗಳೂರಿಗೆ ಶಿಫ್ಟ್

• ಬೆಳಗಾವಿ: ಬಹುಕೋಟಿ ವಂಚನೆಯ ಆರೋಪಿ ಶಿವಾನಂದ ನೀಲಣ್ಣವರ ಅವರನ್ನು ನ್ಯಾಯಾಲಯ ಮಂಗಳವಾರ ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಅದರ ಬೆನ್ನಲೆ ಬೆಳಗಾವಿಯಿಂದ ನೇರವಾಗಿ ಬೆಂಗಳೂರಿಗೆ ಶಿಫ್ಟ್ ಮಾಡಲಾಗಿದೆ. ಬೆಳಗಾವಿಯನ್ನಷ್ಟೇ ಅಲ್ಲದೆ ಇಡೀ ರಾಜ್ಯವನ್ನೇ ನಡುಗಿಸಿದ್ದ 4,500 ಕೋಟಿ ರೂಪಾಯಿ ವಂಚನೆ ಪ್ರಕರಣದ ತನಿಖೆ ಈಗ ಮತ್ತಷ್ಟು ತೀವ್ರಗೊಂಡಿದೆ ಎನ್ನಲಾಗಿದೆ.

ಮಾಳಮಾರುತಿ ಪೊಲೀಸ್ ಠಾಣೆಯಲ್ಲಿದ್ದ ಆರೋಪಿ ಶಿವಾನಂದ ನೀಲಣ್ಣವರ್‌ನನ್ನು ಸಿಐಡಿ ಅಧಿಕಾರಿಗಳ ತಂಡ ಬಿಗಿ ಭದ್ರತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ.

ಮೊದಲನೇ ವಾಹನದಲ್ಲಿ ಕೇವಲ ಆರೋಪಿ ಶಿವಾನಂದ ನೀಲಣ್ಣವನವರನ್ನು ಕೂರಿಸಿಕೊಂಡು ಬರಲಾಗುತ್ತಿದ್ದರೆ, ಎರಡನೇ ವಾಹನದಲ್ಲಿ, ಈ ಹಗರಣದಲ್ಲಿ ಜಪ್ತಿ ಮಾಡಲಾದ ನೂರಾರು ಮಹತ್ವದ ದಾಖಲೆಗಳು, ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳು, ಪೆನ್ ಡ್ರೈವ್ ಹಾಗೂ ಮೊಬೈಲ್ ಫೋನ್‌ಗಳನ್ನು ಈ ವಾಹನದಲ್ಲಿ ಬೆಂಗಳೂರಿಗೆ ತರಲಾಗುತ್ತಿದೆ.

ನ್ಯಾಯಾಲಯವು ನಿನ್ನೆಯಷ್ಟೇ ಆರೋಪಿ ಶಿವಾನಂದನನ್ನು ಹತ್ತು ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿ ಮಹತ್ವದ ಆದೇಶ ಹೊರಡಿಸಿತ್ತು. ಕೋರ್ಟ್‌ನಿಂದ ಗ್ರೀನ್ ಸಿಗ್ನಲ್ ಸಿಗುತ್ತಿದ್ದಂತೆ ಅಲರ್ಟ್ ಆದ ಅಧಿಕಾರಿಗಳು, ಕಾಲಹರಣ ಮಾಡದೆ ಬೆಂಗಳೂರಿನ ಮುಖ್ಯ ಕಚೇರಿಯಲ್ಲಿ ವಿಚಾರಣೆ ನಡೆಸಲು ತಯಾರಿ ಮಾಡಿಕೊಂಡಿದ್ದಾರೆ.

ಯುಎಸ್ 42 ಯುದ್ಧ ವಿಮಾನಗಳು ನಾಶ!

ಪುಟ ೧➡ ಏಳು ಕೆಸಿ-135 ಸ್ಟ್ರಾಟೋಟ್ಯಾಂಕರ್ ಇಂಧನ ತುಂಬುವ ವಿಮಾನಗಳು, ಒಂದು ಇ-3 ಸೆಂಟ್ರಿ ಅವಾಕ್ಸ್, ಎರಡು ಎಂಸಿ-130ಜೆ ಕಮಾಂಡೋ-II ವಿಶೇಷ ಕಾರ್ಯಾಚರಣೆ ವಿಮಾನಗಳು ಹಾಗೂ ಎಚ್‌ಎಚ್-60ಡಬ್ಲ್ಯು ಜಾಲಿ ಗ್ರೀನ್-II ಹೆಲಿಕಾಪ್ಟರ್ ಸೇರಿವೆ. ಇದರ ಜತೆಗೆ 24 ಎಂಕ್ಯು-9 ರೀಪರ್ ಡ್ರೋನ್ ಹಾಗೂ ಒಂದು ಎಂಕ್ಯು-4ಸಿ ಟ್ರೈಟಾನ್ ಡ್ರೋನ್ ಕಳೆದುಕೊಂಡಿರುವುದಾಗಿ ತಿಳಿಸಲಾಗಿದೆ. 2026ರ ಫೆ.28ರಂದು ಆರಂಭವಾದ ಈ ಕಾರ್ಯಾಚರಣೆ ಮಧ್ಯಪ್ರಾಚ್ಯದಲ್ಲಿ ವಾಯು, ಸಮುದ್ರ ಮತ್ತು ಕ್ಷಿಪಣಿ ದಾಳಿಗಳ ಮೂಲಕ ಮುಂದುವರಿದಿತ್ತು. ಏಪ್ರಿಲ್‌ನಲ್ಲಿ ಕದನ ವಿರಾಮ ಘೋಷಣೆಯಾದ ಬಳಿಕ ದಾಳಿಗಳು ನಿಧಾನಗೊಂಡರೂ, ಕೆಲವು ವಾರಗಳ ಬಳಿಕ ಮತ್ತೆ ಉದ್ವಿಗ್ನತೆ ಹೆಚ್ಚಾಗಿದೆ ಎಂದು ವರದಿ ಹೇಳಿದೆ.

ಆ.31ರೊಳಗೆ ಜಿಬಿಎ ಪಾಲಿಕೆ ಚುನಾವಣೆ

ಪುಟ ೧➡ ಹಿಂದೆ ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ ಸರ್ಕಾರ ಎಸ್‌ಐಆರ್ ಮತ್ತು ಜನಗಣತಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಸಿಬ್ಬಂದಿ ಕೊರತೆ ಎದುರಾಗಲಿದೆ. ಆದ್ದರಿಂದ ಚುನಾವಣೆ ನಡೆಸಲು ಸೆಪ್ಟೆಂಬರ್ 30ರವರೆಗೆ ಸಮಯಾವಕಾಶ ಕೋರಿ ಮನವಿ ಸಲ್ಲಿಸಿತ್ತು. ಆದರೆ ಕೋರ್ಟ್ ಎರಡು ತಿಂಗಳು ಹೆಚ್ಚುವರಿ ಸಮಯ ನೀಡಿ, ಅಂದರೆ ಆ.31 ರೊಳಗೆ ಚುನಾವಣೆ ನಡೆಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಕೋರ್ಟ್‌ನಲ್ಲಿ ಏನಾಯ್ತು?: ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲ ಡಾ. ಅಭಿಷೇಕ್ ಮನು ಸಿಂಘ್ವಿ ಐದು ಪಾಲಿಕೆಗಳಿಗೆ ಜೂನ್ 30 ರೊಳಗೆ ಚುನಾವಣೆ ನಡೆಸುವಂತೆ ಈ ಹಿಂದೆ ನಿರ್ದೇಶಿಸಲಾಗಿತ್ತು. ಆದರೆ ಸಿಬ್ಬಂದಿ ಕೊರತೆ ಇರುವುದರಿಂದ ಎರಡರಿಂದ ಮೂರು ತಿಂಗಳು ಕಾಲಾವಕಾಶ ಕೇಳುತ್ತಿದ್ದೇವೆ ಅಷ್ಟೆ, ಚುನಾವಣೆ ನಡೆಸಲು ಈಗಾಗಲೇ ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ ಎಂದು ವಿವರಿಸಿದರು.

ಚುನಾವಣೆ ಮುಂದೂಡಿಕೆ ವಿರೋಧಿಸಿ ವಕೀಲ ರಂಗನಾಥ್ ಪರವಾಗಿ ಹಾಜರಾಗಿದ್ದ ವಕೀಲ ಪರಮೇಶ್ವರ್, ನ್ಯಾಯಾಲಯವು ಹಲವು ಬಾರಿ ಕಾಲಾವಕಾಶ ನೀಡಿದ್ದು, 15 ದಿನ ಹೆಚ್ಚುವರಿ ಕಾಲಾವಕಾಶ ನೀಡಬಹುದು. ಅದರ ಮೇಲೆ ಸಮಯ ನೀಡಕೂಡದು ಎಂದು ವಾದಿಸಿದರು.

ಚುನಾವಣಾ ಆಯೋಗದ ಪರ ವಕೀಲ ಕೆ.ಎನ್.ಫಣೀಂದ್ರ, ಜಿಬಿಎ ಮುಖ್ಯಸ್ಥರು ಚುನಾವಣೆ ನಡೆಸಲು ಡಿಸೆಂಬರ್‌ವರೆಗೆ ಕಾಲಾವಕಾಶ ಕೋರಿದ್ದಾರೆ. ಆದರೆ ಮತ್ತೊಮ್ಮೆ ನ್ಯಾಯಾಲಯದ ಮುಂದೆ ಬರಲು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಅಂತಿಮವಾಗಿ ಕೋರ್ಟ್ ಚುನಾವಣೆ ನಡೆಸಲು ಆ.31ಕ್ಕೆ ಗಡುವು ನೀಡಿ, ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಲಾಗಿದೆ ಎಂದು ಆದೇಶಿಸಿತು.



> **ಸೋಲುವ ಭಯದಿಂದ ಜಿಬಿಎ ಚುನಾವಣೆಯನ್ನು ರಾಜ್ಯ ಸರ್ಕಾರ ಪದೇ ಪದೆ ಮುಂದೂಡುತ್ತಿದ್ದು, ಇದು ಬೆಂಗಳೂರು ಜನತೆಗೆ ಮಾಡುತ್ತಿರುವ ದ್ರೋಹ**
>
> ■ ಆರ್.ಅಶೋಕ್, ಪ್ರತಿಪಕ್ಷ ನಾಯಕ

ಇನ್ನಾದರೂ ನಡೆಯಲಿ ಚುನಾವಣೆ

ಸುಪ್ರೀಂ ಕೋರ್ಟ್ ಆ.31ಕ್ಕೆ ನೀಡಿರುವ ಗಡುವು ಅಂತಿಮ ಗಡುವಾಗಲಿ. ಇನ್ನಾದರೂ ಜಿಬಿಎಗೆ ಚುನಾವಣೆ ನಡೆಯಲಿ. 11 ವರ್ಷಗಳಿಂದ ಚುನಾವಣೆ ನಡೆಯದೆ, 6 ವರ್ಷದಿಂದ ಸ್ಥಳೀಯ ಜನಪ್ರತಿನಿಧಿಗಳಿಲ್ಲದೆ ಬೆಂಗಳೂರು ಹಲವು ಸಮಸ್ಯೆ ಎದುರಿಸುತ್ತಿದೆ. ಆದ್ದರಿಂದ ಆದಷ್ಟು ಶೀಘ್ರ ಚುನಾವಣೆ ನಡೆಯಲಿ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

> **ಈಗ ಸುಪ್ರೀಂಕೋರ್ಟ್ ನೀಡಿರುವ ಅವಧಿ ವಿಸ್ತರಣೆ ಕೊನೆಯ ಅವಕಾಶವಾಗಬೇಕು. ಸರ್ಕಾರ ಮತ್ತು ಚುನಾವಣಾ ಆಯೋಗ ಇದನ್ನು ಕಟ್ಟುನಿಟ್ಟಿನ ಗಡುವಾಗಿ ಪರಿಗಣಿಸಿ, ವಿಳಂಬವಿಲ್ಲದೆ ಚುನಾಯಿತ ಸ್ಥಳೀಯ ಆಡಳಿತವನ್ನು ಪುನಃ ಸ್ಥಾಪಿಸಬೇಕು.**
>
> ■ ರಿಷ್ವಂಜಸ್ ರಿಷಿ ರಾಘವನ್, ಬಿಎನ್‌ಪಿ ಯುವ ಘಟಕದ ನಾಯಕ

ಅಧಿಕಾರಿ ನಿರ್ಲಕ್ಷ್ಯ: ವರದಿ ಬಹಿರಂಗ

• ಬೆಂಗಳೂರು: ಬೌರಿಂಗ್ ಆ್ಯಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ನಡೆದಿದ್ದ ಭೀಕರ ಕಾಂಪೌಂಡ್ ಗೋಡೆ ಕುಸಿತ ದುರಂತಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ, ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಹಾಗೂ ಸುರಕ್ಷತಾ ಕ್ರಮಗಳ ಕೊರತೆಯೇ ಪ್ರಮುಖ ಕಾರಣ ಎಂಬುದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ತನಿಖಾ ವರದಿಯಲ್ಲಿ ಬಹಿರಂಗವಾಗಿದೆ.

ಏ.29ರಂದು ಸಂಭವಿಸಿದ್ದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿತ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಈ ದುರಂತದಲ್ಲಿ ಹಲವು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಗುತ್ತಿಗೆದಾರರ ಬೇಜವಾಬ್ದಾರಿತನ ಸ್ಪಷ್ಟವಾಗಿ ಬೆಳಕಿಗೆ ಬಂದಿದೆ. ಘಟನೆಯಲ್ಲಿ 7 ಮಂದಿ ಸಾವನ್ನಪ್ಪಿ, ಇನ್ನೂ 7 ಮಂದಿ ಗಾಯಗೊಂಡಿದ್ದರು. ಪ್ರಕರಣದ ಗಂಭೀರತೆಯನ್ನು ಗಮನಿಸಿ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ತನಿಖೆ ನಡೆಸಿತ್ತು.

ಮೇ 14ರಂದು ಸ್ಥಳ ಪರಿಶೀಲನೆ ನಡೆಸಿದ ಬಳಿಕ ಸಿದ್ಧಪಡಿಸಲಾದ ವರದಿಯಲ್ಲಿ, ಆಸ್ಪತ್ರೆ ಆವರಣದಲ್ಲಿ ನಡೆದಿದ್ದ ಅವೈಜ್ಞಾನಿಕ ಕಾಮಗಾರಿಗಳು ಮತ್ತು ತ್ಯಾಜ್ಯ ವಿಲೇವಾರಿಯ ಬಗ್ಗೆ ಗಂಭೀರ ಆಕ್ಷೇಪ ವ್ಯಕ್ತಪಡಿಸಲಾಗಿದೆ. ವರದಿ ಪ್ರಕಾರ, ಆಸ್ಪತ್ರೆ ಆವರಣದ ಸುಮಾರು 22 ಸಾವಿರ ಚದರ ಅಡಿ ಪ್ರದೇಶದಲ್ಲಿ ಎಎಸ್‌ಆರ್ ಟ್ರೇಡರ್ಸ್ ಸಂಸ್ಥೆಯು ಕಟ್ಟಡ ಕಾಮಗಾರಿಯಿಂದ ಉಂಟಾದ ಜಿಬಿಎ ತ್ಯಾಜ್ಯ, ಮಣ್ಣು ಹಾಗೂ ಇತರ ಅವಶೇಷಗಳನ್ನು ನಿಯಮ ಉಲ್ಲಂಘಿಸಿ ರಾಶಿ ಹಾಕಿತ್ತು.

ಈ ತ್ಯಾಜ್ಯವನ್ನು ಗೋಡೆಯ ಸಮೀಪವೇ ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿದ್ದರಿಂದ ಗೋಡೆಯ ಮೇಲೆ ಅತಿಯಾದ ಒತ್ತಡ ನಿರ್ಮಾಣವಾಗಿತ್ತು. ಜತೆಗೆ ಮಳೆ ನೀರು ಸರಿಯಾಗಿ ಹರಿದು ಹೋಗಲು ಯಾವುದೇ ಸಮರ್ಪಕ ವ್ಯವಸ್ಥೆ ಮಾಡದಿರುವುದರಿಂದ ಗೋಡೆಯ ಅಡಿಪಾಯ ದುರ್ಬಲಗೊಂಡು ಕುಸಿತ ಸಂಭವಿಸಿದೆ ಎಂದು ವರದಿ ತಿಳಿಸಿದೆ. ಈ ಹಿನ್ನೆಲೆಯಲ್ಲಿ, ಗುತ್ತಿಗೆದಾರ ಸಂಸ್ಥೆಯಾದ ಎಎಸ್‌ಆರ್ ಟ್ರೇಡರ್ಸ್ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಕಿರುಸುದ್ದಿ

ವೀರಶೈವ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ

ಹೊಸಕೋಟೆ: ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದಿಂದ 2025-26ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.90 ಹಾಗೂ ಅದಕ್ಕಿಂತ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಹೊಸಕೋಟೆ ತಾಲೂಕು ಅಧ್ಯಕ್ಷ ಗುರುಬಸಪ್ಪ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರ ಸೂಚನೆಯಂತೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಗುವುದು. ವೀರಶೈವ-ಲಿಂಗಾಯತ ಮಹಾಸಭಾದ ವೆಬ್ ಸೈಟ್‌ನಲ್ಲಿ ಡಬ್ಲ್ಯುಡಬ್ಲ್ಯು.ಡಬ್ಲ್ಯು.ಬಿಜೆಡ್ಬ್ಲು.ಇಜಿ.ಟ್ರಿಜ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅಂಚೆ ಅಥವಾ ಕೊರಿಯರ್ ಮೂಲಕ ಬರುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ, ಅರ್ಜಿ ಸಲ್ಲಿಸಲು ಮೇ25 ಕೊನೆಯ ದಿನವಾಗಿದೆ. ಸಮುದಾಯದ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಿದ್ದಾರೆ.

ಬಾಲಕಿಯರ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಹೊಸಕೋಟೆ: ನಗರದಲ್ಲಿರುವ ಕರ್ನಾಟಕ ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ನಿಲಯದ ಪ್ರವೇಶಕ್ಕೆ 2026-27ನೇ ಸಾಲಿಗೆ 6ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಬಾಲಕಿಯರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟದ ವ್ಯವಸ್ಥೆ ಒಳಗೊಂಡಂತೆ ಪ್ರಮುಖ ಸೌಲಭ್ಯವನ್ನು ಕಲ್ಪಿಸಲಾಗುವುದು. ಅಗತ್ಯ ಇರುವ ದಾಖಲೆಗಳಾದ ಸ್ಯಾಟ್ಸ್ ಐಡಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಆಧಾರ್ ಸಂಖ್ಯೆ, ಪಡಿತರ ಚೀಟಿ ಸಂಖ್ಯೆ, ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ದಾಖಲಿಸಬೇಕು. ಅರ್ಜಿ ಸಲ್ಲಿಸಲು ಜೂ.30 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9738024284, 99640 33461 ಸಂಪರ್ಕಿಸಬಹುದಾಗಿದೆಂದು ಪ್ರಕಟಣೆ ತಿಳಿಸಿದೆ.

ಮರಿಗಳೊಂದಿಗೆ ಚಿರತೆ ಸೆರೆ

ಮೈಸೂರು: ತಾಲೂಕಿನ ವರಕೋಡು ಸಮೀಪ ನಿರ್ಮಾಣಗೊಂಡಿದ್ದ ಲೇಔಟ್‌ನ ಒಳಚರಂಡಿ (ಡ್ರೈನೇಜ್) ಯೊಳಗೆ ಚಿರತೆಯೊಂದು ತನ್ನ ನಾಲ್ಕು ಮರಿಗಳೊಂದಿಗೆ ಕಾಣಿಸಿಕೊಂಡ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದ ಘಟನೆ ನಡೆದಿದೆ. ಹೊಸ ಲೇಔಟ್ ನಲ್ಲಿ ಇನ್ನೂ ಮನೆಗಳು ನಿರ್ಮಾಣವಾಗದ ಹಿನ್ನೆಲೆಯಲ್ಲಿ ಚಿರತೆ ಚರಂಡಿಯೊಳಗೆ ಆಶ್ರಯ ಪಡೆದಿತ್ತು. ರಾತ್ರಿ ವೇಳೆ ಚಿರತೆ ಕಾಣಿಸಿಕೊಂಡ ಬಳಿಕ ಭಯಭೀತರಾದ ಸುತ್ತಮುತ್ತಲಿನ ನಿವಾಸಿಗಳು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ತಕ್ಷಣ ಕಾರ್ಯಾಚರಣೆಗೆ ಇಳಿದ ಅರಣ್ಯ ಇಲಾಖೆ ಸಿಬ್ಬಂದಿ, ಸುಮಾರು ಒಂದು ಕಿಲೋಮೀಟರ್ ವರೆಗೆ ಚಿರತೆಯನ್ನು ತೆರಳುವಂತೆ ಮಾಡಿ, ಚರಂಡಿಯ ಕೊನೆಯ ಭಾಗದಲ್ಲಿ ಬೋನ್ ಅಳವಡಿಸಿದರು. ಬಳಿಕ ಚಿರತೆಯನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು. ಚಿರತೆಯ ನಾಲ್ಕು ಮರಿಗಳನ್ನೂ ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ತಿಳಿದುಬಂದಿದೆ.

ಮಾವು-ಹಲಸು ಮೇಳಕ್ಕೆ ನೋಂದಾಯಿಸಿಕೊಳ್ಳಲಿ

ದೊಡ್ಡಬಳ್ಳಾಪುರ: ತೋಟಗಾರಿಕೆ ಇಲಾಖೆಯಿಂದ ಜಿಲ್ಲೆಯಲ್ಲಿ ಮಾವು, ಹಲಸು ಮತ್ತು ಇತರೆ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲು ಉದ್ದೇಶಿಸಲಾಗಿದೆ. ಆಸಕ್ತ ರೈತರು ಮೇಳದಲ್ಲಿ ಭಾಗವಹಿಸಲು ನೋಂದಾಯಿಸಿ ಕೊಳ್ಳಬೇಕೆಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.ಮಾವು, ಹಲಸು ಮತ್ತು ಇತರೆ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜೂ.5ರಿಂದ 7ವರೆಗೆ ಆಯೋಜಿಸಲು ಉದ್ದೇಶಿಸಲಾಗಿದೆ. ರೈತರು ತಾವು ಬೆಳೆದ ಮಾವು ಮತ್ತು ಹಲಸು, ಇತರೆ ಹಣ್ಣಿನ ಬೆಳೆಯನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಅನುಕೂಲವಾಗುವಂತೆ ಮೇ 30ರೊಳಗೆ ರಿಂದ ಹತ್ತಿರದ ತಾಲೂಕು ತೋಟಗಾರಿಕೆ ಕಚೇರಿಯಲ್ಲಿ ನೊಂದಾಯಿಸಿಕೊಳ್ಳಬಹುದಾಗಿದೆ.

ಈ ಮೇಳದಲ್ಲಿ ಸುಮಾರು 50ಕ್ಕೂ ಹೆಚ್ಚು ವಿವಿಧ ಮಾವು ತಳಿ, ಹಲಸು, ದ್ರಾಕ್ಷಿ ಸೇರಿದಂತೆ ಇತರೆ ಹಣ್ಣುಗಳ ತಳಿ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಹಮ್ಮಿಕೊಂಡು ಗ್ರಾಹಕರು ರೈತರಿಂದ ನೇರವಾಗಿ ಖರೀದಿಸಲು ಅವಕಾಶ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ತೋಟಗಾರಿಕೆ ಜಂಟಿ ನಿರ್ದೇಶಕರು ದೂ. 9448999214, ದೇವನಹಳ್ಳಿ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ), ದೂ. 9480461234, ದೊಡ್ಡಬಳ್ಳಾಪುರ - ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ದೂ. 9482129648, ಹೊಸಕೋಟೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ದೂ. 9880210892, ನೆಲಮಂಗಲ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ದೂ. 9880461607 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

132 ಕೋಟಿ ರೂ. ಮೌಲ್ಯದ ರಾಗಿ, ಶೇ.90 ಬೆಳೆಗಾರರಿಗೆ ಹಣ ಪಾವತಿ | ಕಳೆದ ಸಾಲಿಗಿಂತ ಶೇ.20 ಹೆಚ್ಚುವರಿ ಪೂರೈಕೆ

2.71 ಲಕ್ಷ ಕ್ವಿಂಟಾಲ್ ರಾಗಿ ಖರೀದಿ

ಎಸ್. ರುದ್ರೇಶ್ವರ

ರಾಮನಗರ: ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರೈತರಿಂದ ಬರೋಬ್ಬರಿ 132 ಕೋಟಿ ರೂಪಾಯಿ ಮೌಲ್ಯದ 2.71 ಲಕ್ಷ ಕ್ವಿಂಟಲ್ ರಾಗಿ ಖರೀದಿಸಲಾಗಿದೆ. 2025-26ನೇ ಸಾಲಿಗೆ ಹೋಲಿಸಿದರೆ ಈ ವರ್ಷ ಶೇಕಡಾ 20ರಷ್ಟು ರೈತರು ಹೆಚ್ಚುವರಿಯಾಗಿ ರಾಗಿ ಪೂರೈಕೆ ಮಾಡಿದ್ದಾರೆ.

ಕಳೆದ ಬಾರಿ 18,082 ರೈತರು 2,74,804 ಕ್ವಿಂಟಲ್ ರಾಗಿ ಮಾರಾಟ ಮಾಡುವುದಾಗಿ ನೋಂದಣಿ ಮಾಡಿಕೊಂಡಿದ್ದರು.

ಇದರಲ್ಲಿ 12,773 ರೈತರು 83 ಕೋಟಿ 57 ಲಕ್ಷ ರುಪಾಯಿ ಮೌಲ್ಯದ 1,94,804 ಕ್ವಿಂಟಲ್ ರಾಗಿ ಸರಬರಾಜು ಮಾಡಿದ್ದರು. ಆಹಾರ ಇಲಾಖೆ ಹಾಗೂ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತಕ್ಕೆ ಸರ್ಕಾರ ಇಂತಿಷ್ಟು ಕ್ವಿಂಟಲ್ ರಾಗಿಯನ್ನು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿ ಮಾಡಲು ಗುರಿ ನೀಡಿತ್ತು.

ಅದರಂತೆ ಪ್ರಸಕ್ತ ಸಾಲಿನಲ್ಲಿ 12,265 ರೈತರು 2,88,284 ಕ್ವಿಂಟಲ್ ರಾಗಿ ಪೂರೈಸಲು ನೋಂದಣಿ ಮಾಡಿಕೊಂಡಿದ್ದರು. ಇದರಲ್ಲಿ 11,693 ರೈತರು 132 ಕೋಟಿ 89 ಲಕ್ಷ ರುಪಾಯಿ ಮೌಲ್ಯದ 2,71,982 ಕ್ವಿಂಟಲ್ ರಾಗಿಯನ್ನು ಸರಬರಾಜು ಮಾಡಿದ್ದಾರೆ. ಇದರಲ್ಲಿ ಶೇಕಡಾ 90ರಷ್ಟು ರಾಗಿ ಹಣವನ್ನು ರೈತರ ಖಾತೆಗೆ ಪಾವತಿ ಮಾಡಲಾಗಿದೆ.

ಜಿಲ್ಲೆಯಲ್ಲಿ ಸುಮಾರು 72,000 ಹೆಕ್ಟೇರ್ ಗುರಿಯಲ್ಲಿ 65,000 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆ ಇತ್ತು. ಈ ಬಾರಿ ನಿರೀಕ್ಷಿತ ಪ್ರಮಾಣದಷ್ಟು ರಾಗಿ ಉತ್ಪಾದನೆಯೂ ಆಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನಾಲ್ಕನೇ ಮೂರು ಭಾಗದಷ್ಟು ರಾಗಿಯೂ ಖರೀದಿಯಾಗುವ ಸಾಧ್ಯತೆಗಳಿವೆ.

ಸರ್ಕಾರ ಕಳೆದ ವರ್ಷ ರಾಗಿಯ ದರವನ್ನು ಪ್ರತಿ ಕ್ವಿಂಟಲ್ಗೆ 4290 ರೂಪಾಯಿ ನಿಗದಿ ಮಾಡಿತ್ತು. ಆದರೆ, ಈ ವರ್ಷ 596 ರುಪಾಯಿ ಹೆಚ್ಚುವರಿಯಾಗಿ ಅಂದರೆ 4,886 ರೂಪಾಯಿ ದರ ನಿಗದಿ ಪಡಿಸಿತು. ಪ್ರತಿ ರೈತರಿಂದ ಒಂದು ಎಕರೆಗೆ 10 ಕ್ವಿಂಟಲ್‌ನಂತೆ ಎಲ್ಲ ರೈತರಿಂದ ಅವರು ಹೊಂದಿರುವ ಜಮೀನಿಗೆ ಅನುಗುಣವಾಗಿ ರಾಗಿ ಖರೀದಿಸಲು ಉದ್ದೇಶಿಸಿತ್ತು. ರಾಗಿ ಖರೀದಿ ದರ ಹೆಚ್ಚಾಗಿರುವ ಜತೆಗೆ ಬೆಳೆ ಇಳುವರಿಯೂ ಚೆನ್ನಾಗಿರುವುದರಿಂದ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಕಳೆದ ಎರಡು ಮೂರು ವರ್ಷಗಳಿಂದ ಸತತವಾಗಿ ಏರಿಕೆ ಕಾಣುತ್ತಿದ್ದ ಬೆಲೆಯಲ್ಲಿ ಈ ಬಾರಿ ಪ್ರತಿ ಕೆಜಿಗೆ 5.96 ರೂ. ಗಳಷ್ಟು ಹೆಚ್ಚಳವಾಗಿತ್ತು. ಸಿರಿಧಾನ್ಯಗಳ ಬಗ್ಗೆ ಜಾಗೃತಿ ಹೆಚ್ಚಾದಂತೆ ರಾಗಿ ಬಳಕೆದಾರರು ಮತ್ತು ಬೆಳೆಗಾರರ ಸಂಖ್ಯೆಯಲ್ಲೂ ಗಣನೀಯ ಏರಿಕೆ ಕಂಡುಬಂದಿತ್ತು. ಈ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ಖರೀದಿ ನೋಂದಣಿ ಪ್ರಕ್ರಿಯೆಯನ್ನು ಶೀಘ್ರವಾಗಿ ಆರಂಭಿಸಿತ್ತು.



ಮೇ 5ರವರೆಗೆ ರಾಗಿ ಸರಬರಾಜಿನ ವಿವರ

ಖರೀದಿ ಕೇಂದ್ರ	ರಾಗಿ ಪೂರೈಸಿದ ರೈತರು	ರಾಗಿ ಪ್ರಮಾಣ (ಕ್ವಿಂ)	ರಾಗಿ ಒಟ್ಟು ಮೌಲ್ಯ (ರೂ.)
ಕನಕಪುರ	3,104	86,779.00	42,40,02,194
ಮಾಗಡಿ	4,907	1,04,616.50	51,11,56,219
ರಾಮನಗರ	452	10,478.50	5,11,97,951
ಮಾಗಡಿ-1	1,966	38,881.50	18,99,75,009
ಚನ್ನಪಟ್ಟಣ	357	9,727.00	4,75,26,122
ಹಾರೋಹಳ್ಳಿ	907	21,500.00	10,50,49,000
ಒಟ್ಟು	11,693	2,71,982.50	132,89,06,495

ರಾಗಿ ಮಾರಾಟದ ನೋಂದಣಿ ವಿವರ

ಖರೀದಿ ಕೇಂದ್ರ	ನೋಂದಣಿ ರೈತರು	ರಾಗಿ ಪ್ರಮಾಣ (ಕ್ವಿಂ)
ಕನಕಪುರ	3,325	94,353.00
ಮಾಗಡಿ	5,102	1,09,338.50
ರಾಮನಗರ	472	11,029.50
ಮಾಗಡಿ-1	2,056	40,879.50
ಚನ್ನಪಟ್ಟಣ	373	10,248.50
ಹಾರೋಹಳ್ಳಿ	937	22,435.00
ಒಟ್ಟು	12,265	2,88,284.00

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಐದು ತಾಲೂಕುಗಳಿಗೆ ಒಂದರಂತೆ ಒಟ್ಟು 5 ಖರೀದಿ ಕೇಂದ್ರ ಮತ್ತು ಸಂಗ್ರಹಣ ಕೇಂದ್ರಗಳನ್ನು 2026ರ ಜನವರಿ ಅಂತ್ಯದೊಳಗೆ ತೆರೆಯಲಾಗಿತ್ತು. ಖರೀದಿ ಕೇಂದ್ರಗಳಲ್ಲಿ ರೈತರು ಮಾತ್ರ ಹಾಜರಿ ಕಡ್ಡಾಯ ಮಾಡಲಾಗಿತ್ತು. ಮಧ್ಯವರ್ತಿಗಳಿಗೆ ಕಡಿವಾಣ ಹಾಕಿದ್ದರಿಂದ ರಾಗಿ ಸರಬರಾಜು ಮಾಡಿದ ರೈತರಿಗೆ ನಿಗದಿತ ದಿನಾಂಕದೊಳಗೆ ಹಣ ಪಾವತಿಯಾಗಿದೆ.

ದಿಗಂತ ವಿಶೇಷ

59 ಕೋಟಿ ರೂ. ಬಾಕಿ ಉಳಿಸಿಕೊಂಡ ಸರಕಾರ: ಬೆಂಗಳೂರು ದಕ್ಷಿಣ ಜಿಲ್ಲಾದ್ಯಂತ ರಾಗಿ ಖರೀದಿ ಕೇಂದ್ರಗಳಲ್ಲಿ ರೈತರಿಗೆ 59 ಕೋಟಿ ಬಾಕಿ ಉಳಿಸಿಕೊಂಡಿರುವ ಸರ್ಕಾರ ಕೂಡಲೇ ಸಂದಾಯ ಮಾಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ಸಂಚಾಲಕ ಚೀಲೂರು ಮುನಿರಾಜು ಒತ್ತಾಯಿಸಿದರು. ಜಿಲ್ಲಾದ್ಯಂತ ಸುಮಾರು 6466 ರೈತರಿಗೆ 73 ಕೋಟಿ ಹಣ ಸಂದಾಯವಾಗಿದೆ. ಇನ್ನೂ 5227 ಫಲಾನುಭವಿ ರೈತರಿಗೆ 59 ಕೋಟಿ ರು. ಬಾಕಿ ಹಣವನ್ನು ಕೂಡಲೇ ಸಂದಾಯ ಮಾಡಬೇಕೆಂದು ಒತ್ತಾಯಿಸಿದ ಅವರು, ಜಾನುವಾರುಗಳು ನೀರಿಲ್ಲದೆ ಸಾವನ್ನಪ್ಪುತ್ತಿದ್ದು ಕೂಡಲೇ ಗೋಶಾಲೆ ಗಳನ್ನು ತೆರೆಯಬೇಕು ಎಂದು ಮನವಿ ಮಾಡಿದರು.

ಐತಿಹಾಸಿಕ ಪರಂಪರೆ ಉಳಿಸಿ ಅಭಿಯಾನ: ಚರ್ಚೆ

ಶಾಸನಗಳಿಂದ ಸಾಹಿತ್ಯಕ್ಕೆ ಮೆರುಗು



ನೆಲಮಂಗಲ: ಕನ್ನಡ ಭಾಷೆ ಹಾಗೂ ಸಾಹಿತ್ಯದ ಶ್ರೇಷ್ಠತೆ ತಿಳಿದಿರುವುದು ಶಾಸನಗಳಿಂದ ಎಂಬುದನ್ನು ನಾವೆಲ್ಲರೂ ಅರಿಯಬೇಕಾಗಿದೆ. ಅಲಯನ್ಸ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ವಿವೇಕಾನಂದ ಸಜ್ಜನ್ ತಿಳಿಸಿದರು.

ನಗರ ಸಮೀಪದ ನಗರೂರಿನ ಬಿಜಿಎಸ್ ವಿಜ್ಞಾನಂ ಸೌತ್ ಕ್ಯಾಂಪಸ್‌ನಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಹಾಗೂ ಬಿಜಿಎಸ್ ಪಿಯು ಕಾಲೇಜಿನ ಆಶ್ರಯದಲ್ಲಿ ವಿಶ್ವ ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಐತಿಹಾಸಿಕ ಪರಂಪರೆ ಉಳಿಸಿ ಅಭಿಯಾನದಲ್ಲಿ ಕಾರ್ಯಾಗಾರದಲ್ಲಿ ಮಾತನಾಡಿ, ಕನ್ನಡದ ಸಾವಿರಾರು ಶಾಸನಗಳು ನಮ್ಮ ನಾಡಿನ ಸಂಪತ್ತುಗಳು. ಇತಿಹಾಸ ಕಲಿಕೆಗೆ ಕೇವಲ ಕಲಾ ವಿಭಾಗದ ವಿದ್ಯಾರ್ಥಿಗಳು ಅಷ್ಟೇ ಅಲ್ಲ, ಎಲ್ಲರೂ ಇತಿಹಾಸ' ತಿಳಿಯಬೇಕು ಎಂದರು. ನಮ್ಮ ಸುತ್ತಮುತ್ತ ಬಹಳಷ್ಟು ಇತಿಹಾಸ ಈಗಲೂ ನೆಲದಡಿಯಲ್ಲಿ ಅಡಗಿದೆ. ಅದನ್ನು ಹೆಕ್ಕಿ ತೆಗೆಯುವ ಮೂಲಕ ಇತಿಹಾಸದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಬೇಕೆಂದು ವಿದ್ಯಾರ್ಥಿಗಳಿಗೆ ವಿವರಿಸಿದರು. ಕರ್ನಾಟಕ ಇತಿಹಾಸ ಅಕಾಡೆಮಿ ಪ್ರಧಾನ 'ಕಾರ್ಯದರ್ಶಿ ಕೆ .ಎಲ್. ರಾಜಶೇಖರ್ ಮಾತನಾಡಿ, ನಮ್ಮ ಇತಿಹಾಸವನ್ನು ನಾವೇ ಮರೆತರೇ, ನಮ್ಮ ಮುಂದಿನ ಪೀಳಿಗೆ ನಾಡನ್ನೇ ಮರೆಯಬಹುದು. ನಮ್ಮ ನಾಡಿನಲ್ಲಿರುವ ಶಾಸನಗಳು ಕನ್ನಡ ಸಾಹಿತ್ಯಕ್ಕೆ ತಾಯಿ ಬೇರುಗಳಿದ್ದಂತೆ ಅವುಗಳನ್ನು ಉಳಿಸಿ, ರಕ್ಷಿಸುವ ಕೆಲಸ ನಮ್ಮದಾಗಬೇಕೆಂದರು.

ಕೆಲ ದಿನದ ಹಿಂದೆ ಬಿಜಿಎಸ್ ಪಿಯು ಕಾಲೇಜು ಸಮೀಪದ ನಗರೂರಿನ ಗ್ರಾಮದಲ್ಲಿ, ನಗರೂರಿನ ಒಂದು ಶಾಸನ ಪತ್ತೆಯಾಗಿತ್ತು. ಆ ಶಾಸನವನ್ನು ಗುರುತಿಸಿ, ಅದೊಂದು ತುರುಗೋಳ್ ಶಾಸನವಾಗಿದೆ. ಗಂಗರ ಕಾಲಘಟ್ಟದ್ದು ಎಂಬುದಾಗಿ ಮಾಹಿತಿ ನೀಡಿದರು. ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಕನ್ನಡ ಶಾಸನಗಳ ಬಗ್ಗೆ ವಿಶೇಷ ಕಾರ್ಯಾಗಾರವನ್ನು ಮಾಡಲಾಯಿತು. ಸ್ಥಳೀಯ ಶಾಸನಗಳ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಚಯಮಾಡಿಕೊಟ್ಟರು. ವಿದ್ಯಾರ್ಥಿಗಳು ತಮ್ಮ ಗ್ರಾಮದಲ್ಲಿ ಶಾಸನಗಳು ಕಂಡು ಬಂದರೆ ತಕ್ಷಣ ಅಕಾಡೆಮಿಗೆ ತಿಳಿಸುವಂತೆ ಸಲಹೆ ನೀಡಿದರು.

ಶಾಸನ ತಜ್ಞ ಕೆ.ಧನಪಾಲ್, ಅಲಯನ್ಸ್ ವಿಶ್ವವಿದ್ಯಾಲಯದ ಸಂಶೋಧನಾರ್ಥಿ ನರೇಂದ್ರ.ಎಂ, ಬಿಜಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಶಾಂತಕುಮಾರ್, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು, ಬೋಧಕ ಬೋಧಕೇತರ ಸಿಬ್ಬಂದಿ ಇದ್ದರು.

ವಿದ್ಯಾರ್ಥಿನಿ ಇಂಚರಾಗೆ 3ನೇ ರ್‍ಯಾಂಕ್

ದೊಡ್ಡಬಳ್ಳಾಪುರ: ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ 2023-25ನೇ ಸಾಲಿನ 2 ವರ್ಷಗಳ ಬಿ.ಎಡ್ ಪದವಿ ಪರೀಕ್ಷೆಯ ರ್‍ಯಾಂಕ್ ವಿಜೇತರ ಪಟ್ಟಿ ಪ್ರಕಟಗೊಂಡಿದೆ. ಅದರಲ್ಲಿ ಶ್ರೀ ಕೊಂಗಾಡಿಯಪ್ಪ ಶಿಕ್ಷಣ ಮಹಾವಿದ್ಯಾಲಯ (ಬಿ.ಎಡ್) ಕಾಲೇಜಿನ ಇಂಚರ ನಾರಾಯಣ 2306 (2400) ಅಂಕ ಗಳಿಸುವುದರೊಂದಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ 3ನೇ ರ್‍ಯಾಂಕ್ ಪಡೆದಿದ್ದಾರೆ. ರ್‍ಯಾಂಕ್ ಪಡೆದ ವಿದ್ಯಾರ್ಥಿನಿಯನ್ನು ಕಾಲೇಜಿನ ಅಧ್ಯಕ್ಷ ಎ.ರಾಮಶೆಟ್ಟಿ, ಉಪಾಧ್ಯಕ್ಷ ಪಿ.ವಿ.ಶ್ರೀನಿವಾಸಮೂರ್ತಿ ಅವರು, ಗೌರವ ಕಾರ್ಯದರ್ಶಿ ಎಸ್.ಪ್ರಕಾಶ್ , ಸಹ ಕಾರ್ಯದರ್ಶಿ ಎ.ಆರ್. ರಾಜಶೇಖರ್ , ಖಜಾಂಚಿ ಸಿ.ಎಸ್. ಜಗದೀಶ್ ಬಾಬು ಮತ್ತು ಆಡಳಿತ ಮಂಡಳಿ ಎಲ್ಲಾ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ.ಮಂಜುನಾಥ್. ಬಿ.ಕೆ, ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.



ದೊಡ್ಡಬಳ್ಳಾಪುರದಲ್ಲಿ ಕೌಶಲ ತರಬೇತಿ ಕಾರ್ಯಾಗಾರ

ಉದ್ಯೋಗಾವಕಾಶಕ್ಕೆ ಕೌಶಲ ಪೂರಕ

ದೊಡ್ಡಬಳ್ಳಾಪುರ: ಪಠ್ಯ ಕೇಂದ್ರಿತ ಜ್ಞಾನದ ಜತೆಗೆ ಸಂವಹನ ಮತ್ತು ಕೌಶಲ ಅಗತ್ಯ. ವ್ಯಕ್ತಿತ್ವ ನಿರ್ಮಾಣ ಮತ್ತು ಉದ್ಯೋಗಾವಕಾಶಗಳಿಗೆ ಅದು ಪೂರಕ ಎಂದು ಲಯನ್ಸ್ ಮಲ್ಟಿಪಲ್ ಕೌನ್ಸಿಲ್ ಮಾಜಿ ಅಧ್ಯಕ್ಷ ಡಾ.ಎಸ್. ನಾಗರಾಜ ರಾವ್ ಹೇಳಿದರು.



ಇಲ್ಲಿನ ಲಯನ್ಸ್ ಕ್ಲಬ್ ಆಫ್ ದೊಡ್ಡ ಬಳ್ಳಾಪುರ ಆರ್.ಎಲ್.ಜಾಲಪ್ಪ ಇನ್ಸ್ ಟಿಟ್ಯೂಷನ್ಸ್, ಡಾ.ರಾವ್ಸ್ ಎಕ್ಸೆಲ್ ಲೀಡರ್ ಶಿಪ್ ಅಕಾಡೆಮಿ ಸಹಯೋಗದಲ್ಲಿ, ಆರ್ ಎಲ್‌ಜೆಐಟಿಯಲ್ಲಿ ಬುಧವಾರ ಸಂಜೆ ನಡೆದ ಶಿಕ್ಷಕರ ಎರಡು ದಿನಗಳ ಮೃದು ಕೌಶಲ (ಸಾಫ್ಟ್‌ಸ್ಕಿಲ್ಸ್) ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಸಾಫ್ಟ್ ಸ್ಕಿಲ್ಸ್ ವಿಚಾರದಲ್ಲಿ ಜಾಗತಿಕವಾಗಿ ಮಹತ್ವದ ಪ್ರಯೋಗಗಳು ನಡೆಯುತ್ತಿವೆಂದರು. ಔದ್ಯೋಗಿಕ ವಲಯದಲ್ಲಿ ಇವುಗಳ ನಿರೀಕ್ಷೆ ಹೆಚ್ಚಿದೆ. ಪ್ರತಿಯೊಬ್ಬ ವ್ಯಕ್ತಿಯೂ ವಿದ್ಯಾಭ್ಯಾಸದ ಬಳಿಕ ಉದ್ಯೋಗವನ್ನು ಪಡೆಯುವ ಹಂತದಲ್ಲಿ ಆತನು ಪಡೆದ ಅಂಕಗಳಿಗಿಂತ ಹೆಚ್ಚಿನ ಮಹತ್ವ ಆತನಲ್ಲಿರುವ ನಡವಳಿ, ಸಮಯಪ್ರಜ್ಞೆ, ಸಮಸ್ಯೆ ನಿಗ್ರಹ ಸಾಮರ್ಥ್ಯ ಸೇರಿದಂತೆ ಮೃದು ಕೌಶಲ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎಂದರು. ಲಯನ್ಸ್ ಜಿಲ್ಲಾ ನಿಯೋಜಿತ ಉಪಪಾಲಕ ಎ.ವಿಜಯಕುಮಾರ್ ಮಾತನಾಡಿ, ಸಮಯ, ಸ್ಥಳ ಮತ್ತು ಹೊಣೆಗಾರಿಕೆ ಪ್ರಜ್ಞಾಪೂರ್ವಕ ನಿರ್ವಹಣೆಯನ್ನು ಬಲ್ಲ ವ್ಯಕ್ತಿ ಸಾಧಕನಾಗಿ ಮುಂದುವರೆಯಲು ಸಾಧ್ಯ ಎಂದರು.

ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಜೆ.ರಾಜೇಂದ್ರ ಮಾತನಾಡಿ, ಶಿಕ್ಷಣ ಸಂಸ್ಥೆಗಳಲ್ಲಿ ಮೃದು ಕೌಶಲ ತರಬೇತಿ ಅಕಾಡೆಮಿಕ್‌ನ ಭಾಗವಾಗಬೇಕು. ವಿದ್ಯಾರ್ಥಿಗಳಿಗೆ ಸವಾಲನ್ನು ಎದುರಿಸುವ ಮತ್ತು ಸಮಸ್ಯೆ ಗಳನ್ನು ಬಗೆಹರಿಸುವ ಸಾಮರ್ಥ್ಯ ವೃದ್ಧಿಗೆ ಮಾರ್ಗದರ್ಶನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಇಂತಹ ಶಿಬಿರಗಳು ಪೂರಕ ಪಾತ್ರ ನಿರ್ವಹಿಸುತ್ತವೆ ಎಂದು ತಿಳಿಸಿದರು. ಲಯನ್ಸ್ ಕ್ಲಬ್ ಆಫ್ ಆರ್.ಎಲ್.ಜಾಲಪ್ಪ ಇನ್ಸ್ ಟಿಟ್ಯೂಷನ್ಸ್‌ನ ಅಧ್ಯಕ್ಷ ಪ್ರೊ.ಕೆ.ಆರ್.ರವಿಕಿರಣ್ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಜಿಲ್ಲಾ ಜಾಗತಿಕ ಸೇವಾ ತಂಡದ ಸಂಚಾಲಕ ರವಿಚಂದ್ರನ್, ಜಿಲ್ಲಾ ಸದಸ್ಯತ್ವ ಸಮಿತಿ ಸಂಚಾಲಕ ಹಾಗೂ ಸಾಫ್ಟ್ ಸ್ಕಿಲ್ಸ್ ಯೋಜನಾ ನಿರ್ದೇಶಕ ಎಂ.ಆರ್. ಶ್ರೀನಿವಾಸ್ ಮಾತನಾಡಿದರು.

ದೊಡ್ಡಬಳ್ಳಾಪುರ ನಗರ, ತಾಲೂಕು, ಆಲೀಪುರ ಮತ್ತು ತೊಂಡೇಬಾವಿ ಮತ್ತಿತರ ಕಡೆಯಿಂದ 12 ಶಾಲೆಗಳ ಒಟ್ಟು 32 ಶಿಕ್ಷಕರು ತರಬೇತಿ ಪಡೆದರು. ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರ, ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡು ಜಯಗಳಿಸಿದವರಿಗೆ ಬಹುಮಾನವನ್ನು ವಿತರಿಸಲಾಯಿತು.

ಆಡಳಿತಾಧಿಕಾರಿ ಡಾ.ಎಂ.ಶ್ರೀನಿವಾಸರೆಡ್ಡಿ, ಉಪಪ್ರಾಂಶುಪಾಲ ಡಾ.ಆರ್.ಎಂ.ಸುನಿಲ್ ಕುಮಾರ್, ಖಜಾಂಚಿ ಕೆ.ಸಿ.ನಾಗರಾಜ್, ಜಂಟಿ ಕಾರ್ಯದರ್ಶಿ ಎನ್.ಆರ್.ಮುಕೇಶ್, ನಿರ್ದೇಶಕರಾದ ಎಂ.ಕೆ.ವೀಣಾ, ಕೆ.ಆರ್. ಮಂಜುಳಾ, ವರದರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕನ್ನಡಪರ ಹೋರಾಟಗಾರ ಎಸ್.ಕೆ.ಗೌರೀಶ್ ಹುಟ್ಟುಹಬ್ಬ

ಅನಾಥಾಶ್ರಮದಲ್ಲಿ ಊಟದ ವ್ಯವಸ್ಥೆ

ಆನೇಕಲ್: ಮುತ್ತನಲ್ಲೂರು ಗ್ರಾಪಂ ಸದಸ್ಯರು ಹಾಗೂ ಕನ್ನಡ ಜಾಗೃತಿ ವೇದಿಕೆಯ ಯುವ ರಾಜ್ಯಾಧ್ಯಕ್ಷ ಎಸ್.ಕೆ.ಗೌರೀಶ್ ಅವರ ಹುಟ್ಟು ಹಬ್ಬವನ್ನು ಸಿಫಾನಿ ಅನಾಥಾಶ್ರಮದಲ್ಲಿ ಊಟದ ವ್ಯವಸ್ಥೆ ಹಾಗೂ ಬೆಡ್ ಶೀಟ್ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.



ವೃದ್ಧರಿಗೆ ಬೆಡ್ ಶಿಟ್ ವಿತರಿಸಿ ಎಸ್.ಕೆ.ಗೌರೀಶ್ ಮಾತನಾಡಿ, ನನ್ನ ಹುಟ್ಟುಹಬ್ಬದ ಅಂಗವಾಗಿ ವಿವಿಧ ಸಮಾಜಮುಖಿ ಕಾರ್ಯಗಳು ಹಮ್ಮಿಕೊಂಡು ಬಹಳ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಗಳು, ಬಡವರಿಗೆ ಬೆಡ್ ಶೀಟ್ ,ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳ ಹಣ್ಣು ಹಂಪಲು ಸೇರಿದಂತೆ ಅನೇಕ ಸಮಾಜ ಮುಖಿ ಕಾರ್ಯಕ್ರಮ ಮಾಡಲಾಗಿದೆಂದರು.

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಆಶಯದಂತೆ ಬದುಕನ್ನು ರೂಪಿಸಿ ಕೊಂಡಿದ್ದೇನೆ. ನನ್ನ ಸಮುದಾಯದ ಬದುಕು ಹಸನಾಗಬೇಕು. ಪ್ರತಿಯೊಬ್ಬರೂ ಸ್ವಾಭಿಮಾನದಿಂದ ಬದುಕಬೇಕು ಎಂಬುದು ನನ್ನ ಮಹದಾಸೆಯಾಗಿದೆ. ಆ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗಿದ್ದೇನೆಂದು ತಿಳಿಸಿದರು. ಗ್ರೀನ್ ಪಿಲ್ಲರ್ಸ್ ತಂಡದ ಸದಸ್ಯರಾದ ಗುಡ್ಡಹಟ್ಟಿ ರಾಮಸ್ವಾಮಿ, ಜೈರಾಮ್ ಸರ್ಜಾ, ಶ್ರೀಧರ್, ಬಿಸಲ್ಪಳ್ಳಿ ಅಭಿ, ಚೊಡಸಂದ್ರ ಮಧು, ಶಿವಶಂಕರ್, ಪುರುಷೋತ್ತಮ್, ಮೂರ್ತಿ, ಬಳಗಾರನಪಾಳ್ಯ ಸತೀಶ್, ಕುಮಾರ್, ಹೆಬ್ಬಗೋಡಿ ರವಿ, ಹರೀಶ್, ಬೊಮ್ಮಸಂದ್ರ ಅರುಣ್, ಗುಡ್ಡಹಟ್ಟಿ ಅನಿಲ್, ಕಮ್ಮಸಂದ್ರ ಸತೀಶ್, ಗಡ್ಡಹಟ್ಟಿ ಸೀನಣ್ಣ, ಜಿಗಳ ದುರ್ಗೇಶ್, ತಿಮ್ಮರೆಡ್ಡಿ ಅನೇಕರಿದ್ದರು.

ಸರ್ವೇ ಸ್ಕೆಚ್‌ಗೆ ಲಂಚಕ್ಕಾಗಿ ಒತ್ತಡ | ಅಧಿಕಾರಿಗಳ ನಡೆಗೆ ಆಕ್ರೋಶ

ವಿಚಾರಣೆ ನೆಪದಲ್ಲಿ ರೈತನಿಗೆ ಅಧಿಕಾರಿಗಳ ಧಮ್ಕಿ

ನೆಲಮಂಗಲ: ನ್ಯಾಯಾಲಯದ ಆದೇಶದಂತೆ ಸರ್ವೇಸ್ಕೆಚ್ ಮಾಡಲು ಹಣ ಕೇಳಿದ್ದ ಸರ್ವೇಯರ್ ಮೇಲೆ ದೂರು ನೀಡಿದ್ದ ರೈತನಿಗೆ ವಿಚಾರಣೆಗೆ ಕರೆದು ದೂರು ವಾಪಸ್ ಪಡೆಯುವಂತೆ ಡಿಡಿಎಲ್ಆರ್ ಕಚೇರಿ ಅಧಿಕಾರಿ ಧಮ್ಕಿ ಹಾಕಿದ್ದಾನೆಂದು ರೈತ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.



ತಾಲೂಕಿನ ರೈತ ಹರೀಶ್ ತಮ್ಮ ಜಮೀನಿನ ಸರ್ವೇಸ್ಕೆಚ್ ಮಾಡಲುಅರ್ಜಿ ಹಾಕಿದ್ದಾಗ ಸ್ಥಳಕ್ಕೆ ಬಂದಿದ್ದ ಸರ್ವೆಯರ್ ಪದ್ಮಜಾ ಅವರು 12ಸಾವಿರ ರೂ. ಹಣ ಕೇಳಿದ್ದರು. ಹಣ ತಲುಪಿಸಲು ಹುಡುಗನ ನಂಬರ್ ಸಹ ನೀಡಿದ್ದರು. ಈ ವಿಚಾರದಲ್ಲಿ ದಾಖಲೆ ಸಹಿತ ಎಡಿಎಲ್ಆರ್‌ಗೆ ದೂರು ನೀಡಲಾಗಿತ್ತು. ಶಾಸಕರು ಸಹ ಕ್ರಮಕ್ಕೆ ಸೂಚನೆ ನೀಡಿದ್ದರು. ಎಡಿಎಲ್ ಆರ್ ಸಂಪೂರ್ಣ ವರದಿಯನ್ನು ಡಿಡಿಎಲ್ಆರ್ ಗೆ ಕಳುಹಿಸಿ ಕ್ರಮಕ್ಕೆ ಸೂಚನೆ ನೀಡಿದ್ದರು.ಆದರೆ, ತನಿಖೆಯ ನೆಪದಲ್ಲಿ ರೈತನಿಗೆ ನೋಟಿಸ್ ನೀಡಿದ ಡಿಡಿಎಲ್ಆರ್ ವಿಚಾರಣೆಗೆ ಬಂದ ರೈತನನ್ನು ಆರೋಪಿಯಂತೆ ಕಾಣುವ ಜತೆಗೆ ಕಚೇರಿ ಸಿಬ್ಬಂದಿಗಳು ಸರ್ವೇಯರ್ ಪದ್ಮಜಾ ಪರ ಮಾತನಾಡಿ ದಮ್ಕಿ ಹಾಕಿದ್ದಾರೆಂದು ಆಪಾದಿಸಲಾಗಿದೆ. ಡಿಡಿಎಲ್ಆರ್ ಕಚೇರಿಗೆ ವಿಚಾರಣೆಗೆ ಹೋಗಿದ್ದ ರೈತ ಹರೀಶ್‌ಗೆ ಡಿಡಿಎಲ್ಆರ್ ಕಚೇರಿ ಅಧಿಕಾರಿ ಎಚ್.ನಾಗೇಶ್ ಎಂಬುವವರು, ನಿಮ್ಮ ಬಳಿ ಹಣ ಕೇಳಿದ್ದಾರೆ ತಾನೆ ಪಡೆದಿಲ್ಲವಲ್ಲ, ಏಕೆ ದೂರುಕೊಟ್ಟು ಅಲೆದಾಡುತ್ತೀರಾ, ಯಾರು, ಮಾಡಿದ ತಪ್ಪು ಏನು ಮಾಡಿಲ್ಲ, ಎಲ್ಲರೂ ಅವರೇ ಹೋಗಪ್ಪ, ಮುಂದೆ ಸಮಸ್ಯೆ ಅನುಭವಿಸಬೇಡ ಎಂದು ಧಮ್ಕಿ ಹಾಕಿದ್ದಾರೆಂದು ರೈತ ಹರೀಶ್ ಆರೋಪಿಸಿದ್ದಾರೆ. ಡಿಡಿಎಲ್ಆರ್ ರೈತನಿಗೆ ಎರಡು ಬಾರಿ ನೋಟಿಸ್ ನೀಡಿದ್ದಾರೆ. ವಿಚಾರಣೆಗೆ ಹೋದ ರೈತನನ್ನು ಮೇ 6ರಂದು ಡಿಡಿಎಲ್ಆರ್ ಇಲ್ಲ ಎಂದು ಮೇ16 ರಂದು ದಿನಾಂಕ ನೀಡಿ ಕಳುಹಿಸಿದ್ದರು. ಮೇ 16ರಂದು ವಿಚಾರಣೆಗೆ ಹಾಜರಾದ ರೈತನಿಗೆ ಧಮ್ಕಿ ಹಾಕಿದ್ದಾರೆ. ಇದರ ಜತೆ ಮೇ18ಕ್ಕೆ ದಿನಾಂಕ ಮುಂದೂಡಿ ಕಳುಹಿಸಿದ್ದಾರೆಂದು ದೂರಿದರು.

ಮೊದಲ ಬಾರಿ ಹಾಜರಾಗಿದ್ದ ಸರ್ವೇಯರ್ ಪದ್ಮಜಾ, ಮೇ 16ರಂದು ವಿಚಾರಣೆಗೆ ಬಂದಿಲ್ಲ, ಕಚೇರಿ ಅಧಿಕಾರಿಗಳು ಲಂಚ ಕೇಳಿದ ಪದ್ಮಜಾಗೆ ಆದ್ಯತೆ ನೀಡಿದ್ದಾರೆ. ರೈತರು ಅಲೆದು ಅಲೆದು ದೂರು ವಾಪಸ್ ಪಡೆದುಕೊಳ್ಳಲಿ ಎಂಬುದಾಗಿ ಅಲೆಸುತ್ತಿದ್ದಾರೆಂದು ರೈತರು ಆರೋಪಿಸಿದರು.

ಲಂಚ ಕೇಳಿದವರ ವಿರುದ್ಧ ಕ್ರಮವಿಲ್ಲ

ವಿಚಾರಣೆಗೆ ಕರೆದು ಧಮ್ಕಿ ಹಾಕಿ ಹೆದರಿಸುವ ಕೆಲಸ ಮಾಡುವುದು ಸರಿಯಲ್ಲ, ದೂರು ಕೊಟ್ಟ ರೈತನನ್ನು ಎಷ್ಟು ಬಾರಿ ಡಿಡಿಎಲ್ ಆರ್ ಅಲೆದಾಡಿಸುತ್ತಾರೆ. ಇಂತಹವರು ಲಂಚ ಕೇಳಿದವರ ಪರವಾಗಿ ಡಿಡಿಎಲ್ಆರ್ ಕಚೇರಿ ಕೆಲಸ ಮಾಡುವ ಕಾರಣ, ನನಗೆ ಆತಂಕವಿದೆ. ಆದ್ದರಿಂದ ಮುಂದಿನ ಯಾವುದೇ ವಿಚಾರಣೆಗೆ ನಾನು ಹೋಗುವುದಿಲ್ಲ, ಕಂದಾಯ ಸಚಿವರಿಗೆ ದೂರು ನೀಡುವುದಾಗಿ ರೈತ ಹರೀಶ್ ಹೇಳಿದರು.

ಸಚಿವ ಜಮೀರ್ ಅಹಮದ್ ಖಾನ್ ಭೇಟಿ| ವೇದಿಕೆ ಸ್ಥಳ ಪರಿಶೀಲನೆ

ಕ್ರೀಡಾಂಗಣ ಭೂಮಿ ಪೂಜೆಗಾಗಿ ಸಿದ್ಧತೆ

ಆನೇಕಲ್: ತಾಲೂಕಿನ ಸೂರ್ಯನಗರ ನಾಲ್ಕನೇ ಹಂತದಲ್ಲಿ ನಿರ್ಮಾಣವಾಗುತ್ತಿರುವ ಅಂತಾರಾಷ್ಟ್ರೀಯ ಕ್ರೀಡಾಂಗಣವನ್ನು ಮೇ 23ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.



ಸೂರ್ಯಸಿಟಿ ನಾಲ್ಕನೇ ಹಂತದಲ್ಲಿ ನಿರ್ಮಾಣವಾಗುತ್ತಿರುವ ಅಂತಾರಾಷ್ಟ್ರೀಯ ಕ್ರೀಡಾಂಗಣದ ಭೂಮಿ ಪೂಜೆ ಕಾರ್ಯಕ್ರಮದ ಸಂಬಂಧ ಅಧಿಕಾರಿಗಳೊಂದಿಗೆ ವೀಕ್ಷಣೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿ, ಅಂತಾರಾಷ್ಟ್ರೀಯ ಕ್ರೀಡಾಂಗಣದ ಭೂಮಿ ಪೂಜೆಗೆ ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಸೇರಿದಂತೆ ರಾಜ್ಯದ ಸಚಿವ ಸಂಪುಟವೇ ಭಾಗಿಯಾಗಲಿದೆ. ಇವರ ಜತೆಗೆ ಕ್ರಿಕೆಟ್ ದಿಗ್ಗಜ್ಜರಾದ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜವಗಲ್ ಶ್ರೀನಾಥ್ ಸೇರಿ ಹಲವು ಕ್ರೀಡಾಪಟುಗಳು ಭಾಗಿಯಾಗಲಿದ್ದಾರೆಂದರು.

ಸೂರ್ಯನಗರ ನಾಲ್ಕನೇ ಹಂತಕ್ಕೆ ಭೂ ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭದಲ್ಲಿಯೇ ಈ ಭಾಗದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣಕ್ಕೆ ಬಿಜೆಪಿ ಸರಕಾರವಧಿಯಲ್ಲಿ ವಸತಿ ಸಚಿವ ಸೋಮಣ್ಣ ಮನವಿ ಸಲ್ಲಿಸಿದ್ದೆವು. ಅವರು ಸಬೂಬು ಹೇಳುತ್ತಾ ಮುಂದೂಡಿದ್ದರು. ಆದರೆ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಬಳಿ ಮಾಜಿ ಸಂಸದ ಡಿ.ಕೆ. ಸುರೇಶ್ ಜತೆಗೂಡಿ ಪ್ರಸ್ತಾಪ ಮಾಡಿ ಯಶಸ್ವಿಯೂ ಆಗಿದ್ದೇವೆ. ಈ ಕ್ರೀಡಾಂಗಣದಿಂದ ಆನೇಕಲ್ ತಾಲೂಕು ಸಾಕಷ್ಟು ಅಭಿವೃದ್ಧಿ ಕಾಣಲಿದೆ ಎಂದು ಅವರು ಹೇಳಿದರು.

ಶಾಸಕ ಬಿ.ಶಿವಣ್ಣ, ಬಮುಲ್ ನಿರ್ದೇಶಕ ಆರ್. ಕೆ.ರಮೇಶ್, ಗೃಹ ಮಂಡಳಿ ಅಧ್ಯಕ್ಷ ಶಿವಲಿಂಗೇಗೌಡ, ಗೃಹ ಮಂಡಳಿ ಆಯುಕ್ತ ಕೆ.ಎ.ದಯಾನಂದ್, ಇಂಡ್ಲವಾಡಿ ನಾಗರಾಜ್, ಅಚ್ಯುತರಾಜ್, ಕಾರ್ಯಪಾಲಕ ಅಭಿಯಂತರರಾದ ಶಂಭುಲಿಂಗ, ಮಹದೇವಪ್ಪ ಮತ್ತಿತರರಿದ್ದರು.

ಸಾರ್ವಜನಿಕ ಪ್ರಕಟಣೆ

ಶರಣ್ ಅಂಡ್ ಅಸೋಸಿಯೇಟ್ಸ್, ವಕೀಲರು ಮತ್ತು ಅಡ್ವೊಕೇಟ್ಸ್, ನಂ. 141/2/1, 4ನೇ ಮಹಡಿ, 7ನೇ ಮೇನ್, 33ನೇ ಕ್ರಾಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-560011, ಮೊಬೈಲ್ ನಂ. : 7019653244

PUBLIC NOTICE

General Public is hereby informed that my client **Mr. M.P. ANTHONY,** S/o. Mr. M.D. Paul, No. 779, 8th Cross, Vinobha Nagar, K.G. Halli, Bangalore-560045, is the absolute owner of property bearing **Municipal No. New 9,** (earlier Site No.1, Premises No. 779, in a portion of House List Assessment No. 83, Khata No. 254), situated at 8th Cross, **VINOBHA NAGAR,** in Kadugondanahalli Village, Kasaba Hobli, Bangalore North Taluk, Bangalore, under BBMP, Ward # 30, of which the 1st Page Original of his Absolute Sale Deed vide document No. BLN-1-11332-2004-05 in Book-I, stored in CD No. BLND13, dated 15.06.2004, in the Office of the Sub-Registrar, Bangalore North Taluk, Bangalore, has **LOST/MISPLACED,** pertaining to the above said property.

If the above said Original 1st Page of the above Absolute Sale Deed is found by any person/s, please inform or return the same to the undersigned **Advocate within 7 days,** finders will be suitably rewarded, subject to compliance with other statutory and legal formalities.

Sd/- **MUKTHAR AHMED, M.Com., LL.B.,**
No. 140, 2nd Floor, M.M. Road, Frazer Town, Bangalore-560005, Ph : 99454-11052.
Place : Bangalore, Dated: 20-05-2026

IN THE COURT OF THE SENIOR CIVIL JUDGE AND JMFC AT HOSAKOTE

OS No. 2181/2022

BETWEEN: Smt. Sumithramma. N ... PLAINTIFF

AND: Smt. Anitha and others **...DEFENDANTS**

APPLICATION UNDER ORDER 5 RULES 20 READ WITH SECTION 151 OF CIVIL PROCEDURE CODE FOR APPEARANCE OF DEFENDANT No.3

DEFENDANT No:3: Smt. P.S Veena, D/o Late P.S Sathyanarayana, Aged about 27 years, R/at:- Poojena Agrahara Village, Kasaba Hobli, Doddagattiganabbe Post, Hosakote Taluk, Bangalore Rural District.

This is to inform to the defendant No.3 that the plaintiffs are filed suit for Specific performance of contract relief against all of you and earlier the Hon'ble court had ordered summons through Court and by way of RPAD and you all avoided the service notice and Hon'ble court has ordered and fixed the date on **25-06-2026** at 11.00 AM to all of defendant be present personally or by a pleader before the Hon'ble court on date fixed to contest otherwise the court will call out and place exparte.

SCHEDULE PROPERTY

All the piece and parcel of residential house RCC building along with vacant site Janjaru No,387, S.L No,387, property No,18 measuring to an extent of 19x21 feets, situated at, Poojena Agrahara Village, Kasaba Hobli, Hosakote Taluk, Bangalore Rural District. East by: Land of P.C Nagaraj, West by: Land of Mari puttappa, North by: Land of Nanjappa, South by: Land of P.C Nagaraj

This summons have been ordered by the above Hon'ble court on dated **24-04-2026** with sign and seal.

By order of the court, Sheristedar, Senior Civil Judge & JMFC Hosakote.

ಸಾರ್ವಜನಿಕ ಪ್ರಕಟಣೆ

ಶ್ರೀ. ಯೋಗೇಶ್. ಕೆ.ಎಂ., ವಕೀಲರು
ಕೆ.ಎಂ.ವೈ. ಅಸೋಸಿಯೇಟ್ಸ್
ನಂ-197, 1ನೇ ಮುಖ್ಯರಸ್ತೆ, ಕಂಗೇರಿ ಉಪನಗರ, ಬೆಂಗಳೂರು -560060.
ಮೊ: 9844566578.
ದಿನಾಂಕ: 17/05/2026

BEFORE THE ASSISTANT COMMISSIONER BANGALORE SOUTH SUB DIVISION AT BANGALORE

R.A. No. 282/2025

BETWEEN: Sri.Krishnappa, S/o. Late Ramaiah, aged about 74 years, R/at No.2307, 1st Cross, BDA Layout, Vimanapura, HAL 3rd Stage, Bangalore - 560017 ...**APPELLANT**

AND: 1. The Thasildar, Anekal Taluk, Bangalore District. **2. Sri. Holasalappa,** S/o Rangappa, aged about 85 years, R/at Bilvaradahalli Village, Jigani Hobli, Anekal Taluk, Bangalore District ...**RESPONDENTS**

PUBLIC NOTICE

Whereas the Appellant above named has instituted a appeal in this Court, against respondents and may be pleased to pass an order in favor of the Appellant and continue his name in the computerized RTC's to an extent of 06 guntas in sy.no. 6/4 of Bilvaradahalli Village, Jigani Hobli, Anekal Taluk, Bangalore district, hence take the notice that if any interested person in respect of above property, are hereby called upon to appear before this Hon'ble court either personally or through an advocate duly instructed on this day of **05-06-2026** at 11:00 A.M, otherwise matter will be heard and decided Ex-Parte.

Given under my hand & seal of the Court on 30-04-2026 at Anekal.

By order of the Court, Sub-Division Magistrate, Bangalore South Sub-Division, Bangalore.

Advocate for Appellant: **MAMATHA .V**
No.43, Behind Court, Mariyappa Layout," Anekal Town and Taluk, Bangalore District.

ಜಾಹೀರಾತಿಗಾಗಿ ಸಂಪರ್ಕಿಸಿ: **9845438807, 9611755391**

ಕ್ರಿ.ಮಿಸ್.ನಂ. 234/2026

ಶ್ರೀ. ಮಂಜುನಾಥ್. ಪಿ. ವಕೀಲರು

ಕ್ರಿ.ಮಿಸ್.ನಂ. 236/2026

ಶ್ರೀ. ಮಂಜುನಾಥ್. ಪಿ. ವಕೀಲರು

BEFORE THE ASSISTANT COMMISSIONER BANGALORE SOUTH SUB DIVISION AT BANGALORE

R.A. No. 283/2025

BETWEEN: Sri.Krishnappa, S/o. Late Ramaiah, aged about 74 years, R/at No.2307, 1st Cross, BDA Layout, Vimanapura, HAL 3rd Stage, Bangalore - 560017 ...**APPELLANT**

AND: 1.The Thasildar, Anekal Taluk, Bangalore District. **2. Sri.C.Godappa,** S/o Chikkanna, aged about 80 years, **3. Sri. C. Ramaiah,** S/o Chikkanna, aged about 70 years, Respondent no.2 and 3 are R/at Kasarguppe village, Jigani Hobli, Anekal Taluk, Bangalore District ...**RESPONDENTS**

PUBLIC NOTICE

Whereas the Appellant above named has instituted a appeal in this Court, against respondents and may be pleased to pass an order in favor of the Appellant and continue his name in the computerized RTC's to an extent of 0.10 guntas in sy.no.6/4 of Bilvaradahalli Village, Jigani Hobli, Anekal Taluk, Bangalore district, hence take the notice that if any interested person in respect of above property, are hereby called upon to appear before this Hon'ble court either personally or through an advocate duly instructed on this day of **05-06-2026** at 11:00 A.M, otherwise matter will be heard and decided Ex-Parte.

Given under my hand & seal of the Court on 30-04-2026 at Anekal

By order of the Court, Sub-Division Magistrate, Bangalore South Sub-Division, Bangalore.

Advocate for Appellant: **MAMATHA .V**
No.43, Behind Court, Mariyappa Layout," Anekal Town and Taluk, Bangalore District.

BEFORE THE ASSISTANT COMMISSIONER BANGALORE SOUTH SUB DIVISION AT BANGALORE

R.A.No. 284/2025

BETWEEN: Sri.Krishnappa, So Late Ramaiah, aged about 74 years, R/at No.2307, 1st Cross, BDA Layout, Vimanapura, HAL 3rd Stage, Bangalore - 560017 ...**APPELLANT**

AND: 1.The Thasildar, Anekal Taluk, Bangalore District. **2. Sri.Puttaswamy.N,** S/o late Narayanappa, aged about 53 years, R/at Naganayakanahalli village, Marasuru Post, Kasaba Hobli, Anekal Taluk, Bangalore District ... **RESPONDENTS**

PUBLIC NOTICE

Whereas the Appellant above named has instituted a appeal in this Court, against respondents and may be pleased to pass an order in favor of the Appellant and continue his name in the computerized RTC's to an extent of 0.09 guntas in sy.no.6/4 of Bilvaradahalli Village, Jigani Hobli, Anekal Taluk, Bangalore district, hence take the notice that if any interested person in respect of above property, are hereby called upon to appear before this Hon'ble court either personally or through an advocate duly instructed on this day of **05-06-2026** at 11:00 A.M, otherwise matter will be heard and decided Ex-Parte.

Given under my hand & seal of the Court on 30-04-2026 at Anekal

By order of the Court, Sub-Division Magistrate, Bangalore South Sub-Division, Bangalore.

Advocate for Appellant: **MAMATHA .V**
No.43, Behind Court, Mariyappa Layout," Anekal Town and Taluk, Bangalore District.

CHANGE OF NAME

I, **DNYANESHWAR MHATRE,** aged about 51 years, S/o. Eknath Mhatre, No. 1002, Block-B, SRI Ram Sahana Apartment Nagenahalli Puttenahalli, Bengaluru-560064, do hereby declare that I have changed my name from **DNYANESHWAR EKANATH MHATRE** to **DNYANESHWAR MHATRE,** vide affidavit dated 18.05.2026, sworn to before K.V. Mani, Advocate & Notary, Govt. of India, Bengaluru.

IN THE COURT OF THE 6th CITY CIVIL SESSIONS JUDGE AT BENGALURU

P & SC No. 264 of 2026

BETWEEN : Smt. Mallamma B D/o Late Basavarajaiah W/o NijalingaMurty, Aged about 62 years, R/at. No.46, 5th main, Teachers Colony, Shankar Nagar, Bengaluru North, Mahalakshmi puram Layout, Bengaluru-560086

...PETITIONER

AND: NIL ...RESPONDENT

PUBLIC NOTICE

Whereas, the Petitioners above named has filed an application under petition section 270 and 276 of The Indian Succession Act; for issuance of probate before this Hon'ble court. In respect of below mentioned schedule property in favour of the petitioner, the schedule property has held by late Umapathi K N who died on 20.02.2026 the uncle of the petitioner herein.

The court has fixed **02 day of July 2026 at 11.00 A.M** for the hearing of said application, interested persons are hereby called upon to on that day in person or by a pleader and file their objections if any, failing wherein the matter will be heard and determined ex-parte.

SCHEDULE PROPERTY

All that piece and parcel of the SECOND FLOOR portion of the A schedule property consisting of two units, one unit consisting of one Hall, Two rooms, one Kitchen and one Bath room and toilet another consisting of one hall and a kitchen and an attached bath room and also undivided share in the land area measuring 250 (two hundred fifty) square feet, together with the right to use to common space such as staircase, sump tank and common to all Property bearing No. 46, situated in Bengaluru City, 4th cross, 5th main Teachers Colony Shankarnagra, Nandini Layout, Bengaluru-560096., bounded as follows:

East by : House property bearing no 56 ; **West by :** Property of one shivamma ; **South by** : Road ; **North by** : Property of devaraju and his brother;

By the order of the Court, Senior Sheristedar, City Civil Court, Bengaluru

Mr. Karthik .N and Jayanthi M.S Advocates
No.24, 2nd Floor, 1st Main, Sheshadripuram, Bangalore-20. Mob: 7760557932
Mail Id: kk2951818@gmail.com.

BEFORE THE MOTOR ACCIDENT CLAIMS TRIBUNAL AT BENGALURU (SCCH-11)

M. V. C. No. 7216 of 2025

BETWEEN : Mr. Narayana :**Petitioners**

AND : Mr. N Suresh and another :**Respondents**

Notice to Respondent No.1

N Suresh S/o Nanjunda Shastry R/at, # 140, 8th Cross, 6th Main Road, Sharadha Nagara, Yelahanka New Town, Yelahanka Bangalore North, Bengaluru -560 064 (RC owner of the Scooter bearing No. KA50 EJ 9131)

Whereas the petitioner above named have filed a petition against you seeking compensation of Rs.15,00,000/- for the injuries suffered by him in Road Traffic Accident on 16-09-2025 at about 03-30 P.m. near Bangalore one, Vidyaranyapura, Bengaluru. involving your Scooter bearing No. KA 50 EJ 9131, owned by you. You are hereby summoned to appear before this court in person or by a pleader on **25/05/2026 at 11.00 A.M.** to answer the same, failing which the petition will be disposed off ex-parte.

Given under my hand and seal of this court this 23rd day of April 2026.

By Order of the Court
Sd/- Assistant Registrar
Court of Small Causes, Bangalore

Advocate for Petitioner Shankar A. C.
SMM Law Associates
No.40, "S" 2ND Main, 1st Stage, 2nd Phase, Chandra Layout, Bangalore -560 040

BEFORE THE EX-OFFICIO DEPUTY DIRECTOR OF LAND RECORDS BENGALURU URBAN DISTRICT AT BENGALURU

Survey Appeal. No. 32/2026

BETWEEN : Smt. K.M. SHWEETHA, And others ...**Appellants**

AND : THE THASILDAR And others ...**Respondents**

NOTICE/ SUMMONS TO RESPONDENT No.8, 9,10,12 to 16

Sri. P. Muniraju, S/o Late Pillanna, Aged about 55 Years. ...**Respondent No.8**
Sri. P. Ramanjini S/o Late Pillanna, Aged about 53 Years. ...**Respondent No.9**
Sri. P. Umesh, S/o Late Pillanna, Aged about 50 Years. ...**Respondent No.10**
Smt. Subbamma, W/o Late Ramaninappa, Aged about 45 Years. ...**Respondent No.12**
Smt. Anjanamma W/o Late Ramaninappa, Aged about 43 Years. ...**Respondent No.13**
Smt. Gayithri W/o Late Muniraju, Aged about 45 Years. ...**Respondent No.14**
SRI. Ambresh N S/o Narayanaswamy, Aged about 40 years, ...**Respondent No.15**
SRI KIRAN KUMAR N, S/o. Narayanaswamy aged about 44 years ...**Respondent No.16**

All are residing at Kodagalahatti Village, Hunasamarahalli Post, Jala Hobli, Yelahanka Taluk, Bengaluru.

WHEREAS, the Appellants above named has preferred the above Appeal against all of you and other respondent before the Ex-Officio Deputy Director of Land Records Bengaluru Urban District At Bengaluru, seeking the relief of Cancellation of the Phodi and other consequential reliefs. You are hereby summoned to appear before the Ex-Officio Deputy Director of Land Records Bengaluru Urban District At Bengaluru in Person/s or through a pleader **on 02.06.2026 at 11.00 A.M** to answer the same, failing which the suit will be heard and decide in your absence.

Given under my hand and seal of this Court at Bengaluru on the day of 28.04.2026.

By Order of the Court, ಪದನಿಮಿತ್ತ ಉಪ ನಿರ್ದೇಶಕರು, ಭೂದಾಖಲೆಗಳು, ಬೆಂಗಳೂರು ನಗರ ಜಿಲ್ಲೆ.

ADVOCATE OF APPELLANTS : **S. Harish Kumar** office at No. 11, 8th Cross, near Bannappa Park, Cubbonpet, Bengaluru-560002.

ತೋಟಗಾರಿಕೆ ಇಲಾಖೆ

ಸಂಖ್ಯೆ: ಹಣ್ಣು/ತರಕಾರಿ(2)/153/2026-27
ದಿನಾಂಕ: 18.05.2026

-: ಸಾರ್ವಜನಿಕ ಪ್ರಕಟಣೆ :-

IN THE COURT OF THE PRL. CIVIL JUDGE AND JMFC AT SHIDLAGHATTA

Crl. Miss. No. 22/2026

BETWEEN Sri. GANGADHARA. M, S/o late Muniyappa, Aged about 36 years, Residing at: Muthuru Village, Jangamakote Hobli, Shidlaghatta Taluk, Chikkaballapura District ...**Petitioner**

AND THE THASHILDAR, Shidlaghatta Taluk, Shidlaghatta. ...**Respondent**

DRAFT PAPER PUBLICATION

The petitioner has field this petition for grant of death certificate of father of petitioner by name **Muniyappa** W/o Gangappa, he died on 15-02-2021 in his residence at Muthuru Village, Jangamakote Hobli, Shidlaghatta taluk. The respondent as given non availability certificate in respect of death of Muniyappa.

If any persons have any objections regarding the issue of death certificate, they can appear before the Hon'ble court in person or duly instructed by his advocate on 22.06.2026 at 11.00 'O' clock. If they failed to appear, the Hon'ble court has proceed and decide the matter according to law.

Give by the Hon'ble court with seal and signature.

By Order of the Court
Chief Ministerial officer, Prl. Civil Judge and JMFC At Shidlaghatta

Advocate for petitioner: **C.K. SUDHAKARA**
Advocate, Shidlaghatta

CHANGE OF NAME

I **Basavaraju.U** S/o Ugrappa, aged about 37 years, residing at # 35, Lingambhudipalya Village, Srirampura post, Mysore.

I have changed my minor son name **SHISHIR.B** to **AARAV YUVARAJ.B,** Vide affidavit dated 20/05/2026, Sworn before Advocate and notary **Saraswathi J,** Govt. of India, Mysore.

BEFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.

Dispute No. DRB-III/CHITS/ 135/2025-26.

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9 of Palace Ground, Bellary Main Road, Sadashiva Nagar, BANGALORE-560 080.
Branch: BANASHANKARI
Represented by its Foreman & Branch Manager, **Mr. K. BALACHANDRAN.**
.... **DISPUTANT**

AND: Ms. K. LEKHA & ORS.

1. Ms. K. LEKHA, W/o Mr. C. Rukmangada, Major, Prop: M/s. Yohish Enterprises, F No. B-308, Gopalan Olympia, Kumbalagodu, Mysore Road, BENGALURU - 560 074.

2.Mr. C. RUKMANGADA, S/o Mr. N. S. Chikkanna, Major, Prop: M/s. S. R. Enterprises, F No. B-308, Gopalan Olympia, Kumbalagodu, Mysore Road, BENGALURU - 560 074.

3.Mr. K. SUNILMURTHY, S/o Mr. A. P. Krishnamurthy, Major, Prop: M/s. Vijaya Enterprises, No. 5, 2nd Cross, Cauvery Nagar, Tataguni, BENGALURU - 560 082.

4. Mr.S. SUMANTH, S/o Mr. K. Shankar Shetty, Major, Prop: M/s. Sri Kadamba Sports & Fitness, No. 60/A, G Floor, 1st N Block, Dr. Rajkumar Road, Rajajinagar, BENGALURU - 560 010.

5. Ms. B. C. USHARANI, D/o Mr. P. B. Chandrappa, Major, Senior Software Test Engineer, Simplify 3X Software Pvt. Ltd., No. 406, 2nd Floor, 7th Main, HRBR Layout, Banaswadi, BENGALURU - 560 043.

6. Mr. S. NARENDRA, S/o Srikantaiah, Major, Prop:Ashley Tours & Travels, # 417, 5th Main, West Of Chord Road, Mahaganapathi Nagar, BENGALURU - 560 010.

.............**OPPONENTS.**

SUIT NOTICE BY PAPER PUBLICATION TO OPPONENT Nos. - 1 To 6.

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs.6,20,521/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent Nos. 1 to 6 by S.P.A.D. have been returned unserved. Therefore, the Opponent Nos. 1 to 6 named above are therefore hereby directed to appear before me at the Branch Office of the Disputant Company at Banashankari, at Site # 287, II Floor, Banashankari LayOut, 3rd Stage, 4th Phase, 7th Block, Bangalore - 560 085 on 5-06-2026 at 3:00 PM with all relevant documents failing which the above dispute will be decided as per law, in their absence.

Given Under my hand & seal on 11.05.2026.

Gangadhara M J
Nominee of Deputy Registrar of Chits, III Zone, Bangalore.

ADVOCATE FOR DISPUTANT:
K. R. DINAKAR ADVOCATE
#66, 4th Cross,Ashok Nagar, Near N. R. Colony, BANGALORE-560 050. Mob: 94485 39699.

Bluspring

Infrastructure. People. Progress.

ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್

Corporate Identity Number (CIN): L81100KA2024PLC184648
ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: 3/3/2, ಬೆಳ್ಳಂದೂರು ಗೇಟ್, ಸರ್ಜಾಪುರ ಮುಖ್ಯರಸ್ತೆ, ಬೆಂಗಳೂರು-560 103, ಕರ್ನಾಟಕ, ಭಾರತ; ದೂ.: +91 80 6105 6001
ವೆಬ್‌ಸೈಟ್: www.bluspring.com; ಇ-ಮೇಲ್: investor@bluspring.com

ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಕ್ರೋಢೀಕೃತ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶಗಳು

(ಪ್ರತಿ ಶೇರಿನ ದತ್ತಾಂಶ ಹೊರತುಪಡಿಸಿ ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಅಂತ್ಯಗೊಂಡ ತ್ರೈಮಾಸಿಕ 31.03.2026 (ಅಪರಿಶೋಧಿತ)	ವರ್ಷಾಂತ್ಯ 31.03.2026 (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	8,647.98	33,820.34
ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆ, ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ಮುನ್ನ)	134.31	122.01
ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ)	79.56	(244.33)
ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು / ಅಥವಾ ಅಸಾಮಾನ್ಯ ಐಟಂಗಳ ನಂತರ)	38.27	(230.40)
ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯ ಕ್ರೋಢೀಕೃತ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(0.16)	(335.79)
ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಪ್ರತಿ ಶೇರಿನ ಮುಖ ಬೆಲೆ ರೂ. 10/-)	1,491.32	1,491.32
ಮೀಸಲುಗಳು (ಮರುಮೌಲ್ಯೀಕೃತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿ ತೋರಿಸಿರುವಂತೆ *	-	5,190.88
ಪ್ರತಿ ಶೇರಿನ ಗಳಿಕೆ (ರೂ.ಗಳಲ್ಲಿ) (ಪ್ರತಿ ಶೇರಿನ ಮುಖ ಬೆಲೆ ರೂ. 10/-) (ಮುಂದುವರೆದ ಕಾರ್ಯಾಚರಣೆಗಳು)	(ವಾರ್ಷಿಕ ಗೊಳಿಸಿಲ್ಲ)	(ವಾರ್ಷಿಕ ಗೊಳಿಸಿದೆ)
ಮೂಲ	0.28	(1.03)
ವಿಭಜಿತ	0.27	(1.03)

* ಮಾರ್ಚ್ 31, 2026ರಂತೆ ಮರುಮೌಲ್ಯೀಕೃತ ಮೀಸಲು ಹೊರತುಪಡಿಸಿ ಮೀಸಲು ರೂ. 5,190.88 ಮಿಲಿಯನ್ ಆಗಿರುತ್ತದೆ.

ಸೂಚನೆ:

1. ಮೇಲಿನ ಸಾರವನ್ನು 2015ರ ಸೆಬಿಯ ನಿಯಂತ್ರಣಗಳ (ಲಿಸ್ಟಿಂಗ್ ಬಾಧ್ಯತೆ ಮತ್ತು ಘೋಷಣೆಗಳ ಅವಶ್ಯಕತೆಗಳು) ನಿಯಂತ್ರಣ 33ರಡಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾಗಿರುವ ಅಂತ್ಯಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ಅಂತ್ಯಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ **www.bseindia.com** ಮತ್ತು **www.nseindia.com** ಮತ್ತು ಕಂಪೆನಿಯ ವೆಬ್‌ಸೈಟ್ **www.bluspring.com** ನಲ್ಲಿ ಸಹ ಲಭ್ಯವಿದೆ.
2. ಕಂಪೆನಿಗಳ ಕಾಯ್ದೆ, 2013ರ ಸೆಕ್ಷನ್ 133ರ ಅಡಿಯಲ್ಲಿ ನಿಗದಿಪಡಿಸಲಾದ ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳಲ್ಲಿ ನಿಗದಿಪಡಿಸಲಾದ ...
3. ...
4. ...

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಅಂತ್ಯಗೊಂಡ ತ್ರೈಮಾಸಿಕ 31.03.2026 (ಅಪರಿಶೋಧಿತ)	ವರ್ಷಾಂತ್ಯ 31.03.2026 (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	5,953.26	23,117.63
ತೆರಿಗೆಯ ಮುನ್ನ ಅವಧಿಯ ನಿವ್ವಳ ಲಾಭ/(ನಷ್ಟ)	222.28	59.26
ತೆರಿಗೆಯ ನಂತರ ಅವಧಿಯ ನಿವ್ವಳ ಲಾಭ/(ನಷ್ಟ)	217.55	167.99

ಸ್ಥಳ : ಬೆಂಗಳೂರು
ದಿನಾಂಕ : 19.05.2026

ಮಂಡಳಿಯ ಆದೇಶದ ಮೇರೆಗೆ
DIN: 09808793

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು-560001, ಕರ್ನಾಟಕ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ದಿನಾಂಕ: 20.05.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

1. ಕಂಪನಿಯ ಹೆಸರು ಮತ್ತು ವಿಳಾಸ
2. ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 7/*/* ಸಮೀಪದಲ್ಲಿರುವ ...
3. ಉದ್ದೇಶಿತ ಯೋಜನೆಯ ವಿವರ : ವಾರ್ಷಿಕ 26,100 ಟನ್ ಉತ್ಪಾದನಾ ಸಾಮರ್ಥ್ಯದ ...
4. ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : ದಿನಾಂಕ : 22.06.2026 (ಸೋಮವಾರ), ಸಮಯ : ಬೆಳಿಗ್ಗೆ 11:30 ಗಂಟೆಗೆ ...
5. ...

https://kspcb.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಟಿ-1/2026-27/08 ದಿ: 19.05.2026

ಟೆಂಡರ್ ಪ್ರಕಟಣೆ-08/2026-27 (ಕೆ.ಪಿ.ಪಿ.ಪಿ ಮೂಲಕ)

ಕಾಮಗಾರಿಯ ಹೆಸರು: EMPANELMENT FOR PROJECT MANAGEMENT CONTRACT (PMCTHIRD PARTY INSPECTION FOR QUALITY OF WORKS) UNDER DIFFERENT HEAD OF ACCOUNTS IN PRE DIVISION KARWAR IN UTTARA KANNADA DISTRICT, RDPR/ 2026-27/SE3907, ...

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ, ವಿಭಾಗ, ಭದ್ರಾವತಿ

ಫೋನ್ : 08282-271063 ಫ್ಯಾಕ್ಸ್ : 08282-271063
E-mail : eeknnlbdvt@yahoo.co.in

ದಿನಾಂಕ: 15.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(1) ಟೆಂಡರ್ ಭಾಗವಹಿಸಲು ... 20.05.2026, ರಿಂದ 02.06.2026 ರವರೆಗೆ 17.30 ಗಂಟೆ. (2) Pre-Bid Meeting : 25.05.2026 ರಂದು 11.00 ಗಂಟೆ ... (3) ... 03.06.2026 ರಂದು 17.30 ಗಂಟೆ (4) ... After obtaining approval of technical bid from competent authority ... 08 ತಿಂಗಳು (ಮಳೆಗಾಲ ಸೇರಿ) (6) ... ರೂ.304.70 ಲಕ್ಷಗಳು (7) ಇ.ಎಂ.ಡಿ. ಮೊತ್ತ : ರೂ. 4.58/- lakhs (Rs.1.00 lakhs through e-cash and balance amt of Rs. 3.58 lakhs through e-BG) ... 8660573513.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ., ನಂ.4 ಬಿ.ಆರ್.ಎಲ್.ಬಿ.ಸಿ. ವಿಭಾಗ, ಭದ್ರಾವತಿ

EMBASSY

ಸ್ವಾಡ್ರನ್ ಡೆವಲಪರ್ಸ್ ಲಿಮಿಟೆಡ್

(ಈ ಹಿಂದೆ: ಸ್ವಾಡ್ರನ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಚೇರಿ: 14ನೇ ಮಹಡಿ, ಪಿನಾಕಲ್ ಟವರ್, ಎಂಬೆಸ್ಸಿ ಒನ್, 8, ಬಳ್ಳಾರಿ ರಸ್ತೆ, ಗಂಗಾನಗರ, ಆರ್ ಟಿ ನಗರ, ಬೆಂಗಳೂರು, ಕರ್ನಾಟಕ, ಭಾರತ, 560032
CIN : U70100KA2022PLC158620
Tel. No: 080 69354859 | Email: secretarialteam@embassyindia.com

ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ ಹಣಕಾಸು ಫಲಿತಾಂಶಗಳ ವಿವರ

(₹ ಸಾವಿರಗಳಲ್ಲಿ, ಪ್ರತಿ ಶೇರಿನ ದತ್ತಾಂಶವನ್ನು ಹೊರತುಪಡಿಸಿ)

ಕ್ರ ಸಂ	ವಿವರಗಳು	ತ್ರೈಮಾಸಿಕ ಅಂತ್ಯಕ್ಕೆ			ವರ್ಷಾಂತ್ಯಕ್ಕೆ	
		3 months ended March 31, 2026	Preceding 3 months ended Dec 31, 2025	3 months ended March 31, 2025	March 31, 2026	March 31, 2025
		ಪರಿಶೋಧಿಸದ	ಪರಿಶೋಧಿಸದ	ಪರಿಶೋಧಿಸದ	ಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	7,072.80	2,378.81	1,842.43	10,945.82	18,617.62
2	ಅವಧಿಯ ನಿವ್ವಳ ಲಾಭ/ (ನಷ್ಟ) (ತೆರಿಗೆ ಮೊದಲು, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳು)	2,962.92	1,745.39	(17,266.22)	5,456.10	(18,057.40)
3	ಅವಧಿಯ ನಿವ್ವಳ ಲಾಭ/ (ನಷ್ಟ) ತೆರಿಗೆ ಮೊದಲು, (ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	2,962.92	1,745.39	(17,266.22)	5,456.10	(18,057.40)
4	ಅವಧಿಯ ನಿವ್ವಳ ಲಾಭ/ (ನಷ್ಟ) ತೆರಿಗೆ ನಂತರ (ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	2,962.92	1,745.39	(17,266.22)	5,456.10	(18,062.11)
5	ಅವಧಿಯ ಒಟ್ಟು ವಿಸ್ತಾರದ ಆದಾಯ [ಲಾಭವನ್ನು ಒಳಗೊಂಡು / (ನಷ್ಟ) ಅವಧಿಯ (ತೆರಿಗೆಯ ನಂತರ) ಮತ್ತು ಇತರ ವಿಸ್ತಾರದ ಆದಾಯ (ತೆರಿಗೆಯ ನಂತರ)]	2,962.92	1,745.39	(17,266.22)	5,456.10	(18,062.11)
6	ಪ್ರತಿ ಶೇರಿನ ಗಳಿಕೆ (ಪ್ರತಿ ಶೇರಿಗೆ ರೂ. 10/- ಮುಖಬೆಲೆ)					
	1) ಮೂಲ (ರೂ.ಗಳಲ್ಲಿ)	296.29	174.54	(1,726.62)	545.61	(1,806.21)
	2) ದುರ್ಬಲ (ರೂ.ಗಳಲ್ಲಿ)	296.29	174.54	(1,726.62)	545.61	(1,806.21)
7	ಪಾವತಿಸಿದ ಈಕ್ವಿಟಿ ಶೇರು ಬಂಡವಾಳ (ಪ್ರತಿ ಈಕ್ವಿಟಿ ಶೇರಿಗೆ ರೂ. 10 ಮುಖಬೆಲೆ)	100.00	100.00	100.00	100.00	100.00

ಸ್ಥಳ : ಬೆಂಗಳೂರು
ದಿನಾಂಕ : 19.05.2026

ಸ್ವಾಡ್ರನ್ ಡೆವಲಪರ್ಸ್ ಲಿಮಿಟೆಡ್ ಪರವಾಗಿ
(ಈ ಹಿಂದೆ: ಸ್ವಾಡ್ರನ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/-
ರಾಜೇಶ್ ಕ್ವಿಮಲ್
ನಿರ್ದೇಶಕರು
DIN:03158687

ವಿಶ್ವದಲ್ಲೇ ಜಲಮಂಡಳಿಯಿಂದ ಅತ್ಯುತ್ತಮ ಸಾಧನೆ

- ಗ್ಲೋಬಲ್ ವಾಟರ್ ಸಮಿಟ್ ಸಮಾವೇಶ
- ಪ್ರತಿಷ್ಠಿತ ಯುಟಿಲಿಟಿ ಆಫ್ ದಿ ಇಯರ್ ಪ್ರಶಸ್ತಿಯ ಅಂತಿಮ 5ರ ಪಟ್ಟಿಯಲ್ಲಿ ಮನ್ನಣೆ

• **ಮ್ಯಾಡ್ರಿಡ್/ಬೆಂಗಳೂರು:** ಬೆಂಗಳೂರು ಜಲಮಂಡಳಿಗೆ ವಿಶ್ವಮಟ್ಟದ ಪ್ರಶಂಸೆ ದೊರೆತಿದ್ದು, ವಿಶ್ವದ ಐದು ಅತ್ಯುತ್ತಮ ಸಂಸ್ಥೆಯಲ್ಲಿ ಒಂದಾಗಿ ಆಯ್ಕೆಯಾಗಿದೆ.

ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ ಆಯೋಜಿಸಲಾಗಿರುವ ಪ್ರತಿಷ್ಠಿತ ಗ್ಲೋಬಲ್ ವಾಟರ್ ಸಮಿಟ್ -2026 ಸಮಾವೇಶದಲ್ಲಿ ಬೆಂಗಳೂರು ಜಲಮಂಡಳಿಯು ವಿಶ್ವದ 5 ಅತ್ಯುತ್ತಮ ಸಂಸ್ಥೆಗಳಲ್ಲಿ ಒಂದಾಗಿ ಆಯ್ಕೆಯಾಗುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ. ವಿಶೇಷವೆಂದರೆ, 3 ಪ್ರಮುಖ ವಿಭಾಗಗಳಲ್ಲಿ ಜಾಗತಿಕ ಟಾಪ್ 5 ಸ್ಥಾನ ಪಡೆದ ಭಾರತದ ಏಕೈಕ ನೀರು ಸರಬರಾಜು ಸಂಸ್ಥೆ ಎಂಬ ಹೆಗ್ಗಳಿಕೆಗೆ ಬೆಂಗಳೂರು ಜಲಮಂಡಳಿ ಪಾತ್ರವಾಗಿದೆ.

ಬೆಂಗಳೂರಿನಲ್ಲಿ ನೀರಿನ ಸದ್ಬಳಕೆ, ಮರುಬಳಕೆ ಹಾಗೂ ಸಮರ್ಥ ನಿರ್ವಹಣೆಗಾಗಿ ಜಲಮಂಡಳಿ ಅಳವಡಿಸಿಕೊಂಡಿರುವ 5 ಪಂಚಸೂತ್ರಗಳು ವಿಶ್ವಕ್ಕೆ ಮಾದರಿಯಾಗಿವೆ ಎಂದು ಸಮ್ಮೇಳನದಲ್ಲಿ ಉತ್ತಮ ಪ್ರಶಂಸೆಗೆ ಪಾತ್ರವಾಗಿದೆ. ಎಲ್ಲರಿಗೂ ಶುದ್ಧ ನೀರು ಮತ್ತು ನೈರ್ಮಲ್ಯ ಒದಗಿಸುವ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಲ್ಲಿ ಜಲಮಂಡಳಿಯು ಅತ್ಯುತ್ತಮ ಮಾದರಿಯಾಗಿ ಹೊರಹೊಮ್ಮಿದೆ. ಈ ವಿಭಾಗದಲ್ಲಿ ಚಿಲಿ, ಮಲೇಷ್ಯಾ, ಬ್ರೆಜಿಲ್, ಪರಾನಾ ದೇಶದ ಸಂಸ್ಥೆಗಳ ಜೊತೆಗೆ ಬೆಂಗಳೂರು ಜಲಮಂಡಳಿಯು ವಿಶ್ವದ ಟಾಪ್ 5 ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಅಲ್ಲದೆ ಕಳೆದ ಮೂರು ವರ್ಷಗಳಲ್ಲಿ ನೀರು ಪೂರೈಕೆ, ನೈರ್ಮಲ್ಯ ಹಾಗೂ ಹೊಸ ತಂತ್ರಜ್ಞಾನಗಳ ಯಶಸ್ವಿ ಅಳವಡಿಕೆಯನ್ನು ಪರಿಗಣಿಸಿ, ಜಲಮಂಡಳಿಯು ವಿಶ್ವದ ಅತ್ಯಂತ ಪ್ರತಿಷ್ಠಿತ ಯುಟಿಲಿಟಿ ಆಫ್ ದಿ ಇಯರ್ ಪ್ರಶಸ್ತಿಯ ಅಂತಿಮ 5ರ ಪಟ್ಟಿಯಲ್ಲಿ ಮನ್ನಣೆ ಪಡೆದಿದೆ.

ಜತೆಗೆ ಬೆಂಗಳೂರಿನ ನೀರಿನ ಬವಣೆ ನೀಗಿಸಲು ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ ಹಾಗೂ ಬೃಹತ್ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯು ಸಹ ವಾಟರ್ ಪ್ರಾಜೆಕ್ಟ್ ಆಫ್ ದಿ ಇಯರ್ ಜಾಗತಿಕ ಟಾಪ್ ಐದು ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಜಲ ನಿರ್ವಹಣಾ ತಜ್ಞರ ವಿಶೇಷ ಪ್ರಶಂಸೆಗೆ ಪಾತ್ರವಾಗಿದೆ.

ಈ ಪ್ರತಿಷ್ಠಿತ ಗ್ಲೋಬಲ್ ವಾಟರ್ ಸಮಿಟ್‌ನಲ್ಲಿ ಜಲಮಂಡಳಿಯ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಪ್ರತಿನಿಧಿಸಿ ವಿಶ್ವದ ಪ್ರಮುಖ ಜಲ ನಿರ್ವಹಣಾ ನಾಯಕರು ಹಾಗೂ ತಜ್ಞರನ್ನು ಭೇಟಿಯಾಗಿ ಚರ್ಚೆ ನಡೆಸುದ್ದಾರೆ.



> **ಬೆಂಗಳೂರನ್ನು ಅತ್ಯುತ್ತಮ ಜಾಗತಿಕ ನಗರವನ್ನಾಗಿ ರೂಪಿಸುವ ಸಲುವಾಗಿ ಜಲಮಂಡಳಿಯು ಸುಸ್ಥಿರ ಜಲ ನಿರ್ವಹಣಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ. ಅದರ ಪರಿಣಾಮ ಜಾಗತಿಕ ವೇದಿಕೆಯಲ್ಲಿ ಸಿಕ್ಕಿರುವ ಬಹುದೊಡ್ಡ ಮನ್ನಣೆಯಾಗಿದೆ. ನಗರದ ನಾಗರಿಕರಿಗೆ ಸದಾ ವಿಶ್ವದರ್ಜೆಯ ಸೇವೆ ಒದಗಿಸಲು ಜಲಮಂಡಳಿಯು ಬದ್ಧವಾಗಿದೆ.**
> ■ ಡಾ. ರಾಮ್ ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ

ಜೇನು ದಿನಾಚರಣೆ



ವಿಶ್ವ ಜೇನು ದಿನಾಚರಣೆ ಅಂಗವಾಗಿ ಜಿಕೆವಿಕೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ರೀತಿಯ ಜೇನು ಹಾಗೂ ಜೇನು ಪೆಟ್ಟಿಗೆಯನ್ನು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ವೀಕ್ಷಿಸಿದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ. ಎ.ಎಚ್.ರಾಜಾಸಾಬ್, ಡಾ.ಸಚಿನ್ ಸುರೋಶೆ ಇದ್ದರು.

ಕಿರುಸುದ್ದಿ

ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ವೇಗ

• **ಕೆಂಗೇರಿ:** ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ವೇಗ ಹೆಚ್ಚಿಸಲಾಗಿದೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ವಾರ್ಡ್‌ನ ಸಣ್‌ಸಿಟಿ ಅರುಂಧತಿನಗರ ಹಾಗೂ ಮಾರಪ್ಪ ಬಡಾವಣೆಯ ಮಾರಮ್ಮ ದೇವಸ್ಥಾನ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 12 ವಾರ್ಡ್, 17ಗ್ರಾಮ ಪಂಚಾಯಿತಿಗಳಲ್ಲಿನ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುವಂತೆ ಗ್ರಾಮೀಣ ಪ್ರದೇಶದ ಪ್ರತಿ ಹಳ್ಳಿಗಳಿಗೂ ಉತ್ತಮ ರಸ್ತೆ ನಿರ್ಮಾಣ, ಕುಡಿಯುವ ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಕೆಂಗೇರಿ ಬ್ಲಾಕ್ ಅಧ್ಯಕ್ಷ ಮೈಲಸಂದ್ರ ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವಮಾದಯ್ಯ, ವಾರ್ಡ್ ಅಧ್ಯಕ್ಷ ಟಿ. ಪ್ರಭಾಕರ್, ವಾರ್ಡ್ ಅಧ್ಯಕ್ಷ ಪುರುಷೋತ್ತಮ, ಮಾಜಿ ಉಪಾಧ್ಯಕ್ಷ ಅಮನ್ ಉಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಕತಾರ್ ಕರ್ನಾಟಕ ಸಂಘಕ್ಕೆ ಸುಬ್ರಹ್ಮಣ್ಯ ಆಯ್ಕೆ

• **ಬೆಂಗಳೂರು:** ಕರ್ನಾಟಕ ಸಂಘ ಕತಾರ್ 2026-2028ನೇ ಸಾಲಿನ ನೂತನ ಆಡಳಿತ ಸಮಿತಿಯನ್ನು ಐಸಿಸಿ ಸಭಾಂಗಣದಲ್ಲಿ ನಡೆದ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಆಯ್ಕೆ ಮಾಡಲಾಯಿತು. ಸಂಘದ 15ನೇ ಅಧ್ಯಕ್ಷರಾಗಿ ಸುಬ್ರಹ್ಮಣ್ಯ ಹೆಬ್ಬಾಗಿಲು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕುಂದಾಪುರ ಬೈಂದೂರಿನ ಸುಬ್ರಮಣ್ಯ ಹೆಬ್ಬಾಗಿಲು ಅವರು ಭಾರತೀಯ ಸಮುದಾಯದಲ್ಲಿ ಸಾಮಾಜಿಕ ಮತ್ತು ಸಮುದಾಯ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೇ ಈ ಹಿಂದೆ ಭಾರತೀಯ ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷರಾಗಿ, ಭಾರತೀಯ ಕ್ರೀಡಾ ಕೇಂದ್ರದ ಸಲಹಾ ಮಂಡಳಿ ಸದಸ್ಯರಾಗಿ ಹಾಗೂ ಭಾರತೀಯ ಸಮುದಾಯ ಹಿತಚಿಂತಕ ವೇದಿಕೆಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲಾ ಸಂಸ್ಥೆಗಳು ಭಾರತೀಯ ರಾಯಭಾರ ಕಚೇರಿಯ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

5ಜಿ ಸ್ಲೈಸಿಂಗ್ ತಂತ್ರಜ್ಞಾನ ಆಧಾರಿತ ಸೌಲಭ್ಯ

• **ಬೆಂಗಳೂರು:** ಏರ್‌ಟೆಲ್ ಪೋಸ್ಟ್‌ಪೇಯ್ಡ್ ಗ್ರಾಹಕರಿಗೆ ಅತ್ಯುನ್ನತ ಹಾಗೂ ಸ್ಥಿರವಾದ ನೆಟ್‌ವರ್ಕ್ ಅನುಭವವನ್ನು ನೀಡುವ ಸಲುವಾಗಿ 5ಜಿ ಸ್ಲೈಸಿಂಗ್ ತಂತ್ರಜ್ಞಾನ ಆಧಾರಿತ ಹೊಸ ಪ್ರಯಾರಿಟಿ ಪೋಸ್ಟ್‌ಪೇಯ್ಡ್ ಸೌಲಭ್ಯವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಉದ್ಯೋಗ, ವೃತ್ತಿಪರ ಕೆಲಸಗಳು, ಮನರಂಜನೆ ಅಥವಾ ಆನ್‌ಲೈನ್ ಮೀಟಿಂಗ್‌ಗಳಿಗಾಗಿ ಯಾವುದೇ ಅಡೆತಡೆಯಿಲ್ಲದ ಕನೆಕ್ಟಿವಿಟಿಯನ್ನು ಬಯಸುವ ಬಿಡುವಿಲ್ಲದ ಗ್ರಾಹಕರಿಗಾಗಿಯೇ ಈ ಸೇವೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಈ ವಿಶೇಷ ಸೇವೆಗಾಗಿ ಏರ್‌ಟೆಲ್ ತನ್ನ ಹಾಲಿ 5ಜಿ ನೆಟ್‌ವರ್ಕ್ ಅನ್ನು ಸುಧಾರಿತ ಸಾಮರ್ಥ್ಯದ ಸ್ಲೈಸಿಂಗ್ ತಂತ್ರಜ್ಞಾನದೊಂದಿಗೆ ಮೇಲ್ದರ್ಜೆಗೆ ಏರಿಸಿದೆ. ಈ ತಂತ್ರಜ್ಞಾನವು ನೆಟ್‌ವರ್ಕ್‌ನ ಒಟ್ಟಾರೆ ದಕ್ಷತೆಯನ್ನು ಹೆಚ್ಚಿಸುವುದಲ್ಲದೆ, ಹೆಚ್ಚಿನ ಡೇಟಾ ಸಾಮರ್ಥ್ಯವನ್ನು ಸೃಷ್ಟಿಸುತ್ತದೆ. ಈ ಹೆಚ್ಚುವರಿ ಸಾಮರ್ಥ್ಯವನ್ನು ನಿರ್ದಿಷ್ಟವಾಗಿ ಬಳಸಿಕೊಂಡು, ನೆಟ್‌ವರ್ಕ್ ದಟ್ಟಣೆ ಇರುವ ಪ್ರದೇಶಗಳಲ್ಲೂ ಪ್ರಯಾರಿಟಿ ಗ್ರಾಹಕರಿಗೆ ಯಾವುದೇ ವೇಗ ಮಿತಿ ಇಲ್ಲದೆ ಅತ್ಯುತ್ತಮ ಡಿಜಿಟಲ್ ಅನುಭವವನ್ನು ನೀಡಲು ಇದು ನೆರವಾಗಲಿದೆ.

ಕುಮಾರಸ್ವಾಮಿ ಜತೆ ದೇವೇಗೌಡರೂ ಬರಲಿ | ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು

ಎಚ್‌ಡಿಕೆಯ ಪಂಥಾಹ್ವಾನ ಸ್ವೀಕಾರ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಕುಮಾರಸ್ವಾಮಿ ಅವರು ಪಂಥಾಹ್ವಾನ ಕರೆದಿದ್ದಾರಂತೆ. ಅವರ ಪಂಥಾಹ್ವಾನವನ್ನು ನಾನು ಸ್ವೀಕರಿಸುವೆ. ನನಗೆ ಮೂರು ದಿನ ಸಮಯ ಸಾಕು. ಯಾವತ್ತು ಸಮಯ ನಿಗದಿ ಮಾಡುವಿರೋ ನಾನು ಅಂದು ತಯಾರಿದ್ದೇನೆ. ಜಾಗ ಹಾಗೂ ಸಮಯ ಅವರೇ ನಿಗದಿ ಮಾಡಲಿ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಬುಧವಾರ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಆ ಭಾಗದ ರೈತರೊಂದಿಗೆ ಸಭೆ ನಡೆಸಿ ಚರ್ಚಿಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ರಿಯಲ್ ಎಸ್ಟೇಟ್ ಮಾಫಿಯಾ ಮಾಡಿದವರು ಯಾರು? ಡಿಎಲ್ ಎಫ್ ಗೆ ಮಾರಿದವರು ಯಾರು? ಅವರ ಮಗ ಪಂಥಾಹ್ವಾನ ನೀಡಿದ್ದಾರಲ್ಲವೇ ಅವರ ಜೊತೆ ದೇವೇಗೌಡರು ಚರ್ಚೆಗೆ ಬರಲಿ ಎಂದರು.

ಪಂಥಾಹ್ವಾನದ ಬಗ್ಗೆ ರೈತರಿಗೆ ಹೇಳಿದಾಗ. ಅಣ್ಣ ನೀವು ಬೇಡ ನಾವೇ ಪಂಥಾಹ್ವಾನ ಸ್ವೀಕರಿಸುತ್ತೇವೆ, ನಾವೇ ಅವರಿಗೆ ಉತ್ತರ ಕೊಡುತ್ತೇವೆ ಎಂದು ರೈತರೇ ಹೇಳಿದ್ದಾರೆ. ಕಬ್ಬಿಣ, ಸ್ಟೀಲ್ ಬೆಲೆ ಟನ್ ಗೆ ಐದು ಸಾವಿರ ಹೆಚ್ಚಳವಾಗಿದೆ. ಕುಮಾರಣ್ಣನವರೇ ಇದರ ಸಚಿವರು. ಇದನ್ನು ಮೊದಲು ಇದನ್ನು ಕಡಿಮೆ ಮಾಡಿಸಲು ಹೇಳಿ ಆನಂತರ ಪಂಥಾಹ್ವಾನಕ್ಕೆ ಕುಮಾರಸ್ವಾಮಿ ಅವರು ಬರಲಿ ಎಂದು ರೈತರು ನನಗೆ ಸಲಹೆ ನೀಡಿದರು. ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾದ ಮೇಲೆ ಇದರ ಬೆಲೆಯೂ ಜಾಸ್ತಿಯಾಗಲಿದೆ. ಮೊದಲು ನೀವು ಕುಮಾರಸ್ವಾಮಿ ಅವರನ್ನು ಇದರ ಬಗ್ಗೆ ಪ್ರಶ್ನಿಸಿ ಎಂದು ರೈತರು ನನಗೆ ಹೇಳಿದರು ಎಂದರು.

ದೇವೇಗೌಡರು ಮೋದಿಯವರಿಗೆ, ಅವರ ಬೇರೆ ನಾಯಕರಿಗೆ ಪತ್ರ ಬರೆಯಬೇಕು. ನಮ್ಮ ನಾಯಕರಿಗೆ ಪತ್ರ ಬರೆದರೆ ಏನು ಪ್ರಯೋಜನ. ರಾಹುಲ್ ಗಾಂಧಿ ಅವರು ಅಧಿಕಾರದಲ್ಲಿಲ್ಲ, ಅವರು ಯಾಕೆ ಇದಕ್ಕೆಲ್ಲಾ ಬಾಯಿ ಹಾಕಬೇಕು. ದೇವೇಗೌಡರು ಏಕೆ ಏನೂ ಮಾಡಲು ಆಗಲಿಲ್ಲ, ಅವರು ಆರೋಪ ಮಾಡಲಿ. ನಮ್ಮ ಸಿದ್ದರಾಮಯ್ಯ ಅವರ ಬಗ್ಗೆಯೂ ಬಹಳ ಪ್ರೀತಿ ತೋರಿಸುತ್ತಿದ್ದಾರೆ ಎಂದರು. ಈ ಪ್ರದೇಶವನ್ನು ರೆಡ್ ಜೋನ್ ಎಂದು ತೀರ್ಮಾನ ಮಾಡಲಾಗಿತ್ತು. ಅಂದರೆ ಯಾರು ಸಹ ಭೂಮಿ ಮಾರಾಟ ಮಾಡುವಂತಿಲ್ಲ, ಬೇರೆ ಯಾರಿಗೂ ಕೂಡ ವಹಿವಾಟು ಮಾಡುವಂತಿಲ್ಲ ಎಂದು ಕಾನೂನು ಮಾಡಲಾಗಿತ್ತು. ನ್ಯಾಯಲಯ ಕೂಡ ಯೋಜನೆ ಕೈ ಬಿಡಲು ನಿರಾಕರಿಸಿತ್ತು. ಈ ಕಾರಣಕ್ಕೆ ನಾನು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮುಂದುವರೆಸುತ್ತಿದ್ದೇನೆ. ಯಾವ ರೈತರೂ ಸಹ ಭೂಮಿ ಮಾರಿಕೊಳ್ಳಬೇಡಿ ಎಂದು ಮನವರಿಕೆ ಮಾಡಿಕೊಟ್ಟಿದ್ದೇನೆ. ಏಕೆಂದರೆ ನಿಮಗೆಲ್ಲರಿಗೂ ಇದರ ಬೆಲೆ ಅರ್ಥವಾಗುವುದಿಲ್ಲ ಎಂದು ಹೇಳಿದ್ದೇನೆ. ಎಲ್ಲರೂ ಸಹ ಇದಕ್ಕೆ ಒಪ್ಪಿಕೊಂಡಿದ್ದಾರೆ ಎಂದರು.



ನಾವೇ ಉತ್ತರ ಕೊಡುತ್ತೇವೆಂದ ಬಿಡದಿ ಭಾಗದ ರೈತರು

ಪಂಥಾಹ್ವಾನದ ಬಗ್ಗೆ ರೈತರಿಗೆ ಹೇಳಿದಾಗ. ಅಣ್ಣ ನೀವು ಬೇಡ ನಾವೇ ಪಂಥಾಹ್ವಾನ ಸ್ವೀಕರಿಸುತ್ತೇವೆ, ನಾವೇ ಅವರಿಗೆ ಉತ್ತರ ಕೊಡುತ್ತೇವೆ ಎಂದು ರೈತರೇ ಹೇಳಿದ್ದಾರೆ. ಕಬ್ಬಿಣ, ಸ್ಟೀಲ್ ಬೆಲೆ ಟನ್ ಗೆ ಐದು ಸಾವಿರ ಹೆಚ್ಚಳವಾಗಿದೆ. ಕುಮಾರಣ್ಣನವರೇ ಇದರ ಸಚಿವರು. ಇದನ್ನು ಮೊದಲು ಇದನ್ನು ಕಡಿಮೆ ಮಾಡಿಸಲು ಹೇಳಿ ಆನಂತರ ಪಂಥಾಹ್ವಾನಕ್ಕೆ ಕುಮಾರಸ್ವಾಮಿ ಅವರು ಬರಲಿ ಎಂದು ರೈತರು ನನಗೆ ಸಲಹೆ ನೀಡಿದರು.

ಬಿಡದಿ ಭಾಗದ ರೈತರೊಂದಿಗೆ ಚರ್ಚಿಸಲಾಗಿದೆ

ಬಿಡದಿ ಟೌನ್‌ಶಿಪ್‌ಗೆ ಜಮೀನು ನೀಡಿರುವ ರೈತರಿಗೆ ಜೂನ್ ಮೊದಲನೇ ವಾರದಿಂದ ಪರಿಹಾರದ ಹಣ ಬಿಡುಗಡೆಗೆ ಕ್ರಮವಹಿಸುತ್ತೇನೆ. ಮೂರು, ಮೂರು ಹಳ್ಳಿಗಳನ್ನು ಸೇರಿಸಿ ಪ್ರತ್ಯೇಕವಾದ ಅಂತಿಮ ಹಂತದ ನೋಟಿಫಿಕೇಶನ್ ಮಾಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಬಿಡದಿ ಟೌನ್ ಶಿಪ್ ವಿಚಾರವಾಗಿ ಅಲ್ಲಿನ ಶೇ.80 ರಷ್ಟು ರೈತರು ಒಪ್ಪಿಗೆ ನೀಡಿದ್ದು, ಆದಷ್ಟು ಬೇಗ ಪರಿಹಾರ ವಿತರಿಸಿ ಎಂದು ಒತ್ತಾಯ ಮಾಡಿದ್ದಾರೆ. ಭೂ ರಹಿತರ ಬಗ್ಗೆ ಕಾಳಜಿ ವಹಿಸಿದ್ದು ಈ ವಿಚಾರ ಬಗೆಹರಿಸಲಾಗುವುದು ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ಭೂಸ್ವಾಧೀನ ರೈತರಿಗೆ ದ್ರೋಹ: ಅಶೋಕ

• **ಬೆಂಗಳೂರು:** ಬಿಡದಿಯಲ್ಲಿ ಭೂಸ್ವಾಧೀನ ಮಾಡಲು ಸರ್ಕಾರ ಮುಂದಾಗಿರುವುದು ರೈತರಿಗೆ ಮಾಡುತ್ತಿರುವ ದ್ರೋಹ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿಯಲ್ಲಿ ತೆಂಗು, ಮಾವು, ರೇಷ್ಮೆ ಹಾಗೂ ಹಾಲು ಉತ್ಪಾದನೆ ಸಮೃದ್ಧವಾಗಿರುವ ಫಲವತ್ತಾದ ಕೃಷಿ ಭೂಮಿಯಿದೆ. ಅಂತಹ ಪ್ರದೇಶವನ್ನು ಒತ್ತುವರಿ ಮಾಡಿ ರೈತರನ್ನು ಬೀದಿಗೆ ತರುವ ಕೆಲಸ ನಡೆಯುತ್ತಿದೆ ಎಂದರು.



ಬಿಜೆಪಿ ಅಧಿಕಾರಕ್ಕೆ ಬಂದಾಗ ಮೂಲ ಹೆಸರು: ಅಭಿವೃದ್ಧಿ ಮಾಡಲು ಯೋಗ್ಯತೆ ಇಲ್ಲದವರು ಹೆಸರು ಬದಲಾಯಿಸಿ ಪ್ರಚಾರ ಪಡೆಯಲು ಯತ್ನಿಸುತ್ತಿದ್ದಾರೆ. ಹಣ ನೀಡದೆ, ಯೋಜನೆ ತರದೆ ಕೇವಲ ಹೆಸರನ್ನು ಬಳಸುವುದರಿಂದ ಜನ ಮೆಚ್ಚುವುದಿಲ್ಲ, ಬಿಜೆಪಿ ಸರ್ಕಾರ ಬಂದ ಬಳಿಕ ಮೂಲ ಹೆಸರನ್ನೇ ಮರುಸ್ಥಾಪಿಸಲಾಗುವುದು. ಬ್ರ್ಯಾಂಡ್ ಬೆಂಗಳೂರು, ಟನಲ್ ಬೆಂಗಳೂರು ಎಂದು ಹೇಳಿದರೂ ಇಂದು ನಗರ, ಕಸದ ಬೆಂಗಳೂರು, ಗುಂಡಿಗಳ ಬೆಂಗಳೂರು ಆಗಿದೆ. ಜನರ ಗಮನ ಬೇರೆಡೆ ಸೆಳೆಯಲು ಹೆಸರಿನ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸೋಲುವ ಭಯದಿಂದ ಜಿಬಿಎ ಚುನಾವಣೆ ಮುಂದೂಡಿಕೆ

ಸೋಲುವ ಭಯದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಕಾಂಗ್ರೆಸ್ ಸರ್ಕಾರ ಪದೇ ಪದೆ ಮುಂದೂಡುತ್ತಿದೆ. ಸಮೀಕ್ಷೆಯಲ್ಲಿ ಗೆಲ್ಲುತ್ತೇವೆ ಎನ್ನುವ ವಿಶ್ವಾಸ ಇದ್ದರೆ ಚುನಾವಣೆ ಏಕೆ ನಡೆಸುತ್ತಿಲ್ಲ? ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಪ್ರಶ್ನಿಸಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಹಿಂದೆ ಇದ್ದ 198 ವಾರ್ಡ್‌ಗಳ ಆಧಾರದ ಮೇಲೆ ಚುನಾವಣೆ ನಡೆಸಿದ್ದರೆ ಇಷ್ಟೊತ್ತಿಗೆ ಚುನಾವಣೆ ಮುಗಿದಿರುತ್ತಿತ್ತು. ಆದರೆ, ಬೆಂಗಳೂರನ್ನು ಐದು ಭಾಗಗಳಾಗಿ ವಿಭಜಿಸಿದ ಬಳಿಕ ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಐದು ಕಡೆಯೂ ಸೋಲು ಖಚಿತವಾಗಿದೆ ಎಂಬ ವರದಿ ಬಂದಿರುವುದರಿಂದ ಸರ್ಕಾರ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಸೋಲು ಖಚಿತವಾದ ಬಳಿಕ ಪ್ರತಿಪಕ್ಷಗಳ ಮೇಲೆ ಆರೋಪ ಹೊರಿಸುವ ಕೆಲಸ ಮಾಡಲಾಗುತ್ತಿದೆ.

ನಾಳೆ ನೇರ ಫೋನ್ ಇನ್ ಕಾರ್ಯಕ್ರಮ

• **ಬೆಂಗಳೂರು:** ಜಲಮಂಡಳಿಯಿಂದ ಜಲಮಂಡಳಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೇ 22 ರಂದು ಬೆಳಗ್ಗೆ 9:30 ರಿಂದ 10:30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ, ಪ್ರದೇಶದಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ,ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ದೂ. 080-22945119 ಮತ್ತು 080-22229639 ಸಂಖ್ಯೆಯನ್ನು ಸಾರ್ವಜನಿಕರು ಸಂಪರ್ಕಿಸಬಹುದಾಗಿದ್ದು, ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡುವಂತೆ ಜಲಮಂಡಳಿ ತಿಳಿಸಿದೆ.

ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ

- ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡಿ
- ಘನ ತ್ಯಾಜ್ಯ ನಿರ್ವಹಣೆ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ
- ಆ ಮೂಲಕ ಲಭ್ಯವಾಗುವ ಸ್ಥಳವನ್ನು ಎಬಿಸಿಗೆ ಬಳಸಿ

• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡುವಂತೆ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸುಮನಹಳ್ಳಿಯಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಾಣ ಕಾಮಗಾರಿ ಪರಿಶೀಲನೆ ನಡೆಸಿದ ಅವರು, ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿಗೆ ವೇಗ ನೀಡಿ, ಒಂದು ತಿಂಗಳೊಳಗೆ ಕನಿಷ್ಠ ನೂರು ಶ್ವಾನಗಳಿಗೆ ಆಶ್ರಯ ಒದಗಿಸುವಂತಾಗಬೇಕು. ಬಳಿಕ ಹಂತ ಹಂತವಾಗಿ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ. ಅದೇ ಸಂಕೀರ್ಣದಲ್ಲಿ ಪ್ರಾಣಿ ಸಂತಾನಹರಣ ಶಸ್ತ್ರಚಿಕಿತ್ಸೆ (ಎಬಿಸಿ)ಕೇಂದ್ರ ಹಾಗೂ ಘನ ತ್ಯಾಜ್ಯ ನಿರ್ವಹಣೆ ಘಟಕವಿದ್ದು, ಘನ ತ್ಯಾಜ್ಯ ನಿರ್ವಹಣೆ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ, ಎಬಿಸಿ ಸಾಮರ್ಥ್ಯ ಹೆಚ್ಚಿಸುವಂತೆ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಆಯುಕ್ತರು ಮಾನವ ಮತ್ತು ಪ್ರಾಣಿಗಳ ವಿದ್ಯುತ್ ಚಿತಾಗಾರ ಪರಿಶೀಲಿಸಿ ಅಗತ್ಯ ನಿರ್ದೇಶನ ನೀಡಿದ್ದಾರೆ.

ಬಸಪ್ಪ ಸಾಲುಂಡಿಗೆ ವಿಸಿಟಿಂಗ್ ಪ್ರೊಫೆಸರ್ ಸ್ಥಾನಮಾನ

• **ಬೆಂಗಳೂರು:** ರಷ್ಯಾದ ಪ್ರತಿಷ್ಠಿತ ಸೆಚ್‌ನೋವ್ ಫಸ್ಟ್ ಮಾಸ್ಕೋ ಸ್ಟೇಟ್ ಮೆಡಿಕಲ್ ಯುನಿವರ್ಸಿಟಿ (ಎಸ್‌ಎಂಎಸ್‌ಎಂ)ಯು ಮೈಸೂರು ವಿಶ್ವವಿದ್ಯಾಲಯದ ಸಾವಯವ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಬಸಪ್ಪ ಸಾಲುಂಡಿ ಅವರಿಗೆ ವಿಸಿಟಿಂಗ್ ಪ್ರೊಫೆಸರ್ ಎಂಬ ಅಧಿಕೃತ ಸ್ಥಾನಮಾನ ನೀಡಿ ಗೌರವಿಸಿದೆ.



ಎಸ್‌ಎಂಎಸ್‌ಎಂ ವಿಶ್ವವಿದ್ಯಾಲಯದ ಮೊದಲ ಉಪ-ರೆಕ್ಟರ್ ಎ.ಎ.ಸ್ವಿಸ್ತುನೋವ್ ಅವರು ಈ ನೇಮಕಾತಿಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಚೀನಾದ ಹೈಯಾನ್ ಹು ಹಾಗೂ ದಕ್ಷಿಣ ಕೊರಿಯಾದ ಜಂಗ್ ಹ್ವಾನ್ ಬೇಕ್ ಸೇರಿದಂತೆ ವಿವಿಧ ದೇಶಗಳ ಖ್ಯಾತ ಶೈಕ್ಷಣಿಕ ತಜ್ಞರೊಂದಿಗೆ ಭಾರತದಿಂದ ಡಾ. ಬಸಪ್ಪ ಸಾಲುಂಡಿ ಅವರನ್ನು ಆಯ್ಕೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಪ್ರಕಟಣೆಯ ಪ್ರಕಾರ, ಸೆಚ್‌ನೋವ್ ಯುನಿವರ್ಸಿಟಿ ವಿಸಿಟಿಂಗ್ ಪ್ರೊಫೆಸರ್ ಸ್ಥಾನಮಾನವು 2025ರ ನ. 15ರಿಂದ ಜಾರಿಗೆ ಬಂದಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬಾಹ್ಯ ತಜ್ಞರಿಗೆ ನೀಡುವ ಗೌರವಪೂರ್ಣ ಜೀವಿತಾವಧಿಯ ಬಿರುದಾಗಿದೆ. ಈ ಸ್ಥಾನಮಾನವು ಯಾವುದೇ ಪೂರ್ಣಕಾಲಿಕ ಉದ್ಯೋಗ ಅಥವಾ ಸಂಬಳವನ್ನು ಒಳಗೊಂಡಿರುವುದಿಲ್ಲ ಎಂದು ತಿಳಿಸಲಾಗಿದೆ.

ಲೋಕಾಯುಕ್ತ ಬಲೆಗೆ ಬಿದ್ದ ಶಾಲಾ ಗುಮಾಸ್ತ

• **ಬೆಂಗಳೂರು:** ಪಿಂಚಣಿ ಸೌಲಭ್ಯದ ಪ್ರಕ್ರಿಯೆಗಾಗಿ ನಿವೃತ್ತ ನೌಕರರೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ಕರ್ನಾಟಕ ಪಬ್ಲಿಕ್ ಶಾಲೆಯ ಕೇಸ್ ವರ್ಕರ್ ಒಬ್ಬರು ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ವಿ.ವಿ. ಪುರಂ ಬಳಿ ಇರುವ ಕರ್ನಾಟಕ ಪಬ್ಲಿಕ್ ಶಾಲೆಯ ಕೇಸ್ ವರ್ಕರ್ ಆಗಿ ಸೇವೆ ಸಲ್ಲಿಸುತ್ತಿರುವ ರೇಣುಕಾರಾಧ್ಯ ಕೆ.ಎಸ್.(50) ಲೋಕಾಯುಕ್ತ ಅಧಿಕಾರಿಗಳಿಂದ ಬಂಧಿತರಾದ ಆರೋಪಿ.

ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ವ್ಯಾಪ್ತಿಯ ಬಸಾಪುರದ ರಾಘವೇಂದ್ರ ಸ್ವಾಮಿ ಲೇಔಟ್ ನಿವಾಸಿ ಸುರೇಶ್ ಆರ್. ಎಂಬವರು ತಮ್ಮ ಪಿಂಚಣಿ ಸೌಲಭ್ಯಗಳ ಮುಂದಿನ ಅಧಿಕೃತ ಪ್ರಕ್ರಿಯೆಗಾಗಿ ಸೇವಾ ಪುಸ್ತಕ (ಸರ್ವೀಸ್ ಬುಕ್) ಸೇರಿದಂತೆ ಅಗತ್ಯ ದಾಖಲೆಗಳನ್ನು ಎ.ಜಿ. ಕಚೇರಿಗೆ ಕಳುಹಿಸಿಕೊಡುವಂತೆ ಕೋರಿ ಕರ್ನಾಟಕ ಪಬ್ಲಿಕ್ ಶಾಲೆಗೆ ಹೋಗಿದ್ದರು. ಈ ಕೆಲಸವನ್ನು ಮಾಡಿಕೊಡಲು ರೇಣುಕಾರಾಧ್ಯ ಸುರೇಶ್ ಅವರಿಂದ 20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ನಗರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಬುಧವಾರ ಲೋಕಾಯುಕ್ತ ಎಸ್ಪಿ ಶಿವಪ್ರಕಾಶ್ ದೇವರಾಜು, ಅವರ ಉಸ್ತುವಾರಿಯಲ್ಲಿ ಟ್ರ್ಯಾಪ್ ಕಾರ್ಯಾಚರಣೆ ಆಯೋಜಿಸಲಾಗಿತ್ತು. ದೂರುದಾರ ಸುರೇಶ್ ಅವರಿಂದ ರೇಣುಕಾರಾಧ್ಯ ಕಚೇರಿಯಲ್ಲಿ 20,000 ರೂ. ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲೇ ದಾಳಿ ನಡೆಸಿದ ಅಧಿಕಾರಿಗಳು, ಆರೋಪಿಯನ್ನು ಲಂಚದ ಹಣದೊಂದಿಗೆ ರೆಡ್ ಹ್ಯಾಂಡ್ ಆಗಿ ಬಂಧಿಸಿದ್ದಾರೆ.

ಚಿನ್ನದಂಗಡಿ ಮಾಲೀಕನಿಂದ ಪೊಲೀಸರಿಗೆ ದೂರು

ಚಿನ್ನ ಖರೀದಿಸುವ ನೆಪದಲ್ಲಿ ದರೋಡೆ

• **ಬೆಂಗಳೂರು:** ಸಗಟು ದರದಲ್ಲಿ ಚಿನ್ನ ಖರೀದಿಸುವುದಾಗಿ ನಂಬಿಸಿ ಉದ್ಯಮಿಯೊಬ್ಬರಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ದೋಚಿ ವಂಚಿಸಿರುವ ಘಟನೆಯೊಂದು ಮಲ್ಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ನಗರತ್ ಪೇಟೆಯಲ್ಲಿರುವ ಮೆಹ್ತಾ ಜ್ಯುವೆಲ್ಲರಿ ಶಾಪ್ ಮಾಲೀಕರನ್ನು ನಂಬಿಸಿದ ಖದೀಮರು ಬರೋಬ್ಬರಿ 3 ಕೋಟಿ ರೂ. ಮೌಲ್ಯದ 1.850 ಕೆ.ಜಿ. ಚಿನ್ನಾಭರಣಗಳೊಂದಿಗೆ ಪರಾರಿಯಾಗಿದ್ದಾರೆ. ಚಿನ್ನ ಕಳೆದುಕೊಂಡ ಉದ್ಯಮಿ ಈ ಸಂಬಂಧ ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳಾದ ಪರೇಶ್ ಸೋನಿ, ಶ್ಯಾಮ್ ಹಾಗೂ ರಾಮಚಂದ್ರ ಅಲಿಯಾಸ್ ಚಂದ್ರಶೇಖರ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ನಕಲಿ ಕಂಪನಿ ಹೆಸರಿನಲ್ಲಿ ವ್ಯವಸ್ಥಿತ ಸಂಚು: ಮೆಹ್ತಾ ಜ್ಯುವೆಲ್ಲರಿ ಮಾಲೀಕರಿಗೆ ಕರೆ ಮಾಡಿದ್ದ ಆರೋಪಿ ಪರೇಶ್ ಸೋನಿ, ತಾನು ಮಾಹಿ ಎಂಟರ್‌ಪ್ರೈಸಸ್ ಹೆಸರಿನ ಸಂಸ್ಥೆಯನ್ನು ನಡೆಸುತ್ತಿದ್ದು, ಅದಕ್ಕೆ ಹೋಲ್ ಸೇಲ್ ದರದಲ್ಲಿ ಭಾರಿ ಪ್ರಮಾಣದ ಚಿನ್ನದ ಆಭರಣಗಳು ಬೇಕಾಗಿವೆ ಎಂದು ನಂಬಿಸಿದ್ದ. ಆರೋಪಿಯ ಮಾತನ್ನು ನಂಬಿದ ಜ್ಯುವೆಲ್ಲರ್ಸ್ ಮಾಲೀಕರು, ಮೇ.16ರಂದು ತಮ್ಮ ಸೇಲ್ಸ್ ಮ್ಯಾನೇಜರ್ ಮಹೇಂದ್ರ ಕುಮಾರ್ ಜೈನ್ ಅವರ ಕೈಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಕೊಟ್ಟು ಮಲ್ಲೇಶ್ವರಂನ ಸಂಪಿಗೆ ರಸ್ತೆಯಲ್ಲಿರುವ ಆರೋಪಿಯ ಕಚೇರಿಗೆ ಕಳುಹಿಸಿಕೊಟ್ಟಿದ್ದರು. ಆದರೆ, ಆರೋಪಿಗಳು ತಮಗೆ ಯಾವುದೇ ಸಂಬಂಧವಿಲ್ಲದ ಕಚೇರಿಯೊಂದರ ಬಾಗಿಲಿನ ಮೇಲೆ ಮಾಹಿ ಎಂಟರ್‌ಪ್ರೈಸಸ್ ಎಂದು ನಕಲಿ ಬೋರ್ಡ್ ಹಾಕಿ ಈ ವ್ಯವಸ್ಥಿತವಾದ ಸಂಚು ರೂಪಿಸಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ.

ಫೋಟೋ ತೆಗೆಯುವ ನೆಪದಲ್ಲಿ ಚಿನ್ನದೊಂದಿಗೆ ನಾಪತ್ತೆ: ಮ್ಯಾನೇಜರ್ ಮಹೇಂದ್ರ ಕುಮಾರ್ ಆಭರಣಗಳನ್ನು ತಂದಾಗ, ಅವುಗಳ ವಿನ್ಯಾಸವನ್ನು ಪರಿಶೀಲಿಸುವಂತೆ ನಟಿಸಿದ ಪರೇಶ್ ಸೋನಿ, ಪಕ್ಕದ ಕ್ಯಾಬಿನ್‌ನಲ್ಲಿ ಕುಳಿತಿದ್ದ ತನ್ನ ಸಹಚರರಾದ ಶ್ಯಾಮ್ ಹಾಗೂ ಚಂದ್ರಶೇಖರ್‌ಗೆ ಆಭರಣ ಪಟ್ಟಿ ಸಿದ್ಧಪಡಿಸಲು ಸೂಚಿಸಿದ್ದಾನೆ. ತದನಂತರ ಆಭರಣಗಳ ಫೋಟೋ ತೆಗೆಯುವ ನೆಪ ಒಡ್ಡಿ ಪಕ್ಕದ ಕೋಣೆಗೆ ಹೋದ ಆರೋಪಿಗಳು, ಅಲ್ಲಿಂದಲೇ ಒಡವೆಗಳೊಂದಿಗೆ ಹಿಂಬಾಗಿಲಿನಿಂದ ನಾಪತ್ತೆಯಾಗಿದ್ದಾರೆ. ಒಳಗೆ ಹೋದವರು ಎಷ್ಟು ಹೊತ್ತಾದರೂ ಬಾರದಿದ್ದಾಗ ಅನುಮಾನಗೊಂಡ ಮ್ಯಾನೇಜರ್ ಕೋಣೆಯೊಳಗೆ ಹೋಗಿ ಪರಿಶೀಲಿಸಿದಾಗ ಆರೋಪಿಗಳು ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನದೊಂದಿಗೆ ಎಸ್ಕೇಪ್ ಆಗಿರುವುದು ಮತ್ತು ತಾವು ವಂಚನೆಗೆ ಒಳಗಾಗಿರುವುದು ಬೆಳಕಿಗೆ ಬಂದಿದೆ.

ಸಂತ್ರಸ್ತ ಉದ್ಯಮಿ ನೀಡಿದ ದೂರಿನನ್ವಯ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ಪೊಲೀಸರು ಸ್ಥಳದಲ್ಲಿರುವ ಸಿಸಿಟಿವಿ ದೃಶ್ಯಾವಳಿಗಳನ್ನು ವಶಕ್ಕೆ ಪಡೆದು, ಅದರ ಆಧಾರದ ಮೇಲೆ ಆರೋಪಿಗಳ ಪತ್ತೆಗಾಗಿ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಇಂದು ತಂತ್ರಜ್ಞಾನ ಕೇಂದ್ರ ಉದ್ಘಾಟನೆ

• **ಬೆಂಗಳೂರು:** ಜರ್ಮನಿಯ ಮಾನ್ + ಹುಮ್ಮೆಲ್ ತುಮಕೂರಿನ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಜಾಗತಿಕ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರ ಮೇ 21ರಂದು ಉದ್ಘಾಟನೆಗೊಳ್ಳಲಿದೆ.

ಜರ್ಮನಿಯ ಹೊರಗೆ ಮಾನ್+ಹುಮ್ಮೆಲ್ ಕಂಪೆನಿಯ ಅತ್ಯಂತ ದೊಡ್ಡ ಅಭಿವೃದ್ಧಿ ಕೇಂದ್ರ ಇದಾಗಿದೆ. ಎಂಜಿನಿಯರಿಂಗ್, ನಾವೀನ್ಯತೆ ಮತ್ತು ಸುಧಾರಿತ ಫಿಲ್ಟರೇಶನ್ ತಂತ್ರಜ್ಞಾನಗಳಿಗೆ ಭಾರತವನ್ನು ಒಂದು ನಿರ್ಣಾಯಕ ಕೇಂದ್ರವನ್ನಾಗಿ ಇದು ಬಲಪಡಿಸಲಿದೆ. ತುಮಕೂರಿನ ಕೇಂದ್ರವು ಇಂಧನ-ದಕ್ಷತೆಯ ಫಿಲ್ಟರೇಶನ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು, ಉತ್ಪನ್ನಗಳ ಲೈಫ್‌ಸೈಕಲ್ ಎಮಿಷನ್ ಕಡಿಮೆ ಮಾಡುವುದು ಮತ್ತು ಮರುಬಳಕೆ ಹಾಗೂ ಪರಿಸರಸ್ನೇಹಿ ಉತ್ಪನ್ನ ವಿನ್ಯಾಸ ಸೇರಿದಂತೆ ಸರ್ಕ್ಯುಲರ್ ಸೊಲ್ಯೂಷನ್ಸ್‌ಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಗಮನ ಹರಿಸಲಿದೆ. ನೀರಿನ ಶುದ್ಧೀಕರಣ, ಕೈಗಾರಿಕಾ ಮಾಲಿನ್ಯ ನಿಯಂತ್ರಣ ಮತ್ತು ಶುದ್ಧ ನೀರಿನ ಲಭ್ಯತೆಯಂತಹ ಪ್ರಮುಖ ಪರಿಸರ ಸವಾಲು ಎದುರಿಸುವಲ್ಲಿ ಕಂಪನಿ ಪ್ರಯತ್ನಕ್ಕೆ ಬೆಂಬಲ ನೀಡಲಿದೆ.


ಇಂದು ನಗರದಲ್ಲಿ...

- ಬೆಂಗಳೂರು ನಗರ ವಿವಿಯಲ್ಲಿ ಅನ್ನದ ಭಾಷೆಯಾಗಿ ಕನ್ನಡ ಕುರಿತ ವಿಚಾರ ಸಂಕಿರಣ.
- ಸ್ಥಳ: ಜ್ಞಾನಜ್ಯೋತಿ ಸಭಾಂಗಣ ಸೆಂಟ್ರಲ್ ಕಾಲೇಜಿನ ಆವರಣ
- ಬೆಳಗ್ಗೆ 10

- ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ವತಿಯಿಂದ ಪಂಚ ವೀಣಾವಾದನ.
- ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ
- ಸಂಜೆ 5.15

- ಶ್ರೀ ಕಂಬಾಲೂರು ಶ್ರೀವತ್ಸಾಚಾರ್ಯರಿಂದ ಧಾರ್ಮಿಕ ಪ್ರವಚನ.
- ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ತ್ಯಾಗರಾಜನಗರ
- ಸಂಜೆ 6

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ವೈಭವ್ (ರಾಜಸ್ಥಾನ) 579 ರನ್

ಭುವನೇಶ್ವರ್ (ಬೆಂಗಳೂರು) 24 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಕೆಕೆಆರ್	12	5	6	1	11	-0.038
ಮುಂಬೈ	12	4	8	0	8	-0.504
ಲಖನೌ	13	4	9	0	8	-0.702

ನಾಲ್ಕನೇ ಸ್ಥಾನಕ್ಕೆ ರಾಜಸ್ಥಾನ | ಪ್ಲೇಆಫ್ ಹಾದಿ ಸುಗಮ

ಸಿಕ್ಸರ್‌ಗಳ ವೈಭವ

ಜೈಪುರ: ವೈಭವ್ ಸೂರ್ಯವಂಶಿ ಬಾರಿಸಿದ ಸಿಕ್ಸರ್‌ಗಳೆದುರು ತತ್ತರಿಸಿರುವ ಲಖನೌ ಸೂಪರ್ ಜೇಂಟ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ 9ನೇ ಸೋಲು ಕಂಡಿದೆ. ರಾಜಸ್ಥಾನ ಗೆಲುವಿನೊಂದಿಗೆ ನಾಲ್ಕನೇ ಸ್ಥಾನಕ್ಕೇರಿದ್ದು, ಪ್ಲೇಆಫ್‌ಗೇರುವ ಅವಕಾಶಗಳನ್ನು ಹೆಚ್ಚುಗೊಳಿಸಿದೆ.

ರವೀಂದ್ರ ಜಡೇಜಾ, ರಿಯಾನ್ ಪರಾಗ್ ಇಲ್ಲದ ಪಂದ್ಯದಲ್ಲಿ ರಾಜಸ್ಥಾನ ಅನುಭವ ಇಲ್ಲದ ತಂಡದೊಂದಿಗೆ ಮೈದಾನಕ್ಕಿಳಿಯಿತು. ವೈಭವ್ ಸೂರ್ಯವಂಶಿ ನಿಧಾನ ಆರಂಭ ಮಾಡಿದರು. ಇದೆಲ್ಲದರ ನಡುವೆ ದೊಡ್ಡ ಗುರಿ. ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಎದುರಾಳಿ ಲಖನೌ ಒತ್ತಡ ಹಾಕಲು ಆರಂಭಿಸಿತು ಅನ್ನುವಷ್ಟರಲ್ಲಿ ಅಬ್ಬರಿಸಲಾರಂಭಿಸಿದರು ವೈಭವ್ ಸೂರ್ಯವಂಶಿ. 10 ಸ್ಫೋಟಕ ಸಿಕ್ಸರ್, 7 ಅಬ್ಬರದ ಬೌಂಡರಿ ಬಾರಿಸಿದ ನಂತರ ಸ್ಟ್ರೈಕ್ ರೇಟ್ ಗಗನದೆತ್ತರಕ್ಕೆ ಹಾರಿತು. ಪಂದ್ಯವನ್ನು ಗೆದ್ದು ಅಂಕಪಟ್ಟಿಯಲ್ಲೂ ರಾಜಸ್ಥಾನ ಮೇಲೇರಿತು.

ಟಾಸ್ ಗೆದ್ದ ರಾಜಸ್ಥಾನ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಲಖನೌ ಪರ ಮಿಚೆಲ್ ಮಾರ್ಷ್ (96; 57ಎ, 11ಬೌ, 5ಸಿ), ಜೋಶ್ ಇಂಗ್ಲಿಸ್(60; 29ಎ, 7ಬೌ, 3ಸಿ) ಮಿಂಚಿದರು. ಪಂತ್(35) ಕೂಡ ಕೈಜೋಡಿಸಿದ ನಂತರ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡ ಲಖನೌ 220 ರನ್ ಗಳಿಸಿತು. ರಾಜಸ್ಥಾನ ಪರ ಯಶ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ರಾಜಸ್ಥಾನ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು. ಯಶಸ್ವಿ ಜೈಸ್ವಾಲ್ (43; 8ಬೌ, 1ಸಿ) ಅಬ್ಬರದ ಆರಂಭ ಕೊಟ್ಟರೆ, ವೈಭವ್ ಸೂರ್ಯವಂಶಿ(93; 38ಎ, 7ಬೌ, 10ಸಿ) ಪಂದ್ಯವನ್ನು ರಾಜಸ್ಥಾನದ ಜೇಬಿಗಿತ್ತರು. ಜುರೇಲ್ 53 ರನ್ ಗಳಿಸಿ ಜಯದ ಹಾದಿ ತೋರಿಸಿದರು. ಲಖನೌ ಪರ ಮೋಹ್ಸಿನ್ ಖಾನ್ 1 ವಿಕೆಟ್ ಪಡೆದುಕೊಂಡರು.

ವೈಭವ್ ಸಿಕ್ಸರ್‌ಗಳ ಅಬ್ಬರ: ಮೊದಲ ಬಾಲ್‌ನಿಂದಲೇ ದಂಡಿಸುವುದು. ಒತ್ತಡದ ಮೂಲಕ ಮಿಂಚುವುದು ಇದು ವೈಭವ್ ಸೂರ್ಯವಂಶಿಯ ಸಾಮಾನ್ಯ ಸ್ವಭಾವ. ಆದರೆ ಲಖನೌ ವಿರುದ್ಧದ ಪಂದ್ಯದಲ್ಲಿ ಆಟವೇ ಬೇರೆಯದ್ದಾಗಿತ್ತು. ಜೊತೆಯುವ ಜವಾಬ್ದಾರಿ ಜೈಸ್ವಾಲ್ ಮೈಗೆತ್ತಿಕೊಂಡಿದ್ದರು. ವೈಭವ್ ನಿಧಾನ ಆರಂಭ ಮಾಡಿದರು. ಮೊದಲಿನ 10 ಬಾಲ್‌ಗಳಲ್ಲಿ 5 ರನ್ ಗಳಿಸಿದ್ದ ವೈಭವ್ ಬಳಿಕ ನೈಜ ಆಟದತ್ತ ಸಾಗಿದರು. ದೊಡ್ಡ ದೊಡ್ಡ ಬೌಲರ್‌ಗಳನ್ನು ಮನ ಬಂದಂತೆ ದಂಡಿಸುವ ಅವರ ಸ್ವಾಭಾವಿಕ ಆಟಕ್ಕೆ ಮರಳಿದರು. ಮುಂದಿನ 28 ಬಾಲ್‌ಗಳಲ್ಲಿ 88 ರನ್ ಚಚ್ಚಿದರು. ಪಂದ್ಯವನ್ನೇ ಕಸಿದುಕೊಂಡರು, ಲಖನೌ ಆತ್ಮವಿಶ್ವಾಸದ ಮೇಲೆ ಪೆಟ್ಟುಬ್ಬು ಬರೆ ಎಳೆದರು. ಪಂದ್ಯದುದ್ದಕ್ಕೂ ವೈಭವ್ ಆಟಕ್ಕೆ ನಿಲ್ಲಿಸುವ ಸರ್ದಾರರೇ ಇರಲಿಲ್ಲ, ಒಟ್ಟು 38 ಬಾಲ್‌ಗಳಲ್ಲಿ 93 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದ ಔಪಚಾರಿಕತೆ ಮುಗಿಸುವಲ್ಲಿ ತಂಡಕ್ಕೆ ಧ್ರುವ್ ಜುರೇಲ್ ಸಹಾಯ ಮಾಡಿದರು. 38 ಬಾಲ್ ಎದುರಿಸಿ ಔಟಾಗದೇ 53 ರನ್ ಗಳಿಸಿದರು.



ವೈಭವ್ ದಾಖಲೆ

ಸಿಕ್ಸರ್ ಬಾರಿಸುವುದರಲ್ಲಿ ವೈಭವ್ ಸೂರ್ಯವಂಶಿ ಆ್ಯಂಡ್ರೆ ರಸೆಲ್ ದಾಖಲೆ ಮುರಿದಿದ್ದಾರೆ. ಒಂದೇ ಸೀಸನ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲಿ ವೈಭವ್ 2ನೇ ಸ್ಥಾನಕ್ಕೇರಿದರು. ಈ ಬಾರಿಯ ಐಪಿಎಲ್‌ನಲ್ಲಿ 53 ಸಿಕ್ಸರ್ ಬಾರಿಸಿರುವ ಅವರು, ಇನ್ನೂ ಪಂದ್ಯಗಳನ್ನು ಆಡಬೇಕಿದೆ. ಇದರೊಂದಿಗೆ ಮೊದಲ ಸ್ಥಾನದಲ್ಲಿರುವ ಕ್ರಿಸ್ ಗೇಲ್ ದಾಖಲೆ ಮುರಿಯುವ ಅವಕಾಶಗಳನ್ನೂ ಹೊಂದಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಲಖನೌ 20 ಓವರ್‌ಗಳಲ್ಲಿ 220/5: ಮಾರ್ಷ್ 96, ಇಂಗ್ಲಿಸ್ 60; ಯಶ್ ರಾಜ್ 35/2

ರಾಜಸ್ಥಾನ 19.1 ಓವರ್‌ಗಳಲ್ಲಿ 225/3: ವೈಭವ್ 93, ಜುರೇಲ್ 53*, ಜೈಸ್ವಾಲ್ 43; ಮೋಹ್ಸಿನ್ 31/1

ಅತಿ ಹೆಚ್ಚು ಸಿಕ್ಸರ್ (ಒಂದೇ ಆವೃತ್ತಿಯಲ್ಲಿ)		
1.	ಕ್ರಿಸ್ ಗೇಲ್	59
2.	ವೈಭವ್ ಸೂರ್ಯವಂಶಿ	53*
3.	ಆ್ಯಂಡ್ರೆ ರಸೆಲ್	52

ಇಂದು ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ

ಅಗ್ರ ಎರಡರ ಮೇಲೆ ಗುಜರಾತ್ ಪಡೆ ಕಣ್ಣು

ಅಹಮದಾಬಾದ್: ಕೈಯಲ್ಲಿದ್ದ ಎರಡು ಅವಕಾಶಗಳನ್ನು ಕಳೆದುಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೌರವ ವಿದಾಯಕ್ಕಾಗಿ ಗುಜರಾತ್ ತಂಡವನ್ನು ಸೋಲಿಸಬೇಕಿದೆ. ಇದು ಎರಡೂ ತಂಡಕ್ಕೂ ಈ ಬಾರಿಯ ಐಪಿಎಲ್‌ನ ಕೊನೆಯ ಪಂದ್ಯವಾಗಿರಲಿದೆ. ಟೈಟಾನ್ಸ್ ತಂಡ ಈಗಾಗಲೇ ಪ್ಲೇಆಫ್‌ಗೇರಿದೆ. ಅತ್ತ ಚೆನ್ನೈ ಸೂಪರ್ ಕಿಂಗ್ಸ್ ಆರನೇ ಸ್ಥಾನದಲ್ಲಿದೆ. ಅಧಿಕೃತವಾಗಿ ಪಂದ್ಯಾವಳಿಯಿಂದ ಹೊರಬೀಳದಿದ್ದರೂ ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಆಫ್‌ಗೆ ಹೋಗಬಹುದಾದ ಎಲ್ಲಾ ಹಾದಿಗಳು ಮುಚ್ಚಿವೆ.

ಚೆನ್ನೈಗೆ ಔಪಚಾರಿಕತೆಯೇ ಜಾಸ್ತಿಯಾಗಿದ್ದರೂ ಟಾಪ್ ಟುಗೇರುವ ಅವಕಾಶ ಹೊಂದಿರುವ ಗುಜರಾತ್ ಟೈಟಾನ್ಸ್‌ಗೆ ಇದು ಮಹತ್ವದ ಪಂದ್ಯ. ಅಹಮದಾಬಾದ್‌ನಲ್ಲಿ ನಡೆಯಲಿರುವ ಈ ಪಂದ್ಯವನ್ನು ಗೆದ್ದರೆ, ಗುಜರಾತ್ ಟಾಪ್-2 ಬಹುತೇಕ ಖಚಿತಗೊಳ್ಳಲಿದೆ. ಅತ್ತ ಚೆನ್ನೈ ಆರನೇ ಸ್ಥಾನದಲ್ಲಿದ್ದು, ಮಿರ್‍ಯಾಕಲ್ ಆಗುವ ನಿರೀಕ್ಷೆಯಲ್ಲಿದೆ. ಒಂದು ವೇಳೆ ಚೆನ್ನೈ ಪ್ಲೇಆಫ್‌ಗೇರಬೇಕೆಂದರೆ, ಈ ಪಂದ್ಯದಲ್ಲಿ ದೊಡ್ಡ ಗೆಲುವು ಸಾಧಿಸಿ ಆರ್‌ಆರ್‌ಗಿಂತಲೂ ಹೆಚ್ಚಿನ ರನ್‌ರೇಟ್‌ನೊಂದಿಗೆ ನಾಲ್ಕನೇ ಸ್ಥಾನಕ್ಕೇರಬೇಕು. ಇಷ್ಟಾದರೂ, ಕೆಕೆಆರ್ ಒಂದು, ಪಂಜಾಬ್ ಒಂದು ಮತ್ತು ಆರ್‌ಆರ್ ಒಂದು ಪಂದ್ಯದಲ್ಲಿ ಸೋಲಬೇಕು.

ಗುಜರಾತ್‌ಗೆ ಭರವಸೆ: ಗುಜರಾತ್ ಟೈಟಾನ್ಸ್‌ಗೆ ಚೆನ್ನೈ ವಿರುದ್ಧದ ಪಂದ್ಯದ ಗೆಲುವು ಬೂಸ್ಟರ್ ಕೊಡಲಿದೆ. ಟಾಪ್ 2ರಲ್ಲಿ ಇದ್ದವರಿಗೆ ಪ್ಲೇಆಫ್‌ನಲ್ಲಿ ಎರಡು ಅವಕಾಶ ಸಿಗಲಿವೆ. ಈ ನಿಟ್ಟಿನಲ್ಲಿ ಗೆಲುವಿನ ದೊಡ್ಡ ಗುರಿ ಗುಜರಾತ್ ಹೊಂದಿದೆ. ಹಿಂದಿನ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಸೋತಿರುವುದು ಗುಜರಾತ್ ವಿವಿಧ ವಿಭಾಗಗಳನ್ನು ಗಟ್ಟಿಗೊಳಿಸಬೇಕಿದೆ. ಕೆಲವು ಬೌಲರ್‌ಗಳು ದುಬಾರಿಯಾಗಿದ್ದಾರೆ. ಆದರೆ ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಗಿಲ್ ಪಡೆ ಸ್ಪಷ್ಟ ಪ್ರಾಬಲ್ಯ ಸಾಧಿಸಿದೆ. ಬ್ಯಾಟಿಂಗ್ ವಿಭಾಗಕ್ಕೆ ಬಂದರೆ ಗಿಲ್, ಬಟ್ಲರ್ ಮತ್ತು ಸುದರ್ಶನ್ ಭರ್ಜರಿ ಲಯದಲ್ಲಿದ್ದು, ವಿಶ್ವಾಸ ಹೆಚ್ಚಿಸಿದೆ.

ಪುಟಿದೇಳುವುದೇ ಚೆನ್ನೈ?: ಒಬ್ಬರಾದ ಮೇಲೊಬ್ಬರು ಗಾಯಗೊಂಡು ಹೊರ ನಡೆಯುವುದು ಚೆನ್ನೈ ತಂಡ ದೊಡ್ಡ ಹಿನ್ನಡೆ. ಪಂದ್ಯಗಳನ್ನು ಗೆಲ್ಲಿಸುತ್ತಿದ್ದ ಜೆಮಿ ಓವರ್‌ಟನ್ ಕೂಡ ಗಾಯದಿಂದಾಗಿ ಹೊರನಡೆದಿದ್ದಾರೆ. ಈ ಹೊಡೆತವೇ ಚೆನ್ನೈಗೆ ಹಿಂದಿನ ಪಂದ್ಯಗಳಲ್ಲಿ ಸೋಲು ನೀಡಿದೆ. ಈ ನಿಟ್ಟಿನಲ್ಲಿ ಲಖನೌ ಮತ್ತು ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆಯಷ್ಟೇ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲಿನ ರುಚಿ ಕೊಟ್ಟಿವೆ. ಮುಖ್ಯವಾಗಿ ಬೌಲಿಂಗ್ ವಿಚಾರದಲ್ಲಿ ಒತ್ತಡ ಎದುರಿಸುತ್ತಿರುವ ಚೆನ್ನೈ ತಂಡದಲ್ಲಿ ಅನುಭವಿ ವೇಗಿಗಳೇ ಇಲ್ಲ. ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪೈಪೋಟಿಯಲ್ಲಿದ್ದ ಅನ್ಶುಲ್ ಕಂಬೋಜ್ ಭಾರೀ ದುಬಾರಿಯಾಗಿದ್ದಾರೆ. ಸ್ಪೆನ್ಸರ್ ಜಾನ್ಸನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಕಾಣಿಸಿಕೊಂಡಿದ್ದು, ಹೆಚ್ಚುವರಿ ಬೌಲರ್ ಆದ ಗುರ್ಜಾಪ್ನೀತ್ ಕೂಡ ದುಬಾರಿಯಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ಋತುರಾಜ್, ದುಬೆ ಮೊದಲಾದವರು ಮಿಂಚಬೇಕಿದೆ.

ಪಿಚ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದಾರೆ. 200 ರನ್ ದಾಟುವುದೇ ಇಲ್ಲಿ ದೊಡ್ಡ ಸವಾಲು. ಹೆಚ್ಚಿನ ಬೌನ್ಸ್, ಕ್ರ್ಯಾಕ್ ಮತ್ತು ಸ್ವಿಂಗ್ ಬ್ಯಾಟರ್‌ಗಳಿಗೆ ಕಾಟ ಕೊಡಬಹುದು. ಇಬ್ಬನಿ ಬೌಲರ್‌ಗಳಿಗೆ ಹಿನ್ನಡೆ ತರಬಹುದು.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಅಹಮದಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕಿರುಸುದ್ದಿ

ಸ್ಕ್ವಾಷ್: ಧೈರ್ಯಗೆ ಗಮನಾರ್ಹ ಗೆಲುವು

ಹೊಸದಿಲ್ಲಿ: 33ನೇ ಏಷ್ಯನ್ ಜೂನಿಯರ್ ವೈಯಕ್ತಿಕ ಸ್ಕ್ವಾಷ್ ಸ್ಪರ್ಧೆಯಲ್ಲಿ ಮಿಂಚಿರುವ ಭಾರತದ ಧೈರ್ಯ ಗೋಗಿಯಾ ವಿಶ್ವದ 5/8ನೇ ಶ್ರೇಯಾಂಕಿತ ಕಾ ಚುನ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಬುಧವಾರ ನಡೆದ ಅಂಡರ್-13 ಪಂದ್ಯಾವಳಿಯಲ್ಲಿ ಅವರು, 12-10, 10-12, 11-7, 11-7ರಿಂದ ಗೆದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಧೈರ್ಯ ತಮ್ಮ ಹೆಸರಿಗೆ ತಕ್ಕಂತೆ ಪ್ರದರ್ಶನ ನೀಡಿದರು. ಎರಡನೇ ಸೆಟ್‌ನಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ, ಮೂರನೇ ಹಾಗೂ ನಾಲ್ಕನೇ ಸೆಟ್‌ನಲ್ಲಿ ಮತ್ತೆ ಪ್ರಾಬಲ್ಯ ಸಾಧಿಸಿದ ಅವರು, ಗೆಲುವು ಸಾಧಿಸಿ ಮುನ್ನಡೆದರು. ಅಂಡರ್-13 ಮಹಿಳೆಯರ ವಿಭಾಗದಲ್ಲಿ ಭಾರತ ಮೂಲದ ರಿಯಾ ದಲಾಲ್ ಧೀರ್ಯಾ ಮಿಥಾಲಿ ಅವರನ್ನು ಸೋಲಿಸಿದರು. ಅಂಡರ್-15 ವಿಭಾಗದಲ್ಲಿ ಧ್ರುವ್ ದಿಸಾಸ್ ಅವರನ್ನು ಸೋಲಿಸಿದರು. ಇನ್ನುಳಿದ ವಿಭಾಗಗಳಲ್ಲೂ ಭಾರತೀಯರು ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಜೂನಿಯರ್ ಪಂದ್ಯಾವಳಿಯು ಅಂಡರ್-13, ಅಂಡರ್-15, 17 ಮತ್ತು ಅಂಡರ್-19 ವಿಭಾಗದಲ್ಲಿ ನಡೆಯುತ್ತವೆ.

ಶೀಘ್ರವೇ ಭಾರತಕ್ಕೆ ಸಾಲ್ಟ್

ಹೊಸದಿಲ್ಲಿ: ವಾರಾಂತ್ಯದೊಳಗೆ ಫಿಲ್ ಸಾಲ್ಟ್ ಭಾರತಕ್ಕೆ ಬರಲಿದ್ದಾರೆಂದು ಹೇಳಲಾಗುತ್ತಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ಅನಿಸಿಕೊಂಡಿರುವ ಸಾಲ್ಟ್ ಬಹುದಿನಗಳಿಂದ ಇಂಗ್ಲೆಂಡ್‌ನಲ್ಲಿದ್ದಾರೆ. ಈ ಹಿಂದೆ ಅವರಿಗಾದ ಗಾಯದ ಪರಿಣಾಮ ಅವರು, ಹೆಚ್ಚಿನ ಚಿಕಿತ್ಸೆಗಾಗಿ ಲಂಡನ್‌ಗೆ ತಲುಪಿದ್ದರು. ಈ ಬೆನ್ನಲ್ಲೇ ಅವರು ಚಿಕಿತ್ಸೆ ಪೂರ್ಣಗೊಳಿಸಿದ್ದಾರೆ. ಶೀಘ್ರವೇ ಭಾರತಕ್ಕೆ ಮರಳಲಿದ್ದಾರೆ. ಪ್ಲೇಆಫ್‌ಗೂ ಮುನ್ನವೇ ತಂಡವನ್ನು ಸೇರಿಕೊಳ್ಳಲಿದ್ದಾರೆಂದು ವರದಿಯಾಗಿದೆ. ಅವರಲ್ಲದೆ, ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ಕೂಡ ಚೇತರಿಸಿಕೊಳ್ಳುತ್ತಿದ್ದು, ಅವರೂ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ. ಹಿಂದಿನ ಪಂದ್ಯಕ್ಕಾಗಿ ಅವರು ಧರ್ಮಶಾಲಾಗೆ ತಲುಪಿರಲಿಲ್ಲ, ಅವರ ಬದಲಿಗೆ ವೆಂಕಟೇಶ್ ಅಯ್ಯರ್ ಕಣಕ್ಕಿಳಿದರೆ, ಪಂದ್ಯದ ನಾಯಕತ್ವವನ್ನು ಜಿತೇಶ್ ಶರ್ಮ ನಿಭಾಯಿಸಿದ್ದರು.

ಹಾಕಿ: ಭಾರತಕ್ಕೆ ಜಯ

ಭೋಪಾಲ್: ಭಾರತ ಅಂಡರ್-18 ಮಹಿಳಾ ಹಾಕಿ ತಂಡ ಆಸ್ಟ್ರೇಲಿಯಾ ವಿರುದ್ಧದ ಸರಣಿಯ ಕೊನೆಯ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿ 4-1 ಅಂತರದಲ್ಲಿ ಗೆಲುವು ಸಾಧಿಸಿದೆ. ಭೋಪಾಲ್‌ನ ಉದವ್ ದಾಸ್ ಮೆಹತಾ ಕೇಂದ್ರ, ಸಾಯಿ ಕೇಂದ್ರದಲ್ಲಿ ಬುಧವಾರ ನಡೆದ ಈ ಪಂದ್ಯದಲ್ಲಿ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಪಂದ್ಯದ ಆರಂಭದಲ್ಲೇ ಆಸ್ಟ್ರೇಲಿಯಾ ಮುನ್ನಡೆ ಸಾಧಿಸಿತು. ಎಂಟನೇ ನಿಮಿಷದಲ್ಲಿ ಔರೋರಾ ಕೋವಾಸೆವಿಚ್ ಗೋಲು ಬಾರಿಸಿ ಪ್ರವಾಸಿ ತಂಡಕ್ಕೆ 1-0 ಮುನ್ನಡೆ ತಂದರು. ಆದರೆ ಭಾರತ ಹೆಚ್ಚು ಸಮಯ ಹಿನ್ನಡೆಯಲ್ಲಿರಲಿಲ್ಲ, ನಾಯಕಿ ಸ್ವೀಟಿ ಕುಜುರ್ 13ನೇ ನಿಮಿಷದಲ್ಲಿ ಸಮಬಲದ ಗೋಲು ದಾಖಲಿಸಿ ಮೊದಲ ಕ್ವಾರ್ಟರ್ ಅಂತ್ಯಕ್ಕೆ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಎರಡನೇ ಕ್ವಾರ್ಟರ್‌ನಲ್ಲಿ ಭಾರತ ತನ್ನ ಆಕ್ರಮಣ ಮುಂದುವರಿಸಿತು. 25ನೇ ನಿಮಿಷದಲ್ಲಿ ದಿಯಾ ಗೋಲು ಬಾರಿಸಿ ತಂಡಕ್ಕೆ 2-1 ಮುನ್ನಡೆ ಒದಗಿಸಿದರು. ಇದರೊಂದಿಗೆ ಭಾರತ ಅರ್ಧಾವಧಿಗೆ ಮುನ್ನ ಮೇಲುಗೈ ಸಾಧಿಸಿತು. ಎರಡನೇ ಅರ್ಧದಲ್ಲೂ ಭಾರತೀಯ ಆಟಗಾರ್ತಿಯರು ಹಿಡಿತ ಕಳೆದುಕೊಳ್ಳಲಿಲ್ಲ, ಮೂರನೇ ಕ್ವಾರ್ಟರ್‌ನಲ್ಲಿ ಪ್ರಿಯಾಂಕಾ ಮಿಂಜ್ 44ನೇ ನಿಮಿಷದಲ್ಲಿ ಗೋಲು ದಾಖಲಿಸಿ ಅಂತರವನ್ನು ಹೆಚ್ಚಿಸಿದರು. ಅಂತಿಮ ಕ್ವಾರ್ಟರ್‌ನಲ್ಲಿ ನೌಶೀನ್ ನಾಜ್ ಮತ್ತೊಂದು ಗೋಲು ಬಾರಿಸಿ ಭಾರತದ ಭರ್ಜರಿ ಗೆಲುವಿಗೆ ಮೆರುಗು ತಂದರು. ಈ ಗೆಲುವಿನೊಂದಿಗೆ ಭಾರತ ಸರಣಿಯನ್ನು ಉತ್ಸಾಹಭರಿತವಾಗಿ ಮುಗಿಸಿತು. ಇದೇ ತಿಂಗಳ ಅಂತ್ಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಅಂಡರ್-18 ಏಷ್ಯಾಕಪ್‌ಗೆ ಸಿದ್ಧತೆಯ ಭಾಗವಾಗಿದ್ದ ಈ ಸರಣಿಯಲ್ಲಿ ಭಾರತೀಯ ತಂಡ ಉತ್ತಮ ಅನುಭವ ಪಡೆದುಕೊಂಡಿದೆ. ನಾಲ್ಕು ಪಂದ್ಯಗಳ ಸರಣಿಯನ್ನು ಆಸ್ಟ್ರೇಲಿಯಾ 3-1 ಅಂತರದಲ್ಲಿ ತನ್ನದಾಗಿಸಿಕೊಂಡಿತು.

ಕುಸಿದ ಮುಂಬೈ ಇಂಡಿಯನ್ಸ್

ಕೋಲ್ಕತ್ತಾ: ದಿಢೀರ್ ಕುಸಿತ ಕಂಡ ಮುಂಬೈ ಇಂಡಿಯನ್ಸ್ ಕೆಕೆಆರ್‌ಗೆ ಸಾಮಾನ್ಯ ಗುರಿ ಮಾತ್ರ ಕೊಟ್ಟಿತು. ಮಳೆ ಅಡ್ಡಿಯಾದ ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಮುಂಬೈ ಕೆಕೆಆರ್ ವೇಗಿಗಳ ದಾಳಿಗೆ ತತ್ತರಿಸಿತು. ಮಧ್ಯಮ ಓವರ್‌ಗಳಲ್ಲಿ ನಾಯಕ ಹಾರ್ದಿಕ್ ಪಾಂಡ್ಯ ಉತ್ತಮ ಬ್ಯಾಟಿಂಗ್ ಮಾಡಿವಂತೆ ಕಂಡರು. ಆದರೆ ಹೆಚ್ಚಿನ ಕೊಡುಗೆ ಕೊಡಲಿಲ್ಲ, ತಿಲಕ್ ವರ್ಮಾ 32 ಬಾಲ್‌ಗಳಲ್ಲಿ 20 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮದಲ್ಲಿ ಕಾರ್ಬಿನ್ ಬಾಷ್ ಸ್ಫೋಟಕ ಬ್ಯಾಟಿಂಗ್ ಮಾಡಿದ ನಂತರ ಮುಂಬೈ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿತು.

ಬ್ಯಾಟಿಂಗ್‌ಗಿಳಿದ ಮುಂಬೈಗೆ ಆಘಾತ ಎದುರಾಯಿತು. ಎರಡನೇ ಓವರ್ ಮಾಡಲು ಬಂದ ಕ್ಯಾಮರೋನ್ ಗ್ರೀನ್ ರಯಾನ್ ರಿಕೆಲ್ಟನ್ ವಿಕೆಟ್ ಕಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ನಮನ್ ಬರುತ್ತಿದ್ದಂತೆ ಪೆವಿಲಿಯನ್ ಹೊರಟರು. ರೋಹಿತ್ ಶರ್ಮ 15 ರನ್ ದಾಟಲಿಲ್ಲ, ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಮೊದಲಿನ ಎರಡು ಬಾಲ್‌ಗಳಲ್ಲಿ ಬೌಂಡರಿ ಬಾರಿಸಿದರೆ, ಒಂದು ಸಿಕ್ಸರ್ ಕೂಡ ಬಾರಿಸಿ ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆ ಮೂಡಿಸಿದರು. ಆದರೆ 15 ರನ್‌ಗಳಿಗೆ ಅವರೂ ವಿಕೆಟ್ ಒಪ್ಪಿಸಿದರು. 8.4 ನೇ ಓವರ್ ವೇಳೆ ಮಳೆಯಿಂದಾಗಿ ಪಂದ್ಯ ನಿಂತಿತು. ಬಳಿಕ ಮತ್ತೆ ಮುಂಬೈ ತತ್ತರಿಸಿತು. ಅಂತಿಮ ಓವರ್‌ಗಳಲ್ಲಿ 18 ಬಾಲ್‌ಗಳಲ್ಲಿ 2 ಸಿಕ್ಸರ್, 3 ಬೌಂಡರಿಗಳೊಂದಿಗೆ 32 ರನ್ ಗಳಿಸಿದ ಬಾಷ್ ಸ್ಕೋರ್ ಹಿಗ್ಗಿಸಿದರು.



ಸಿದ್ಧಾರ್ಥ್ ನಾಯರ್‌ಗೆ ಜಯ

ವಿಜಯಪುರ: ಇಲ್ಲಿ ನಡೆಯುತ್ತಿರುವ ರಾಜ್ಯ ಬ್ಯಾಡ್ಮಿಂಟನ್ ಸ್ಪರ್ಧೆಯ 15 ವರ್ಷದೊಳಗಿನ ಸಿಂಗಲ್ಸ್ ಬಾಲಕರ ರೌಂಡ್ ವಿಭಾಗದಲ್ಲಿ ಬೆಂಗಳೂರಿನ ಸಿದ್ಧಾರ್ಥ ನಾಯರ್ ಅವರು ಬೆಂಗಳೂರಿನ ಪ್ರಥಮ ಹರ್ಷ ವಿರುದ್ಧ 21-6, 21-8 ಅಂತರದಿಂದ ಜಯಗಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರದ ಯಶವರ್ಧನ ಎಸ್.ಆರ್. ಅವರು ದಕ್ಷಿಣ ಕನ್ನಡದ ದಕ್ಷಾ ಡಿ.ಸಿ. ವಿರುದ್ಧ 21-7, 21-7ರಿಂದ ಗೆದ್ದರು.

ರಾಯಚೂರಿನ ರೂಹನ್ ಕರುತುರಿ ಬೆಂಗಳೂರಿನ ಚೇತಸ್ ಮುಂಡುರಗಿ ವಿರುದ್ಧ 25-23, 22-20, ಮೈಸೂರಿನ ಗೌರವ ಎಸ್. ಅವರು ಬೆಂಗಳೂರಿನ ಕೃಷ್ಣಾ ಪ್ರದ್ಯುತ್ ವಿರುದ್ಧ 21-13, 21-14 ರಿಂದ ಪ್ರಾಬಲ್ಯ ಸಾಧಿಸಿದರು. 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್‌ನಲ್ಲಿ ಬೆಂಗಳೂರಿನ ಮೈತಾ ನಾಯ್ಡು ಸುರಿ ಶೆಟ್ಟಿ ಅವರು ದಕ್ಷಿತಾ ಮುಂಡ್ಕಾ ವಿರುದ್ಧ 21-10, 21-18 ಅಂತರದಿಂದ ಗೆದ್ದರೆ, ಬೆಂಗಳೂರಿನ ಅರ್ಪಿತಾ ಬಾಬು ಅವರು ಹಮ್ಸಿಕಾ ಪಾಣಿಗ್ರಾಹಿ ವಿರುದ್ಧ 21-8, 21-11, ಬೆಂಗಳೂರು ಗ್ರಾಮಾಂತರದ ಮಾನ್ಯ ಎಂ ಅವರು ಬೆಂಗಳೂರು ನಗರದ ಚೇಸ್ತಾ ಗುಪ್ತಾ ವಿರುದ್ಧ 21-11, 12-21, 21-9 ರಿಂದ ಗೆಲುವು ದಾಖಲಿಸಿದರು. 15 ವರ್ಷದೊಳಗಿನ ಬಾಲಕರ ಡಬಲ್ಸ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್ ನಾಯರ್, ಸಿದ್ಧಾರ್ಥ ಎಸ್. ನಾಯರ್ ಅವರು ಬೆಂಗಳೂರಿನ ಓಜಸ್ ಕಾಂತ್ರಿ ನಾಯಕ, ದಾವಣಗೆರೆಯ ವರುಷ್ ಎಸ್ ಗೌಡ ವಿರುದ್ಧ 21-11, 21-10 ಅಂತರದಲ್ಲಿ ಜಯಗಳಿಸಿದ್ದಾರೆ. ದಕ್ಷಿಣ ಕನ್ನಡದ ಕಿಯಾನ್ ಅಬ್ದುಲ್ ನಿಸಾರ್, ಬೆಂಗಳೂರಿನ ಶೈಲೇಶ್ ಶ್ರವಣ ಅವರು ಬೆಂಗಳೂರು ಗ್ರಾಮಾಂತರದ ಚಾರ್ವಿಕ್‌ಗೌಡ, ಉತ್ಕರ್ಷ ಬಿ. ಅಜಯ ವಿರುದ್ಧ 21-14, 21-19 ಅಂತರದಿಂದ ಗೆದ್ದರು.



ಮಾನಸಿಕ ಸವಾಲು ಎದುರಿಸಲು ರಾಹುಲ್ ಸಹಾಯ

ದ್ರಾವಿಡ್‌ರನ್ನು ಎಂದಿಗೂ ಮರೆಯಲಾರೆ: ವಿರಾಟ್

ಬೆಂಗಳೂರು: ನನ್ನ ಕ್ರಿಕೆಟ್ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗಲೂ ನಾನು ಮಾನಸಿಕ ಸವಾಲುಗಳ ವಿರುದ್ಧ ಹೋರಾಡುತ್ತಲೇ ಇದ್ದೆ. ಈ ಸಮಯದಲ್ಲಿ ನನ್ನ ಕೈಹಿಡಿದವರೆಂದರೆ ರಾಹುಲ್ ದ್ರಾವಿಡ್ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಮಂಗಳವಾರ ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ಲ್ಯಾಬ್ ಇಂಡಿಯನ್ ಸ್ಪೋರ್ಟ್ಸ್ ಸಮ್ಮಿಟ್‌ನಲ್ಲಿ ಮಾತನಾಡಿದ ವಿರಾಟ್, ಟೆಸ್ಟ್, ಏಕದಿನ ಮತ್ತು ಟಿ20ಯಲ್ಲಿ ನಾಯಕನಾಗಿದ್ದಾಗ ವಿವಿಧ ರೀತಿಯ ಸವಾಲುಗಳನ್ನು ಎದುರಿಸಿದೆ. ಮುಖ್ಯವಾಗಿ ಮಾನಸಿಕ ಸವಾಲುಗಳು. ಇದೆಲ್ಲಾ ಸವಾಲುಗಳಿಂದ ಹೊರಬರಲು ನನಗೆ ಸಹಾಯ ಮಾಡಿದ್ದು ರಾಹುಲ್ ದ್ರಾವಿಡ್. ಅವರನ್ನು ನಾನು ಜೀವನದಲ್ಲಿ ಎಂದೆಂದಿಗೂ ಮರೆಯಲಾರೆ ಎಂದರು.

ನಾವು ಮೈದಾನದಲ್ಲಿ ಒಂದು ಸಣ್ಣ ಗೀಟಿನ ನಡುವೆ ಇರುತ್ತೇವೆ. ನಮ್ಮ ವೈಯಕ್ತಿಕ ಪ್ರದರ್ಶನದ ಬಗ್ಗೆ ನಮಗೆ ಯಾವಾಗಲೂ ಅನುಮಾನ ಹುಟ್ಟಲಾರಂಭಿಸುತ್ತದೆ. ಈಗಲೂ ನಾನು ನೆಟ್‌ನಲ್ಲಿ ಹೋದಾಗ ಉತ್ತಮ ಫಲಿತಾಂಶ ಬರದಿದ್ದರೆ ಈಗಿನ ಯುವಕರಲ್ಲಿ ಇವರು 20 ಆಡಿದವರೆ ಎಂಬ ಪ್ರಶ್ನೆ ಹುಟ್ಟಿದರೆ ಎಂಬ ಒತ್ತಡ ನನ್ನೆದುರಿಗೆ ಬರುತ್ತದೆ. ನಾನು ಟೆಸ್ಟ್ ತಂಡದ ನಾಯಕನಾಗಿದ್ದಾಗ ಇಂಥ ಪ್ರಶ್ನೆ ಬಹುತೇಕ ದಿನವೂ ಎದುರಿಸುತ್ತಿದೆ. ಆ ಸಮಯದಲ್ಲಿ ನನ್ನಲ್ಲಿ ಒಂದಿಷ್ಟು ಧೈರ್ಯ ತುಂಬಿದವರೆಂದರೆ ಅದು ಕೋಚ್ ರಾಹುಲ್ ಎಂದು ಹೇಳಿದರು.

ರಾಹುಲ್ ವೃತ್ತಿಜೀವನವೇ ಪ್ರೇರಣೆ: ನಾನು ಈ ಬಗ್ಗೆ ರಾಹುಲ್ ಮತ್ತು ಅಂದಿನ ಬ್ಯಾಟಿಂಗ್ ಕೋಚ್ ವಿಕ್ರಮ ರಾಥೋಡ್ ಅವರೊಂದಿಗೆ ಮಾತನಾಡುತ್ತಿದ್ದೆ. ಮುಖ್ಯವಾಗಿ ರಾಹುಲ್ ಅವರ ವೈಯಕ್ತಿಕ ಕರಿಯರ್ ನನಗೆ ಇದರಿಂದ ಹೊರಬರಲು ಪ್ರೇರಣೆ ನೀಡಿತ್ತು. ಈ ಬಗ್ಗೆ ಮಾತನಾಡುತ್ತಲೇ ನನಗೆ ಅವರಿಬ್ಬರೂ ನಾನು ಟೆಸ್ಟ್ ಕ್ರಿಕೆಟ್‌ಗೆ ಏನು ಮಾಡಿದ್ದೇನೆ, ನಾನು ಮಾಡಿದ ದಾಖಲೆಗಳೇನು, ಕೊಡುಗೆಗಳೇನು ಎಂಬುದರ ಬಗ್ಗೆ ನೆನಪಿಸುತ್ತಿದ್ದರು. ಅದರಿಂದಲೇ ನಾನು ಹೊರಬಂದು ಅಸಲು ಆಟವಾಡಲು ಸಾಧ್ಯವಾಗುತ್ತಿತ್ತು ಎಂದು ಕೊಹ್ಲಿ ಹೇಳಿದ್ದಾರೆ.

ಹಾಕಿ ಆಟಗಾರರಿಗೆ ಇರುವ ಫಿಟ್ನೆಸ್ ನಮಗಿಲ್ಲ: ನಮ್ಮ ದೇಶದಲ್ಲಿ ಕ್ರಿಕೆಟ್ ಒಂದು ಪ್ರೈಮ್ ಫೋಕಸ್ ಇರುವ ಕ್ರೀಡೆ. ಆದರೆ ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ವಿಚಾರವೇನೆಂದರೆ ಹಾಕಿ ಆಟಗಾರರಿಗಿರುವ ಶೇ. 15ರಷ್ಟು ಫಿಟ್ನೆಸ್ ಕೂಡ ನಮಗಿಲ್ಲ, ನಮ್ಮ ಫಿಟ್ನೆಸ್ ಮತ್ತು ಆಟದ ಸೆಷನ್‌ಗಳನ್ನು ನಮ್ಮ ದೇಶದ ಹಾಕಿ ಆಟಗಾರರು ನೋಡಿಬಿಟ್ಟರೆ ನಗುತ್ತಾರೆ. ಏಕೆಂದರೆ ಅವರು ನಾವು ಮಾಡುವ ಪರಿಶ್ರಮಕ್ಕಿಂತ ಹೆಚ್ಚಿನ ಕಷ್ಟಪಡುತ್ತಾರೆ.



ಟೆಸ್ಟ್ ಬಿಟ್ಟ ಕಾರಣ ಬಹಿರಂಗ

ನಮ್ಮ ಬ್ಯಾಟಿಂಗ್ ಘಟಕ ಮತ್ತು ನಾಯಕತ್ವದ ಕೇಂದ್ರಬಿಂದುವಾದ ಸ್ಥಳದಲ್ಲಿ ನಾನು ಕೊನೆಗೊಂಡೆ. ಭಾರತೀಯ ಕ್ರಿಕೆಟ್ ಉನ್ನತ ಸ್ಥಾನದಲ್ಲಿ ಉಳಿಯುವಂತೆ ನೋಡಿಕೊಳ್ಳಲು ನಾನು ತುಂಬಾ ಉತ್ಸುಕನಾಗಿದ್ದೆ. ಅದಕ್ಕಾಗಿಯೇ ನಾನು ನಾಯಕತ್ವವನ್ನು ತೊರೆಯುವ ಹೊತ್ತಿಗೆ, ನಾನು ಸಂಪೂರ್ಣವಾಗಿ ಕಳೆದುಹೋಗಿದ್ದೆ. ನಾನು ಅದರಿಂದ ಸಂಪೂರ್ಣವಾಗಿ ಮುಳುಗಿದ್ದೆ. ಅದು ಭಯಾನಕವಾಗಿತ್ತು. ನಿರೀಕ್ಷೆಗಳನ್ನು ನಿರ್ವಹಿಸುವುದು ಕಷ್ಟಕರವಾಗಿತ್ತು. ಕೊಹ್ಲಿ ಹೇಳಿದರು. ನಿಮಗೆ ತಿಳಿದಿದೆ, ಅಭದ್ರತೆ ಬದಲಾವಣೆಯಾಗಲು ಬಿಡುವುದಿಲ್ಲ. ಅದಕ್ಕಾಗಿ, ನಾನು ನಿರ್ವಹಣೆಗೆ ಮತ್ತು ತಂಡಕ್ಕೆ ಮನ್ನಣೆ ನೀಡಬೇಕು. ಆದರೆ ಫಾರ್ಮ್ ಹೆಚ್ಚು ಕಾಲ ಉಳಿಯುವುದಿಲ್ಲ, ಆಗ, ಹೌದು, ಆ ಎರಡೂ ಜವಾಬ್ದಾರಿಗಳು ನಿಮ್ಮ ಮೇಲೆ ಭಾರವಾಗಲು ಪ್ರಾರಂಭಿಸುತ್ತವೆ. ಆದ್ದರಿಂದ, ಕಠಿಣವಾಗಿತ್ತು, ಎಂದು ಅವರು ಹೇಳಿದರು.

ಎಸ್.ಎಂ ಕೃಷ್ಣ ಸ್ಮರಣಾರ್ಥ ಓಪನ್ ಟೆನಿಸ್ | ಮುನ್ನಡೆದ ಏಕೈಕ ಆಟಗಾರ

ಟೆನಿಸ್: ಕ್ವಾರ್ಟರ್‌ಗೆ ಶಶಿಕುಮಾರ್

ಬೆಂಗಳೂರು: ಇಲ್ಲಿ ನಡೆಯುತ್ತಿರುವ ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಮುಕುಂದ್ ಶಶಿಕುಮಾರ್ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ ಏಕೈಕ ಭಾರತೀಯ ಆಟಗಾರರಾಗಿ ಹೊರಹೊಮ್ಮಿದರು.




ಇದೇ ವೇಳೆ ವೈಲ್ಡ್ ಕಾರ್ಡ್ ಆಟಗಾರ ಕ್ರಿಶ್ ತ್ಯಾಗಿ ಮತ್ತೊಮ್ಮೆ ಹೋರಾಟಮಯ ಪ್ರದರ್ಶನ ನೀಡಿದರೂ ಮೂರನೇ ಶ್ರೇಯಾಂಕಿತ ಬ್ರಿಟನ್‌ನ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಸೋಲನುಭವಿಸಿ ತಮ್ಮ ಅಭಿಯಾನಕ್ಕೆ ತೆರೆ ಎಳೆದರು. ಜಪಾನ್‌ನ ಅರ್ಹತಾ ಸುತ್ತಿನ ಆಟಗಾರ ಶೈಯೊ ಯಮಾನಾಕಾ ವಿರುದ್ಧ ಮುಕುಂದ್ 6-4, 7-6 (1) ಅಂತರದಲ್ಲಿ ಗೆದ್ದು ಕೊನೆಯ ಎಂಟರ ಘಟ್ಟ ತಲುಪಿದರು. ಮೊದಲ ಸೆಟ್‌ನ 10ನೇ ಗೇಮ್‌ನಲ್ಲಿ ನಿರ್ಣಾಯಕ ಬ್ರೇಕ್ ಸಾಧಿಸಿದ ಮುಕುಂದ್ ಮುನ್ನಡೆ ಪಡೆದರು. ಎರಡನೇ ಸೆಟ್ ತೀವ್ರ ಪೈಪೋಟಿಯಿಂದ ಕೂಡಿದ್ದು, ಯಮಾನಾಕಾ ಬಲಿಷ್ಠ ಸರ್ವ್ ಮೂಲಕ ಒತ್ತಡ ತಂದರು.

ಒಂದು ಹಂತದಲ್ಲಿ ಸೆಟ್ ಪಾಯಿಂಟ್ ಎದುರಿಸಿದ್ದ ಮುಕುಂದ್ ಅದ್ಭುತ ಮರಳಾಟ ನೀಡಿ ಟೈಬ್ರೇಕ್‌ಗೆ ಪಂದ್ಯ ಕೊಂಡೊಯ್ದರು. ಬಳಿಕ ಟೈಬ್ರೇಕ್‌ನಲ್ಲಿ ಕೇವಲ ಒಂದು ಅಂಕ ಬಿಟ್ಟುಕೊಟ್ಟು 1 ಗಂಟೆ 46 ನಿಮಿಷಗಳ ಹೋರಾಟದಲ್ಲಿ ಜಯ ಸಾಧಿಸಿದರು. ಡಬಲ್ಸ್ ವಿಭಾಗದಲ್ಲೂ ಮುಕುಂದ್ ಉತ್ತಮ ಪ್ರದರ್ಶನ ನೀಡಿದರು. ಆದಿಲ್ ಕಲ್ಯಾಣಪೂರ ಜೊತೆಗೂಡಿ ಡೊಮಿನಿಕ್ ಪಾಲನ್ ಮತ್ತು ದಿಗ್ವಿಜಯಪ್ರತಾಪ್ ಸಿಂಗ್ ಜೋಡಿಯನ್ನು 6-3, 7-5 ಅಂತರದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕ್ರಿಶ್‌ಗೆ ನಿರಾಸೆ: ಇನ್ನೊಂದೆಡೆ, ಬೆಂಗಳೂರು ಮೂಲದ ಕ್ರಿಶ್ ತ್ಯಾಗಿ ಮೂರನೇ ಶ್ರೇಯಾಂಕಿತ ಹ್ಯಾಮಿಷ್ ಸ್ಟುವರ್ಟ್ ವಿರುದ್ಧ ಎರಡು ಗಂಟೆಗಳಿಗಿಂತ ಹೆಚ್ಚು ಕಾಲ ಕಠಿಣ ಹೋರಾಟ ನಡೆಸಿದರು. ಮೊದಲ ಸೆಟ್ 6-4 ಅಂತರದಲ್ಲಿ ಗೆದ್ದ ಕ್ರಿಶ್, ಎರಡನೇ ಸೆಟ್‌ನಲ್ಲೂ ಆರಂಭಿಕ ಮುನ್ನಡೆ ಪಡೆದಿದ್ದರು. ಆದರೆ ಅನುಭವದ ಆಟ ಪ್ರದರ್ಶಿಸಿದ ಸ್ಟುವರ್ಟ್ ಪಂದ್ಯವನ್ನು 4-6, 6-4, 6-3 ಅಂತರದಲ್ಲಿ ತಿರುಗಿಸಿಕೊಂಡರು. ಭಾರತದ ಸಿದ್ಧಾರ್ಥ್ ರಾವತ್ ಅಭಿಯಾನವೂ ಅಂತ್ಯಗೊಂಡಿತು. ಅವರು ಸರ್ಬಿಯಾದ ಆರನೇ ಶ್ರೇಯಾಂಕಿತ ಒಗ್ನೆನ್ ಮಿಲಿಕ್ ವಿರುದ್ಧ 6-3, 6-1 ಅಂತರದಲ್ಲಿ ಸೋತರು. ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತ ಕೀಗನ್ ಸ್ಮಿತ್ ವಿರುದ್ಧ ಅಚ್ಚರಿ ಜಯ ಸಾಧಿಸಿದ್ದ ಮನೀಶ್ ಸುರೇಶ್‌ಕುಮಾರ್ ಕೂಡ ಮಾಜಿ ವಿಶ್ವ ನಂ. 40 ಇಲ್ಯಾ ಇವಾಶ್ಕಾ ವಿರುದ್ಧ 1-6, 1-6 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5990

ಎಡದಿಂದ ಬಲಕ್ಕೆ

2.ವಾಹನ-ಲಾರಿ ಸೇರಿ ಕಣ್ಣೀರಾಯ್ತು (5)
6.ವಾಹಿಗಳ ಲೋಕದ ಒಡೆಯ (2)
8.ಮಾನವಕುಲದ ಮೂಲಪುರುಷ (2)
9.ಅತಿಯಾದ ಕೌತುಕವಿದು (3)
10.ತಾತ್ಕಾಲಿಕ-ಕೂಡಲೆ ಬಂದು ಹೋಗುವಂಥಾದ್ದು (3)
11.ರಮಣನು ಏರಿ ಕುಳಿತ ವೃಕ್ಷ (2)
12.ತಿಂಡಿ ಕಡಿಯುವ ದಂತ ತಿರುಗಿದೆ (2)
14.ವಿವೇಚನಾ ಶಕ್ತಿ-ಅರಿವು ಇದು (5)
16.ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡ ಪಕ್ಷ (4)
17.ಚೂರುಚೂರಾಗಿರುವುದು ದ್ವಿರುಕ್ತಿಯಲ್ಲಿದೆ (4)

ಮೇಲಿನಿಂದ ಕೆಳಕ್ಕೆ

1.ಸಂಖ್ಯೆಯ ಕ್ರಮದಲ್ಲಿ ಮೂರನೆಯದು (3)
3.ಕೋಕಪಕ್ಷಿಯ ಮೊದಲು ಗಾಲಿಯಿದೆ (4)
4.ನೀರಲ್ಲಿ ಹುಟ್ಟುವ ಹೂವಿನಂಥಹ ಕಣ್ಣುಳ್ಳವನು (4)
5.ದಾಸನು ಶೇಖರಿಸಿಟ್ಟ ಸಾಮಾನು (3)
7.ಚುನಾವಣೆಯಲ್ಲಿ ತನ್ನ ಅಭಿಪ್ರಾಯ ತಿಳಿಸುವವನು (4)
8.ಮಮ-ಕಲ್ಲು ಒಳಗೊಂಡ ಮೃದುಬಟ್ಟೆ (4)
11.ಉಸುಕು ತುಂಬಿದ ವಿಶಾಲಪ್ರದೇಶ (4)
13.ಪಟ್ಟು ಹಿಡಿಯುವವನು-ಛಲ ಬಿಡದವನು (4)
14.ರೀತಿ-ಕ್ರಮವಿಲ್ಲಿ ತಲೆಕೆಳಗಾಗಿದೆ (3)
15.ಕೆಳಗಿನಿಂದ ಮೇಲೇರಿದ ಸಖಿ (3)

5989 ಉತ್ತರ

ಎಡದಿಂದ ಬಲಕ್ಕೆ:

1.ದೂರದರ್ಶಕಯಂತ್ರ
3.ಹರ 4.ಪಟ್ಟಿ
5.ಹಂದರ 7.ರಾಣಿವಾಸ
9.ಕಸಕಸೆ 11.ಅಡಕಲು
13.ಅಪಾದಿತ
15.ನಮೂದಿಸು
16.ಲಗಾಯಿಸು

ಮೇಲಿನಿಂದ ಕೆಳಕ್ಕೆ:

1.ದೂರವಾಣಿ 2.ಕರಪತ್ರ
5.ಹಂಸ 6.ಕರ
8.ವಾಹಕ 10.ಪಾಯಸ
11.ಅಡಮಾನ
12.ಲುಟಾಯಿಸು
13.ಅಪಕ್ವಾಲ 14.ತವಕಿಸು

ಕಿರುಸುದ್ದಿ

ಎರಡು ಕೋಮಿನ ವಿವಾದ ಗ್ರಾಮದ ಮೇಲೆ ಹದ್ದಿನಕಣ್ಣು

• **ಬೇಲೂರು:** ಇಬ್ಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಹೊಸಹಳ್ಳಿ ಗ್ರಾಮದ ಎರಡು ಕೋಮಿನ ನಡುವಿನ ವಿವಾದ ತೀರ ಮಿತಿ ಮೀರಿದ ಜಾತಿ ವೈಷಮ್ಯ ಶಾಂತಿಯಿಂದ ಬಗೆಹರಿಸಲು ಪೋಲಿಸರು ಗ್ರಾಮದ ಮೇಲೆ ಹದ್ದಿನ ಕಣ್ಣು ಇಡುವ ಮೂಲಕ ಗೊಂದಲಕ್ಕೆ ಕಾರಣವಾದ ವರ ಮೇಲೆ ಶಿಸ್ತು ಕ್ರಮಕ್ಕೆ ಗೊಳ್ಳಿ ಎಂದು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣ ದಲ್ಲಿ ನಡೆದ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿನ ಎರಡು ಕೋಮುಗಳ ನಡುವೆ ಏರ್ಪಟ್ಟ ಜಾತಿ ವೈಷಮ್ಯದ ಬಗ್ಗೆ ಕರೆಯ ಲಾದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು ಹೊಸಹಳ್ಳಿ ಗ್ರಾಮದಲ್ಲಿ ಸದ್ಯ ದಲಿತ ಸಮುದಾಯ ಮತ್ತು ಗಂಗಾಮತಸ್ಥರು ಸಾಮರಸ್ಯದಿಂದ ಬದುಕು ಸಾಗಿಸುತ್ತಿರುವ ಸಂದರ್ಭ ದಲ್ಲಿ ಜಾತ್ರೆ ವಿಷಯವಾಗಿ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಜಾತಿ ನಿಂಧನೆ ಮತ್ತು ಹೆಣ್ಣು ಮಕ್ಕಳನ್ನು ಅಪಮಾನಿ ಸಿದ ಸಂಬಂಧ ಎರಡು ಕೋಮಿನ ನಡುವೆ ಮಾತಿಗೆ ಮಾತು ಬೆಳೆದು ಇಂದು ಗ್ರಾಮದಲ್ಲಿ ಪೋಲಿಸ್ ಪ್ರಕರಣಗಳು ಸೇರಿದಂತೆ ಗ್ರಾಮದಲ್ಲಿ ಒಂದು ರೀತಿಯಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾದ ಕಾರಣದಿಂದ ಹೊಸಹಳ್ಳಿ ಗ್ರಾಮದಲ್ಲಿ ಮುಂದಿನ ದಿನದಂದು ಸಾಮರಸ್ಯ ಮತ್ತು ಸೋದ ರತ್ವದಲ್ಲಿ ಬಾಳಬೇಕು ಎಂಬ ಹಿನ್ನೆಲೆಯಲ್ಲಿ ಇಂದು ಬೇಲೂರು ತಾಲ್ಲೂಕು ಪಂಚಾಯತ ಸಭಾಂಗಣದಲ್ಲಿ ಶಾಂತಿ ಸಭೆಯನ್ನು ಕರೆಯಲಾಗಿದೆ.

ನಮ್ಮೂರ ಶಾಲೆ, ನಮ್ಮೂರಲ್ಲೇ ಉಳಿಯಲಿ

• **ಅರಸೀಕೆರೆ:** ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಕರೆ ಕೋಡಿಹಳ್ಳಿ ಧನಂಜಯಪುರ ಸರ್ಕಾರಿ ಶಾಲೆಯನ್ನು ಜಾವಗಲ್ ಶಾಲೆಗೆ ವಿಲೀನಗೊಳಿಸಲು ಹೊರಟಿರುವ ಸರ್ಕಾರದ ಅಪ್ರಜಾತಾಂತ್ರಿಕ ಯೋಜನೆಯ ವಿರುದ್ಧ ಅರಸೀಕೆರೆ ತಾಲೂಕಿನ ಧನಂಜಯಪುರ ಗ್ರಾಮದ ವಿದ್ಯಾರ್ಥಿಗಳು ಮತ್ತು ಪೋಷಕರ ಬೃಹತ್ ಪ್ರತಿಭಟನೆ ನಡೆಸಿದರು. ಪ್ರತಿಭಟನ ಸಭೆಯನ್ನು ಉದ್ದೇಶಿಸಿ ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚೈತ್ರ ಮಾತನಾಡಿ, ಕರ್ನಾಟಕ ರಾಜ್ಯದ ಜನತೆ ಕೆಪಿಎಸ್ ಮ್ಯಾಗ್ನೆಟ್ ವಿರೋಧಿಸಿ, ನಮ್ಮೂರ ಶಾಲೆ ಉಳಿಯಲಿ ಎಂದು ಒಕ್ಕೊರಲಿನಿಂದ ಆಗ್ರಹಿಸುತ್ತಿದ್ದಾರೆ. ನಮ್ಮ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ಸತತವಾಗಿ ಕಳೆದ ಐದು ತಿಂಗಳುಗಳಿಂದ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಿ ಗ್ರಾಮೀಣ ಭಾಗದ ಶಾಲೆಗಳನ್ನು ಉಳಿಸಲು ಹೋರಾಟ ನಡೆಸುತ್ತಿದೆ. ಈಗಾಗಲೇ ಅರಸೀಕೆರೆ ತಾಲೂಕಿನ ದೊಡ್ಡ ಮೇಟಿ ಕುರ್ಕೆ ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳ್ಳುವ ಶಾಲೆಯ ಪೋಷಕರು ನಮಗೆ ಕೆಪಿಎಸ್ ಶಾಲೆ ಬೇಡ ನಾವು ನಮ್ಮ ಮಕ್ಕಳನ್ನು ಕಳುಹಿಸುವುದಿಲ್ಲ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಈ ನಡುವೆಯೂ ಸರ್ಕಾರ ಅವರ ಮನವಿಯನ್ನು ಪರಿಗಣಿಸದೆ ಶಾಲೆಗಳನ್ನು ಮುಚ್ಚಲು ಅಧಿಕೃತ ಪಟ್ಟಿ ಬಿಡುಗಡೆ ಮಾಡಿದೆ.

ದೇವನಹಳ್ಳಿ ತಾಲೂಕು ಪಂಚ ಗ್ಯಾರಂಟಿ ಯೋಜನೆಗಳ ಕೆಡಿಪಿ ಸಭೆ | ಸೌಲಭ್ಯ ಸಕಾಲದಲ್ಲಿ ತಲುಪಿಸಿ

ಗ್ಯಾರಂಟಿ ಯೋಜನೆಯಲ್ಲಿ ಉತ್ತಮ ಸಾಧನೆ

• **ದೇವನಹಳ್ಳಿ :** ಇಲ್ಲಿವರೆಗೆ ಗೃಹಲಕ್ಷ್ಮೀ ಯೋಜನೆಯಲ್ಲಿ 46,821ನ್ನು ಗುರಿ ಹೊಂದಿದೆ. ಅದರಲ್ಲಿ ಇಲ್ಲಿಯವರೆಗೂ 46821 ಗುರಿ ಶೇ.100 ಪ್ರತಿಶತಃ ಸಾಧಿಸಲಾಗಿರುತ್ತದೆಂದು ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಸಿ.ಜಗನಾಥ್ ತಿಳಿಸಿದರು. ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯು ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲಾಖಾ ಅಧಿಕಾರಿಗಳಿಗೆ ಪಂಚ ಗ್ಯಾರಂಟಿ ಯೋಜನೆಯನ್ನು ಸಕಾಲದಲ್ಲಿ ಜನರಿಗೆ ತಲುಪಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಗೃಹಲಕ್ಷ್ಮೀ ಯೋಜನೆ: ಇಲ್ಲಿಯವರೆಗೂ ಗೃಹಲಕ್ಷ್ಮೀ ಯೋಜನೆಯಲ್ಲಿ 46821ನ್ನು ಗುರಿ ಹೊಂದಿದೆ. ಅದರಲ್ಲಿ ಇಲ್ಲಿಯವರೆಗೂ 46821 ಗುರಿ ಶೇ.100 ಪ್ರತಿಶತಃ ಸಾಧಿಸಲಾಗಿರುತ್ತದೆ. ಇದರ ಜತೆಗೆ ಮುಂದುವರಿದು ಆಗಸ್ಟ್ 2023ರಿಂದ ಫೆಬ್ರವರಿ 2026 ಮಾಹೆಯ ಅಂತ್ಯಕ್ಕೆ ಇಲ್ಲಿಯವರೆಗೆ 46927 ಫಲಾನುಭವಿಗಳಿಗೆ 2475782000ವರೆಗೆ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿರುತ್ತದೆಂದರು.

ನೋಂದಣಿಯಾದ ಫಲಾನುಭವಿಗಳು ಹಿಂದುಳಿದ ವರ್ಗ 11865, ಇತರೆ 15529, ಅಲ್ಪಸಂಖ್ಯಾತರು ಪರಿಶಿಷ್ಟ ವರ್ಗ 4834, ಪರಿಶಿಷ್ಟಜಾತಿ 10851 ಒಟ್ಟು 46821 ಫಲಾನುಭವಿಗಳು ಯೋಜನೆಯ ಅನುಕೂಲವನ್ನು ಪಡೆಯುತ್ತಿದ್ದಾರೆ. ಹಣ ಸಂದಾಯವಾಗದ ಫಲಾನುಭವಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಭೇಟಿ ನೀಡಿ ಪರಿಹರಿಸಿಕೊಳ್ಳಲು ತಿಳಿಸಿದರು.



ಅನ್ನಭಾಗ್ಯ ಯೋಜನೆ : ಅನ್ನಭಾಗ್ಯ ಯೋಜನೆಯಲ್ಲಿ ಒಟ್ಟು 88 ನ್ಯಾಯಬೆಲೆ ಅಂಗಡಿಗಳಿವೆ. ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬಗಳು 57156 ಅದರಲ್ಲಿ ಎ.ಎ.ವೈ ಕಾರ್ಡ್ 3132 ಬಿಪಿಎಲ್ ಕಾರ್ಡ್‌ಗಳು 45919 ಹಾಗೂ ಎಪಿಲ್ ಕಾರ್ಡ್ ಗಳು 8105 ದೇವನಹಳ್ಳಿ ತಾಲೂಕಿನಾದ್ಯಾಂತ ವಿತರಿಸಲಾಗಿರುತ್ತದೆ. ಮೇ2026 ಮತ್ತು ಜೂನ್ ಅಂತ್ಯಕ್ಕೆ 1091328 ಕಿಂಟ್ವಾಲ್ ಅಕ್ಕಿಯನ್ನು ವಿತರಿಸಲಾಗಿರುತ್ತದೆಂದು ವಿವರಿಸಿದರು.

ಶಕ್ತಿ ಯೋಜನೆ : ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಲ್ಲಿ ಒಂದಾದ ಶಕ್ತಿಯೋಜನೆ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲಿಕ್ಕೆ ಮತ್ತು ಸಬಲೀಕರಣಕ್ಕೆ ಸಹಕಾರಿಯಾಗಿದೆ. ಯೋಜನೆ ಸದ್ಬಳಕೆಯಾಗಿದೆ. ದೇವನಹಳ್ಳಿ ತಾಲೂಕಿನಲ್ಲಿ ಜೂನ್ 2023ರಿಂದ ಇಲ್ಲಿಯವರೆಗೆ 34,60,7,271 ಫಲಾನುಭವಿಗಳು ಶಕ್ತಿ ಯೋಜನೆಯ ಲಾಭವನ್ನು ಪಡೆದಿದ್ದಾರೆ. ಇದರಿಂದ ಸರ್ಕಾರಕ್ಕೆ ಒಟ್ಟು ಖರ್ಚು 70,94,47,759 ರೂ. ಆಗಿರುತ್ತದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದರು.

ಗೃಹಜ್ಯೋತಿ ಯೋಜನೆ: ಗೃಹಜ್ಯೋತಿ ಯೋಜನೆಯಲ್ಲಿ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಠ 200 ಯೂನಿಟ್ ಗಳವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರು ಮಾಸಿಕ ಸರಾಸರಿ ಬಳಕೆಯ ಯೂನಿಟ್ ಗಳ ಮೇಲೆ ಶೇಕಡಾ10ರಷ್ಟು ಹೆಚ್ಚಿನ ವಿದ್ಯುತ್ ಬಳಕೆಯ ಮಿತಿಯನ್ನು ಅನುಮತಿಸಿ ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲಾಗುತ್ತದೆ. 200 ಯೂನಿಟ್ ಒಳಗೆ ವಿದ್ಯುತ್ ಉಪಯೋಗಿಸುತ್ತಿರುವ ಸ್ಥಾವರಗಳು 61651. ನೋಂದಾಯಿಸಲಾಗಿರುವ ಸ್ಥಾವರಗಳು 60652 ಸಾಧನೆ ಶೇ.98.38 ಗುರಿಯನ್ನು ಸಾಧಿಸಲಾಗಿರುತ್ತದೆ.

ದೇವನಹಳ್ಳಿ ತಾಲೂಕಿನಲ್ಲಿ ಇದುವರೆಗೂ ಯುವನಿಧಿ ಯೋಜನೆಯಲ್ಲಿ 817 ಪುರುಷರು, 304 (ಪದವಿ / ಡಿಪ್ಲೋಮಾ) ಮಹಿಳೆಯರು 630 ಜನರು ನೋಂದಾಯಿಸಿಕೊಂಡು ಪ್ರತಿ ತಿಂಗಳು ಯೋಜನೆಯ ಲಾಭವನ್ನು ಪಡೆಯುತ್ತಿದ್ದಾರೆ. ಹಾಗೂ ಪ್ರತಿ ತಿಂಗಳು ಯುವನಿಧಿಯಲ್ಲಿ ಕೆಲಸ ಸಿಗುವವರೆಗೂ ಯುವನಿಧಿ ಪೋರ್ಟಲ್ ನಲ್ಲಿ ಸ್ವಯಂಕೃತವಾಗಿ ದೃಢೀಕರಣವನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನಾ ಕಮಿಟಿ ಸದಸ್ಯರಾ ಮುನೇಗೌಡ , ಜಿ.ಗೋಪಾಲಕೃಷ್ಣ, ಹನೀಫುಲ್ಲಾ , ಚೈತ್ರಾವೀರೇಗೌಡ, ಅಶ್ವತ್ತಮ, ಬಿ .,ವೀರಣ್ಣಗೌಡ , ಬಿ.ಎ .ಬೈರೇಗೌಡ, ಮುನಿರಾಜು, ಮಂಜುನಾಥ್ , ಮುನೇಗೌಡ, ಮಂಜುನಾಥ, ರಮೇಶ್, ಸಾಗರ್ ಎಸ್ .ಪಾಷಾ, ಡಿಪ್ಲೋಮ್ಯಾನೇಜರ್ ಶೋಭಾ, ಕೌಶಲಾಭಿವೃದ್ಧಿ ಇಲಾಖೆ ನಾಗರಾಜ್, ಲಕ್ಷ್ಮೀಕಾಂತ್, ಎಇಇ ಎನ್ ಶ್ರೀಧರ್ ಆಹಾರ ಶಿರಾಸ್ತೆದಾರ್ ಮಹೇಶ್, ಸಹಾಯಕ ನಿರ್ದೇಶಕರು ದುರುಗಪ್ಪ, ಸಹಾಯಕ ನಿರ್ದೇಶಕರು ಪುನೀತ್, ರಮ್ಯಾ, ಮಂಜುನಾಥ , ತಾಪಂ ಇಒ ಶ್ರೀನಾಥಗೌಡ , ಸಿಬ್ಬಂದಿಗಳಿದ್ದರು.

ಪಾರ್ಕಿಂಗ್ ಶುಲ್ಕದ ಹೆಸರಲ್ಲಿ ಸುಲಿಗೆಗೆ ನಾಗರಿಕರ ಕಿಡಿ

ವಾಹನ ಸವಾರರಿಗೆ ಸುಂಕದ ಕಿರಿಕಿರಿ

• **ದೊಡ್ಡಬಳ್ಳಾಪುರ:** ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ಸಂಪರ್ಕ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ನಿತ್ಯ ಸುಂಕದ ಕಿರಿಕಿರಿ ಎದುರಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ದೇವಸ್ಥಾನಕ್ಕೆ ಭೇಟಿ ನೀಡದ ಸಾಮಾನ್ಯ ಪ್ರಯಾಣಿಕರ ವಾಹನಗಳಿಗೂ ಪಾರ್ಕಿಂಗ್ ಶುಲ್ಕದ ಹೆಸರಿನಲ್ಲಿ ರಸ್ತೆ ಮಧ್ಯದಲ್ಲೇ ಹಣ ವಸೂಲಿ ಮಾಡಲಾಗುತ್ತಿದೆ ಎಂದು ವಾಹನ ಸವಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಘಾಟಿ ಮಾರ್ಗವು ಸುತ್ತಮುತ್ತಲಿನ ಗ್ರಾಮಗಳು, ಕೃಷಿ ಜಮೀನುಗಳು ಹಾಗೂ ಗೌರಿಬಿದನೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಸಂಪರ್ಕ ರಸ್ತೆ ಆಗಿದೆ. ಪ್ರತಿದಿನ ನೂರಾರು ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ಆದರೆ ದೇವಸ್ಥಾನ ಪಾರ್ಕಿಂಗ್ ಶುಲ್ಕದ ಹೆಸರಿನಲ್ಲಿ ರಸ್ತೆ ಬಳಿಯೇ ವಾಹನಗಳನ್ನು ತಡೆದು ಹಣ ವಸೂಲಿ ಮಾಡುತ್ತಿರುವ ಕ್ರಮ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎನ್ನಲಾಗಿದೆ.

ಈ ಕುರಿತು ಘಾಟಿ ಸುಬ್ರಹ್ಮಣ್ಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅವರಿಗೆ ದೂರು ಸಲ್ಲಿಸಿರುವ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ನರೇಂದ್ರಕುಮಾರ್ ಅವರು ಮಾತನಾಡಿ, ರಸ್ತೆ ಮಧ್ಯದಲ್ಲೇ ವಾಹನಗಳನ್ನು ತಡೆದು ಯಾವುದೇ ಗುರುತಿನ ಚೀಟಿ ಧರಿಸದ ಕೆಲವರು ಸುಂಕ ವಸೂಲಿಗೆ ಮುಂದಾಗುತ್ತಿದ್ದಾರೆ. ನಾವು ದೇವಸ್ಥಾನಕ್ಕೆ ತೆರಳುವ ಪ್ರಯಾಣಿಕರಲ್ಲ, ನೆಲ್ಲುಕುಂಟೆ ಗ್ರಾಮದ ನಿವಾಸಿಗಳು ಎಂದು ತಿಳಿಸಿದರೂ ಗೂಂಡಾ ವರ್ತನೆ ತೋರಿ ಹಣ ವಸೂಲಿಗೆ ಯತ್ನಿಸಿದ್ದಾರೆಂದು ದೂರಿದರು.

ಯುವ ಮುಖಂಡ ಉದಯ ಆರಾಧ್ಯ ಮಾತನಾಡಿ, ಘಾಟಿ ರಸ್ತೆ ಸಾರ್ವಜನಿಕರ ಸಂಚಾರಕ್ಕೆ ಇರುವ ಪ್ರಮುಖ ಮಾರ್ಗ. ದೇವಸ್ಥಾನಕ್ಕೆ ಭೇಟಿ ನೀಡದ ಸಾಮಾನ್ಯ ವಾಹನ ಸವಾರರಿಗೂ ರಸ್ತೆ ಮಧ್ಯದಲ್ಲೇ ಸುಂಕ ವಸೂಲಿ ಮಾಡುವುದು ಸರಿಯಲ್ಲ, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ರೀತಿಯ ಅನಧಿಕೃತ ವಸೂಲಿ ತಕ್ಷಣ ನಿಲ್ಲಬೇಕು. ಸಂಬಂಧಪಟ್ಟ ಅಧಿಕಾರಿಗಳು ಮಧ್ಯಪ್ರವೇಶಿಸಿ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

> **ಕಾನೂನು ಕ್ರಮಕ್ಕೆ ಆಗ್ರಹ**
>
> ಈ ರೀತಿಯ ಅನಧಿಕೃತ ವಸೂಲಿ ಹಾಗೂ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆ ತಪ್ಪಿಸಲು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಸಾರ್ವಜನಿಕರಿಂದ ಕೇಳಿಬಂದಿದೆ.

ಬೇಲೂರು ಗ್ರಾಪಂ ಮೇಲೆ ಲೋಕಾ ದಾಳಿ: ಬೆದರಿದ ಅಧಿಕಾರಿಗಳು

ಹಲವು ಕಡತ ಬಚ್ಚಿಡಲು ಯತ್ನ

• **ಮಂಡ್ಯ :** ಉಪಲೋಕಾಯುಕ್ತರ ದಾಳಿಗೆ ಹೆದರಿ ತಾಲೂಕಿನ ಬೇಲೂರು ಗ್ರಾಮ ಪಂಚಾಯಿತಿ ಅಧಿಕಾರಿಗಳು ಇ-ಸ್ವತ್ತುಗಳ ಕಡತಗಳು ಸೇರಿದಂತೆ ನಿವೇಶನ ವರ್ಗೀಕರಣ ಕಡತ, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರಿಂದ ಅನುಮೋದನೆಗೊಂಡಿರುವ ಯೋಜನಾ ವಿನ್ಯಾಸ ನಕ್ಷೆ ಕಡ ತಗಳು ಸೇರಿದಂತೆ ಹಲವಾರು ಕಡತಗಳನ್ನು ಬಚ್ಚಿಟ್ಟು ತಪ್ಪಿಸಿಕೊಳ್ಳಲು ಯತ್ನ ನಡೆಸಿರುವ ಪ್ರಸಂಗ ನಡೆಯಿತು.

ಗುರುವಾರ ಮತ್ತು ಶುಕ್ರವಾರ ನಗರದಲ್ಲಿ ಉಪಲೋಕಾಯುಕ್ತ ಬಿ.ವೀರಪ್ಪ ಅವರು ಸಾರ್ವಜನಿಕರಿಂದ ದೂರು ಅರ್ಜಿ ವಿಚಾರಣೆ ನಡೆಸಲು ನಗರಕ್ಕೆ ಬುಧವಾರ ಸಂಜೆ ಆಗಮಿಸಿದ್ದು ದಿಢೀರನೆ ಬೇಲೂರು ಗ್ರಾಮ ಪಂಚಾಯಿತಿಗೆ ತೆರಳಿ ಕಡತಗಳ ಪರಿಶೀಲನೆ ನಡೆಸಿದರು.

ಈ ಸಮಯದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಕಡತಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು ಕಂಡುಬಂದಿತು. ಪ್ರತಿಯೊಂದು ದಾಖಲೆಗಳ ಬಗ್ಗೆ ಉಪಲೋಕಾಯುಕ್ತರು ಕೇಳಿದ ಪ್ರಶ್ನೆಗಳಿಗೆ ಪಿಡಿಒ ಸಿದ್ದರಾಜು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಆಕಾಶ್ ಹಾಗೂ ಸಿಬ್ಬಂದಿಗಳು ಉತ್ತರ ನೀಡಲು ತಡವರಿಸಿದರು. ಯಾವುದೇ ಕರೆತಗಳನ್ನು ಕೇಳಿದರೂ ಅವುಗಳನ್ನು ಒದಗಿಸದೆ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದರು.

ಪಂಚಾಯಿತಿಯಲ್ಲಿ ಕಡತಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿರುವ ಸಂಬಂಧ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ , ಡಾ. ಶಿವಲಿಂಗಯ್ಯ ಮತ್ತು ಲಕ್ಷ್ಮಿ ಅವರನ್ನು ಉಪಲೋಕಾಯುಕ್ತರು ತರಾಟೆ ತೆಗೆದುಕೊಂಡರು. ಪಂಚಾಯಿತಿಯಲ್ಲಿ ಕಡತಗಳ ನಿರ್ವಹಣೆ ಬಗ್ಗೆ ನೀವೇನು ಪರಿಶೀಲನೆ ನಡೆಸಿದ್ದೀರಿ. ಯಾವುದೇ ಕಡತ ಕೇಳಿದರೂ ಇಲ್ಲ ಎನ್ನುವ ಉತ್ತರ ಬರುತ್ತಿದೆ. ಇದುವರೆಗೆ ಪಂಚಾಯಿತಿಗೆ ಭೇಟಿ ನೀಡಿ ಯಾವ ಫೈಲ್ ನೋಡಿದ್ದೀರಿ, ಯಾವ್ಯಾವ ಕಡತಗಳನ್ನು ಎಷ್ಟರಮಟ್ಟಿಗೆ ನಿರ್ವಹಣೆ ಮಾಡಿದ್ದಾರೆ ಎಂಬುದನ್ನು ಪರಿಶೀಲಿಸಿದ್ದೀರಿ, ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ. ಇದೇನಾ ನೀವು ಆಡಳಿತ ನಡೆಸುವ ರೀತಿ ಎಂದು ಖಾರವಾಗಿ ಪ್ರಶ್ನಿಸಿದರು.

ನನಗೆಲ್ಲಾ ಗೊತ್ತಿದೆ. ಅಧಿಕಾರಿಗಳು ತಪ್ಪಿಸಿಕೊಳ್ಳುವ ಸಲುವಾಗಿ ಕಡತಗಳನ್ನು ಉದ್ದೇಶಪೂರ್ವಕವಾಗಿ ಬಚ್ಚಿಡುವ ಪ್ರಯತ್ನ ನಡೆಸಿದ್ದಾರೆ. ಇದೆಲ್ಲವೂ ವ್ಯವಸ್ಥಿತ ಸಂಚು. ಯಾವ ಕಡತಗಳನ್ನು ನೀಡದೆ ನಿರ್ವಹಣೆಯನ್ನು ಮಾಡದೆ ನಮ್ಮನ್ನೇ ದಿಕ್ಕು ತಪ್ಪಿಸುತ್ತಿದ್ದೀರಾ. ನಾನು ಇದನ್ನು ಇಲ್ಲಿಗೆ ಬಿಡುವುದಿಲ್ಲ, ಎಲ್ಲರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳುವೆ. ಕಡತಗಳನ್ನು ಹಾಜರುಪಡಿಸುವವರೆಗೆ ನಾನು ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಮಾರ್ನಿಂಗ್ ಶೋ

ಯುವಜನತೆಗೆ ಮೆಸೇಜು

ಕೀರ್ತಿ ಐ ಲವ್ ಯು

ಈಗಾಗಲೇ ಪ್ರೀತಿಯ ಕುರಿತಾದ ಹಲವಾರು ಚಲನಚಿತ್ರಗಳು ಬಂದಿದೆಯೊದರೂ, ನಾವು ಈ ಚಿತ್ರದ ಮೂಲಕ ಪ್ರೀತಿಯ ಬಗ್ಗೆ ಬೇರೆಯದೇ ವ್ಯಾಖ್ಯಾನ ಹೇಳಹೊರಟಿದ್ದೇವೆ. ಅದರಲ್ಲೂ ಈಗಿನ ಕಾಲದ ಯುವಜನತೆ ಚಿಕ್ಕ ವಯಸ್ಸಿನಲ್ಲೇ ಲವ್, ಡೇಟಿಂಗ್ ಅಂತ ಹೋಗ್ತಾರೆ, ಅದೆಲ್ಲಾ ತಪ್ಪು ಎಂದು ಅವರಲ್ಲಿ ಜಾಗೃತಿ ಮೂಡಿಸುವ ಚಿತ್ರವಿದು.



ಕನ್ನಡದಲ್ಲಿ ಪ್ರೀತಿಯ ಕುರಿತಾದ ಅನೇಕ ಚಲನಚಿತ್ರಗಳು ನಿರ್ಮಾಣವಾಗಿವೆ. ಆದರೆ ಒಂದರ ಹಾಗೆ ಒಂದು ಇರಲ್ಲ, ಅದೇ ರೀತಿ ಹೊಸಬರ ತಂಡವೊಂದು ಕೀರ್ತಿ ಐ ಲವ್ ಯು ಎಂಬ ಲವ್ ಜಾನರ್ ಚಲನಚಿತ್ರವೊಂದನ್ನು ತೆರೆಗೆ ತರುತ್ತಿದೆ. ಪೂಜಿತ ಎಸ್. ರಾವ್ ಅವರ ನಿರ್ಮಾಣದ ಈ ಚಿತ್ರಕ್ಕೆ ನಿರಂಜನ್ ಆರಾಧ್ಯ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ನಾಯಕನಾಗಿ ಪ್ರಜ್ಯೋತ್ ಎಸ್. ರಾವ್ ಅವರು ನಟಿಸಿದ್ದಾರೆ. ನಿಧಿಗೌಡ ಚಿತ್ರದ ನಾಯಕಿ. ಇತ್ತೀಚೆಗೆ ಈ ಚಿತ್ರದ ಮುದ್ದಾದ ಮೂಗುತಿ ಎಂಬ ಮೊದಲ ಹಾಡನ್ನು ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಪ್ರಚಾರಕ್ಕೆ ಚಾಲನೆ ನೀಡಿದೆ.

ಈ ಸಂದರ್ಭದಲ್ಲಿ ನಿರ್ದೇಶಕ ನಿರಂಜನ್ ಆರಾಧ್ಯ ಮಾತನಾಡುತ್ತ ನನ್ನ ನಿರ್ದೇಶನದ ಪ್ರಥಮ ಚಿತ್ರವಿದು. ನೃತ್ಯಕಲಾವಿದನಾಗಿದ್ದ ನನಗೆ ಮೊದಲಿಂದಲೂ ಸಿನಿಮಾ ನಿರ್ದೇಶನದ ಬಗ್ಗೆ ಆಸಕ್ತಿಯಿತ್ತು. ಅದು ಈ ಸಿನಿಮಾ ಮೂಲಕ ಈಡೇರಿದೆ, ಈಗಾಗಲೇ ಪ್ರೀತಿ, ಪ್ರೇಮದ ಕುರಿತಂತೆ ಹಲವಾರು ಚಿತ್ರಗಳು ಬಂದಿದೆಯಾದರೂ ನಾವು ಈ ಚಿತ್ರದಲ್ಲಿ ಪ್ರೀತಿಯ ಬಗ್ಗೆ ಬೇರೆಯದೇ ವ್ಯಾಖ್ಯಾನ ಹೇಳಿದ್ದೇವೆ. ಅದರಲ್ಲೂ, ಈಗಿನ ಕಾಲದ ಯುವಜನತೆ ಚಿಕ್ಕ ವಯಸ್ಸಿನಲ್ಲೇ ಲವ್, ಡೇಟಿಂಗ್ ಅಂತ ಹೋಗ್ತಾರೆ, ಅದೆಲ್ಲಾ ತಪ್ಪು ಎಂದು ಜಾಗೃತಿ ಮೂಡಿಸುವ ಚಿತ್ರವೂ ಹೌದು. ಅಭಿರಾಮ್ ಅವರ ಸಂಗೀತ ನಿರ್ದೇಶನದ ಮೂರು ಹಾಡುಗಳು ಚಿತ್ರದಲ್ಲಿದ್ದು, ಈ ಹಾಡಿಗೆ ಅರುಣ್ ಕುಮಾರ್ ಸಾಹಿತ್ಯ ಬರೆದಿದ್ದಾರೆ, ಅರ್ಫಾಜ್ ಉಲ್ಲಾಳ್ ಹಾಡಿದ್ದಾರೆ. ಈಗಾಗಲೇ ಕೀರ್ತಿ ಐ ಲವ್ ಯು ಚಿತ್ರದ ಬಹುತೇಕ ಚಿತ್ರೀಕರಣ ಮುಗಿದಿದೆ. ಜುಲೈ 31ರಂದು ನಮ್ಮ ಚಿತ್ರ ತೆರೆಗೆ ಬರುತ್ತಿದೆ ಎಂದು ಹೇಳಿದರು.

ನಾಯಕ ಪ್ರಜ್ಯೋತ್ ಎಸ್.ರಾವ್ ಮಾತನಾಡುತ್ತ ನಾನು ನಟನಾಗಲು ಕಿಚ್ಚ ಸುದೀಪ್ ಅವರೇ ಸ್ಫೂರ್ತಿ. ನನ್ನ ಅಕ್ಕ ಪೂಜಿತಾ ಎಸ್. ರಾವ್ ನನ್ನನ್ನು ಕಲಾವಿದನಾಗಿ ಬೆಳೆಸಲು ಈ ಚಿತ್ರಕ್ಕೆ ಬಂಡವಾಳ ಹಾಕಿದ್ದಾರೆ ಎಂದು ಹೇಳಿದರು. ನಾಯಕಿ ನಿಧಿಗೌಡ ತಮ್ಮ ಪಾತ್ರದ ಬಗ್ಗೆ ವಿವರಿಸಿದರು.

ನನ್ನ ತಮ್ಮ ಪ್ರಜ್ಯೋತ್‌ಗೆ ಮೊದಲಿನಿಂದಲೂ ನಟನಾಗಬೇಕೆಂಬ ಆಸೆ. ಅವನ ಆಸೆಯನ್ನು ಈಡೇರಿಸಲೆಂದೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇನೆ, ಮುಖ್ಯವಾಗಿ ಈಗಿನಕಾಲದ ಯುವಜನತೆ ನೋಡಲೇಬೇಕಾದ ಚಿತ್ರವಿದು ಎಂದು ನಿರ್ಮಾಪಕಿ ಪೂಜಿತಾ ಎಸ್. ರಾವ್ ಹೇಳಿದರು. ಸಂಗೀತ ನಿರ್ದೇಶಕ ಅಭಿರಾಮ್, ಛಾಯಾಗ್ರಾಹಕರಾದ ಅಭಿಷೇಕ್, ರೋಹಿತ್ ದನಿ, ಸಹ ನಿರ್ಮಾಪಕ ಯತೀಶ್‌ಕುಮಾರ್, ಐ ಟು ಐ ಇನ್ಫೋಟೆಕ್‌ನ ಶಮಂತ್ ಶೆಟ್ಟಿ, ನಟ ಹರೀಶ್‌ಕುಮಾರ್ ಹಾಗೂ ಕಾರ್ಯಕಾರಿ ನಿರ್ಮಾಪಕ ಲಿಯಾನ್‌ಗೌಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಶತದಿನೋತ್ಸವ ಸಂಭ್ರಮದಲ್ಲಿ ಮಗ್ಗಿಪುಸ್ತಕ

ಹರಿವರಾಸನಂ ಅವರ ಅವನಿ ಎಂಬ ಕಾದಂಬರಿಯನ್ನಾಧರಿಸಿ ನಿರ್ಮಾಣವಾದ ಚಿತ್ರ ಮಗ್ಗಿಪುಸ್ತಕ ಇದೀಗ ಯಶಸ್ವಿಯಾಗಿ ನೂರು ದಿನಗಳನ್ನು ಪೂರೈಸಿದೆ. ಈ ವರ್ಷ 100 ದಿನ ಪ್ರದರ್ಶನಗೊಂಡ ಮೊದಲ ಮಕ್ಕಳ ಚಿತ್ರ ಎಂಬ ಹೆಗ್ಗಳಿಕೆ ಈ ಚಿತ್ರದ್ದು. ಈ ಸಂಭ್ರಮಾಚರಣೆಯ ಸಮಾರಂಭವನ್ನು ಚಿತ್ರಪ್ರದರ್ಶನ ನಡೆಯುತ್ತಿರುವ ಭೂಮಿಕಾ ಥೇಟರಿನಲ್ಲೇ ಆಚರಿಸಲಾಯಿತು.





ಈ ಸಂದರ್ಭದಲ್ಲಿ ಚಿತ್ರದಲ್ಲಿ ಕೆಲಸ ಮಾಡಿದ ಕಲಾವಿದ, ತಂತ್ರಜ್ಞರೆಲ್ಲರಿಗೂ ಸ್ಮರಣ ಫಲಕ ವಿತರಿಸಲಾಯಿತು.

ಹರಿವರಾಸನಂ ಅವರೇ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ ಮಗ್ಗಿ ಪುಸ್ತಕ ಚಿತ್ರವನ್ನು ಚಿನ್ನಸ್ವಾಮಿ ಫಿಲಂಸ್ ಅಡಿಯಲ್ಲಿ ಚಿನ್ನಸ್ವಾಮಿ ಎತಿರಾಜ್ ಅವರು ನಿರ್ಮಿಸಿದ್ದಾರೆ. ರಾಜಶೇಖರ್ ದಾವಣಗೆರೆ, ಈಶ್ವರ ಮಂಜು, ನಾಗವೇಣಿ, ಡಾ.ಲಲಿತಾರಾವ್, ಸುನಿಗೌಡ ಕಣಕಪುರ, ನವೀನ್‌ಗೌಡ, ಶಶಿಕಾಂತ್ ವರದಹಳ್ಳಿ, ಎಂ. ಮಹೇಶ್ ಕೆ.ನಟರಾಜ್, ಎನ್. ನಾಗರಾಜ್ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ. ವೇದಿಕೆಯಲ್ಲಿ ಹಾಜರಿದ್ದ ಇವರೆಲ್ಲ ನಿರ್ದೇಶಕರ ಪ್ರಾಮಾಣಿಕ ಪ್ರಯತ್ನದ ಫಲವಾಗಿಯೇ ಈ ಯಶಸ್ಸು ಸಾಧ್ಯವಾಯಿತು ಎಂದು ಹೇಳಿದರು.

ನಿರ್ಮಾಪಕ ಚಿನ್ನಸ್ವಾಮಿ ಎತಿರಾಜ್ ಮಾತನಾಡಿ ಇವತ್ತಿನ ದಿನಗಳಲ್ಲಿ ಕನ್ನಡ ಚಿತ್ರವೊಂದು ನೂರು ದಿನ ಓಡಿದೆ ಎಂದರೆ ನಿಜಕ್ಕೂ ಅದೊಂದು ಮಿರಾಕಲ್. ಈ ಯಶಸ್ಸಿಗೆ ನಿರ್ದೇಶಕರ ನಿರಂತರ ಎಫರ್ಟ್ ಕಾರಣ. ಅವರಿಂದಲೇ ಇವತ್ತು ನಾವೆಲ್ಲ ಈ ವೇದಿಕೆಯಲ್ಲಿ ನಿಂತಿದ್ದೇವೆ. ಈ ಯಶಸ್ಸಿಗೆ ಸಹಕರಿಸಿದ ಎಲ್ಲ ತಂತ್ರಜ್ಞರು, ಕಲಾವಿದರಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದರು.

ನಿರ್ದೇಶಕ ಹರಿವರಾಸನಂ ಮಾತನಾಡುತ್ತ ಪ್ರೇಕ್ಷಕರು, ಚಿತ್ರತಂಡ ನೀಡಿದ ಸಹಕಾರ ಬೆಂಬಲದಿಂದಲೇ ಇವತ್ತು ನಮ್ಮ ಚಿತ್ರ ಗೆದ್ದಿದೆ ಎಂದು ಹೇಳಿದರು.

ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಹಿರಿಯ ಪೋಷಕ ಕಲಾವಿದೆ ಪಂಕಜಾ ಮಾತನಾಡಿ ಇವತ್ತು ನವರತ್ನಗಳ ಹಾಗೆ ಒಂಭತ್ತು ಜನ ನಿರ್ಮಾಪಕರು ಸೇರಿ ಒಂದೊಳ್ಳೆ ಸಿನಿಮಾ ಕೊಟ್ಟಿದ್ದಾರೆ. ನಿರ್ದೇಶಕರು ಮೊಬೈಲ್‌ನಿಂದ ನಮ್ಮ ಮಕ್ಕಳು ಹೇಗೆ ಹಾಳಾಗುತ್ತಿದ್ದಾರೆ ಎಂಬುದನ್ನು ಚಿತ್ರದಲ್ಲಿ ತೋರಿಸಿದ್ದಾರೆ. ಈ ಚಿತ್ರಕ್ಕೆ ರಾಜ್ಯಪ್ರಶಸ್ತಿ ಬರಬೇಕು ಎಂದು ಹೇಳಿದರು.

ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಕಥೆಯಿರೋ ಈ ಚಿತ್ರದಲ್ಲಿ ಮಕ್ಕಳ ಜತೆಗೆ ಪೋಷಕರಿಗೂ ಉತ್ತಮ ಸಂದೇಶವಿದೆ. ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು, ಪೋಷಕರು ಈ ಚಿತ್ರವನ್ನು ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಜೀವನವೇ ಒಂದು ಮಗ್ಗಿ ಪುಸ್ತಕವಿದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಅಜ್ಞಾನವನ್ನು ಗುಣಿಸಬೇಕು, ಜ್ಞಾನವನ್ನು ಭಾಗಿಸಬೇಕು ಎಂಬ ಸಂದೇಶವಿದೆ.

> **ಈ ವರ್ಷ 100 ದಿನ ಪೂರೈಸಿದ ಮೊದಲ ಚಿತ್ರ**

ಈ ಚಿತ್ರದ ಏಳು ಹಾಡುಗಳಿಗೆ ಯಶಸ್ ನಾಚಪ್ಪ ಅವರ ಸಂಗೀತ ನಿರ್ದೇಶನವಿದ್ದು, ಎಂ.ಎಂ.ಕೀರವಾಣಿ ಅವರು ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಬದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸ್ಪಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಗಾಯಕರು ಹಾಡಿದ್ದಾರೆ. ಈ ಚಿತ್ರವನ್ನು ಎಂ.ಪಿ. ಫಿಲಂಸ್ ಮೂಲಕ ಕೆ.ಮುನೀಂದ್ರ ಅವರು ರಿಲೀಸ್ ಮಾಡಿದ್ದರು. ಅವರ ಸಂಸ್ಥೆಯಡಿ ರಿಲೀಸಾಗಿ 100 ದಿನ ಪೂರೈಸಿದ ಮೊದಲ ಚಿತ್ರ ಮಗ್ಗಿಪುಸ್ತಕ.

ರಂಜನ್ ಕಾಸರಗೋಡು, ರಾಸ್ಮಿ ಶೇಖರ್, ಮೈಸೂರು ರಮಾನಂದ್, ಮಹೇಶ್, ಮೋಹಿತ್, ಮೂಗ್ ಸುರೇಶ್, ಪಂಕಜ, ಮೇಘಶ್ರೀ, ರಕ್ಷಾಗೌಡ, ಮಿಮಿಕ್ರಿ ಗೋಪಿ, ಚಂದ್ರಪ್ರಭ, ರಘು ರಾಮನಕೊಪ್ಪ ಹಾಗೂ ಇತರರು ಚಿತ್ರದಲ್ಲಿದ್ದಾರೆ.



ಹೊಂಬಾಳೆ ಫಿಲಂಸ್ ಜೂ.ಎನ್‌ಟಿಆರ್ ಹೊಸ ಪ್ರಾಜೆಕ್ಟ್ !

ಜೂನಿಯರ್ ಎನ್ಟಿಆರ್ ಅವರ ಹುಟ್ಟುಹಬ್ಬಕ್ಕೆ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ 'ಹೊಂಬಾಳೆ ಫಿಲಂಸ್' ಹಂಚಿಕೊಂಡಿರುವ ವಿಶೇಷ ಪೋಸ್ಟ್ ಮತ್ತು ಡ್ರಾಗನ್ ಚಿತ್ರದ ಗ್ಲಿಂಪ್ಸ್, ಸದ್ಯ ಚಿತ್ರರಂಗದಲ್ಲೇ ದೊಡ್ಡ ಸಂಚಲನಕ್ಕೆ ಕಾರಣವಾಗಿದೆ, ಇದು ಕೇವಲ ಶುಭಾಶಯದ ಪೋಸ್ಟ್ ಅಲ್ಲ, ಇದರ ಹಿಂದೆ ದೊಡ್ಡದೊಂದು ಸಿನಿಮೀಯ ಲೆಕ್ಕಾಚಾರ ಅಡಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ.



ಜೂನಿಯರ್ ಎನ್ಟಿಆರ್ ಮತ್ತು ಪ್ರಶಾಂತ್‌ನೀಲ್ ಕಾಂಬಿನೇಷನ್‌ನ ಡ್ರಾಗನ್ ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ಮತ್ತು ಎನ್ಟಿಆರ್ ಆರ್ಟ್ಸ್ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸುತ್ತಿವೆ. ಹೀಗಿದ್ದರೂ, ಹೊಂಬಾಳೆ ಫಿಲಂಸ್ ಈ ಚಿತ್ರದ ಗ್ಲಿಂಪ್ಸನ್ನು ತನ್ನದೇ ಚಿತ್ರದಂತೆ ಸಂಭ್ರಮಿಸಿ ಹಂಚಿಕೊಂಡಿರುವುದರ ಹಿಂದೆ ಪ್ರಶಾಂತ್‌ನೀಲ್ ಅವರ ಮೇಲಿರುವ ಗೌರವ ಕಾಣುತ್ತಿದೆ. ಹೊಂಬಾಳೆ ಸಂಸ್ಥೆಗೆ 'ಕೆಜಿಎಫ್' ಮತ್ತು ಸಲಾರ್‌ನಂತಹ ಯಶಸ್ವೀ ಚಿತ್ರಗಳನ್ನು ನೀಡಿದ ಪ್ರಶಾಂತ್‌ನೀಲ್ ಅವರ ವಿಷನ್‌ನ್ನು ಹೊಂಬಾಳೆ ಮತ್ತೊಮ್ಮೆ ಮುಕ್ತವಾಗಿ ಶ್ಲಾಘಿಸಿದೆ. ಈ ಪೋಸ್ಟ್ ನೋಡಿದ ಪ್ರೇಕ್ಷಕರು ಮತ್ತು ಟ್ರೇಡ್ ಅನಾಲಿಸ್ಟ್‌ಗಳು ಮುಖ್ಯ ಪ್ರಶ್ನೆಯನ್ನು ಎತ್ತುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಹೊಂಬಾಳೆ ಫಿಲಂಸ್ ಬ್ಯಾನರ್ ಅಡಿಯಲ್ಲಿ ಜೂನಿಯರ್ ಎನ್ಟಿಆರ್ ಸಿನಿಮಾ ಮಾಡಲಿದ್ದಾರೆಯೇ?

ಮೂಲಗಳ ಪ್ರಕಾರ, ಕೇವಲ ಜನ್ಮದಿನದ ಶುಭಾಶಯ ಕೋರುವುದಷ್ಟೇ ಈ ಪೋಸ್ಟ್ ಉದ್ದೇಶವಾಗಿರಲಿಲ್ಲ, ಹೊಂಬಾಳೆ ಫಿಲಂಸ್, ಮತ್ತು ಜೂನಿಯರ್ ಎನ್ಟಿಆರ್ ಅವರು ಭವಿಷ್ಯದಲ್ಲಿ ಬೃಹತ್ ಪ್ರಾಜೆಕ್ಟ್ ಮಾಡಲು ಈಗಾಗಲೇ ತೆರೆಮರೆಯಲ್ಲಿ ಮಾತುಕತೆ ನಡೆಸುತ್ತಿದ್ದಾರೆ ಎಂಬ ವದಂತಿಗಳಿವೆ. ಮತ್ತೊಂದೆಡೆ, ಹೊಂಬಾಳೆ ಫಿಲಂಸ್ ಇತ್ತೀಚೆಗೆ ತೆಲುಗಿನ ದೊಡ್ಡ ಚಿತ್ರಗಳ ಓವರ್‌ಸೀಸ್ ಹಾಗೂ ಕರ್ನಾಟಕದ ವಿತರಣಾ ಹಕ್ಕುಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ, ಡ್ರಾಗನ್ ಚಿತ್ರದ ಥಿಯೇಟ್ರಿಕಲ್ ರಿಲೀಸ್ ಮತ್ತು ವಿತರಣೆಯ ಜವಾಬ್ದಾರಿಯನ್ನು ಹೊಂಬಾಳೆ ವಹಿಸಿಕೊಳ್ಳುವ ಸಾಧ್ಯತೆಗಳೂ ದಟ್ಟವಾಗಿವೆ.



ಒಟ್ಟಿನಲ್ಲಿ, ಹೊಂಬಾಳೆ ಫಿಲಂಸ್ ಮತ್ತು ಜೂನಿಯರ್ ಎನ್ಟಿಆರ್ ಒಟ್ಟಿಗೆ ಕೈಜೋಡಿಸಿದರೆ ಅದು ಕೇವಲ ಒಂದು ಸಿನಿಮಾ ಪ್ರಕಟಣೆ ಮಾತ್ರ ಆಗಿರುವುದಿಲ್ಲ, ಬದಲಿಗೆ ಭಾರತೀಯ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆಗಳನ್ನು ಬರೆಯುವ ಭೂಕಂಪವಾಗಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಅಧಿಕೃತ ಘೋಷಣೆಗಳು ಸದ್ಯದಲ್ಲೇ ಹೊರಬೀಳಬಹುದು ಎನ್ನುವುದು ಚಿತ್ರರಂಗದ ಪ್ರಮುಖರು ನಿರೀಕ್ಷೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26